ಸೋಮವಾರ, ಅಕ್ಟೋಬರ್ 24, 2022 | ₹ 6.00
www.prajavani.net
/prajavani.net @prajavani /prajavani http://bit.ly/Prajavani

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಶಿಕ್ಷಣ
ಶಾಲೆಗಳಲ್ಲಿ ನೀಡುವ ಪ್ರಾಜೆಕ್ಟ್ ವರ್ಕ್ ಮಕ್ಕಳಲ್ಲಿನ ಸೃಜನಶೀಲತೆಯನ್ನು ಅರಳಿಸಲಿ


ದೀಪಾವಳಿ ಹಬ್ಬದ ಪ್ರಯುಕ್ತ ನಗರದ ಕೆ.ಆರ್. ಮಾರುಕಟ್ಟೆಯಲ್ಲಿ ಭಾನುವಾರ ಹೂವು–ಹಣ್ಣು ಹಾಗೂ ಇತರ ಪೂಜಾ ಹಾಗೂ ಅಲಂಕಾರಿಕ ಸಾಮಾಗ್ರಿಗಳನ್ನು ಖರೀದಿಸಲು ಕಿಕ್ಕಿರಿದು ಸೇರಿದ್ದ ನಾಗರಿಕರು —ಪ್ರಜಾವಾಣಿ ಚಿತ್ರ/ಎಸ್.ಕೆ. ದಿನೇಶ್


ನಗರದ ಮಲ್ಲೇಶ್ವರದ 8ನೇ ಅಡ್ಡರಸ್ತೆಯಲ್ಲಿ ಭಾನುವಾರ ಜನರು ಹಣ್ಣು–ಹೂವು ಖರೀದಿಯಲ್ಲಿ ತೊಡಗಿದ್ದರು. —ಪ್ರಜಾವಾಣಿ ಚಿತ್ರ/ಎಂ.ಎಸ್. ಮಂಜುನಾಥ್

ನಿರಂತರ ಮಳೆಯಿಂದಾಗಿ ಏರಿದ ಹೂಗಳ ದರ: ಪೂಜಾ ಸಾಮಗ್ರಿಗಳ ಖರೀದಿ ಭರಾಟೆ

ಮಾರುಕಟ್ಟೆಯಲ್ಲಿ ದೀಪಾವಳಿ 'ಪ್ರಭಾವಳಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ದೀಪಾವಳಿ ಹಬ್ಬದ ಆಚರಣೆಗೆ ಬೇಕಾದ ಅಗತ್ಯ ವಸ್ತುಗಳನ್ನು ಖರೀದಿಸಲು ಜನರು ನಗರದ ಮಾರುಕಟ್ಟೆಗಳಲ್ಲಿ ಭಾನುವಾರ ನೆರೆದಿದ್ದರು. ಬೆಳಕಿನ ಹಬ್ಬಕ್ಕೆ ಮೆರುಗು ಹೆಚ್ಚಿಸುವ ಹೂವು, ಹಣ್ಣು, ಹಣತೆ, ಅಲಂಕಾರಿಕ ವಸ್ತುಗಳ ಖರೀದಿಗೆ ಜನ ಮಳಿಗೆಗಳಲ್ಲಿ ಮುಗಿಬಿದ್ದಿರುವುದು ಸಾಮಾನ್ಯವಾಗಿತ್ತು.

ಕಳೆದ ಎರಡು ವರ್ಷ ಕೋವಿಡ್ ಕಾರಣದಿಂದ ಎಲ್ಲರೂ ಸರಳವಾದ ದೀಪಾವಳಿ ಆಚರಿಸಿದ್ದರು. ಈ ಬಾರಿ ಬೆಂಗಳೂರಿಗರಲ್ಲಿ ಹಬ್ಬದ ಸಂಭ್ರಮ ಮನೆ ಮಾಡಿದೆ. ಹಬ್ಬಕ್ಕೆ ಎಂದಿನಂತೆ ಹೂವಿನ ದರಗಳು ಏರಿಕೆ ಕಂಡಿವೆ. ಕೆ.ಆರ್.ಮಾರುಕಟ್ಟೆ, ಬಸವನಗುಡಿ, ಹೆಬ್ಬಾಳ, ರಾಜಾಜಿನಗರ, ಮಲ್ಲೇಶ್ವರ, ಜಯನಗರ ಸೇರಿ ನಗರದ ವಿವಿಧ ಭಾಗಗಳಲ್ಲಿ ಹೂವು ಹಾಗೂ ಅಲಂಕಾರಿಕ ವಸ್ತುಗಳನ್ನು ಮಾರಾಟ ಮಾಡುವ ಕಿರು ಮಾರುಕಟ್ಟೆಗಳು ತಲೆಎತ್ತಿವೆ.

ಸೋಮವಾರದಿಂದ ಬುಧವಾರದ ವರೆಗೆ ವಿವಿಧ ಧಾರ್ಮಿಕ ಆಚರಣೆಗಳು ನಡೆಯುವ ಕಾರಣದಿಂದ ಹಬ್ಬಕ್ಕೆ ಬೇಕಾದ ವಸ್ತುಗಳನ್ನು ಸಾರ್ವಜನಿಕರು ಭಾನುವಾರವೇ ಖರೀದಿಸಿದರು.

'ದೀಪಾವಳಿಗೆ ಹೆಚ್ಚು ಖರೀದಿಯಾಗುವುದು ಸೇವಂತಿಗೆ ಹಾಗೂ ಚೆಂಡು ಹೂ. ಆದರೆ, ಈ ಹಬ್ಬಕ್ಕೆ ಗುಣಮಟ್ಟದ ಹೂಗಳು ಮಾರುಕಟ್ಟೆಗೆ ಬರುತ್ತಿಲ್ಲ. ಮಳೆಯಿಂದಾಗಿ ಸೇವಂತಿಗೆ ಹಾಗೂ ಚೆಂಡು ಹೂವಿನ ಬೆಳೆಗಳು ಭಾರಿ ಹಾನಿಗೆ ಒಳಗಾಗಿವೆ. ಹಾಗಾಗಿ ಬೆಲೆಗಳು ಅಷ್ಟೇನೂ ಏರಿಕೆಯಾಗಿಲ್ಲ. ಉಳಿದ ಹೂಗಳ ದರ ಎಂದಿನಂತೆ ಸ್ವಲ್ಪ ಹೆಚ್ಚಾಗಿದೆ' ಎಂದು ಕೆ.ಆರ್. ಮಾರುಕಟ್ಟೆಯ ಹೂವಿನ ವರ್ತಕ ನಾರಾಯಣ ತಿಳಿಸಿದರು.

ತರಕಾರಿ ದರ
(ಕೆ.ಆರ್. ಮಾರುಕಟ್ಟೆಯಲ್ಲಿ ಪ್ರತಿ ಕೆ.ಜಿಗೆ)

ತರಕಾರಿ	ಕಳೆದ ವಾರ	ಈ ವಾರ
ಬಟಾಣಿ	100	120
ಬೆಳ್ಳುಳ್ಳಿ	40	50
ಟೊಮೆಟೊ	20	30
ಕ್ಯಾರೆಟ್	50	60
ಶುಂಠಿ	40	50
ಈರುಳ್ಳಿ	20	30
ಬೀನ್ಸ್	40	50
ಬದನೆ	40	54
ಮೆಣಸಿನಕಾಯಿ	50	60
ಬೆಂಡೆಕಾಯಿ	30	40
ಹೂಕೋಸು	40	50
ಆಲೂಗಡ್ಡೆ	30	40
ಕುಂಬಳಕಾಯಿ	50	40
ಸೊಪ್ಪು ದರ ಚಿಲ್ಲರೆ(ಕಟ್ಟಿಗೆ)		
ಮೆಂತ್ಯೆ	10	20
ಕೊತ್ತಂಬರಿ	20	30
ಸಬ್ಬಕ್ಕಿ	10	20
ಪಾಲಾಕ್	10	20
ದಂಟು	15	25

ದೀಪಾವಳಿ ವಿಶೇಷ

ಮಾವಿನ ತೋರಣ ಜೋಡಿಗೆ	20
ದರ್ಬೆ ಕಟ್ಟಿಗೆ	100
ಬಾಳೆ ಕಂದು ದೊಡ್ಡ ಗಾತ್ರದ ಜೋಡಿಗೆ	150
ವೀಳ್ಯದೆಲೆ 100ಕ್ಕೆ	100
ಹಸಿ ಅಡಿಕೆ ಬೆಟ್ಟ 1ಕ್ಕೆ	5
ನಿಂಬೆ ಹಣ್ಣು 10ಕ್ಕೆ	20

ಹಣ್ಣು
ಕೆ.ಆರ್. ಮಾರುಕಟ್ಟೆಯ ಚಿಲ್ಲರೆ ದರ

ಸೇಬು	80	100
ದಾಳಿಂಬೆ	70	80
ಕಿತ್ತಳೆ	70	50
ಸಪೋಟ	40	40
ಸೀತಾಫಲ	40	50
ಮೂಸಂಬಿ	50	60
ಅನಾನಸ್	40	50
ಏಲಕ್ಕಿ ಬಾಳೆ	50	60

ಹೂವಿನ ದರಪಟ್ಟಿ
(ಪ್ರತಿ ಕೆ.ಜಿಗೆ ₹ಗಳಲ್ಲಿ)

ಮಲ್ಲಿಗೆ	1,200
ಕನಕಾಂಬರ	2,000
ಗುಲಾಬಿ	300
ಸೇವಂತಿಗೆ	180
ಸುಗಂಧರಾಜ	200
ಚೆಂಡುಹೂವು	100

ಹಬ್ಬದ ನಿಮಿತ್ತ ಹೂವಿಗೆ ಬೇಡಿಕೆ ಹೆಚ್ಚಾಗಿದೆ. ದುಂಡು ಮಲ್ಲಿಗೆ, ಕನಕಾಂಬರ ಹೂವಿನ ದರಗಳು ಹೆಚ್ಚಾಗಿವೆ. ನಾಳೆ ಮತ್ತಷ್ಟೂ ದರ ಏರಿಕೆಯಾಗಲಿವೆ.
ನಾರಾಯಣ, ಹೂವಿನ ವ್ಯಾಪಾರಿ


ದೀಪಾವಳಿ ಹಬ್ಬದ ಪ್ರಯುಕ್ತ ನಗರದ ಸಂಪಿಗೆ ರಸ್ತೆಯ ಅಂಗಡಿಯೊಂದರಲ್ಲಿ ಜನರು ವಿವಿಧ ವಿನ್ಯಾಸದ ದೀಪಗಳು ಮತ್ತು ಆಕಾಶ ಬುಟ್ಟಿಗಳನ್ನು ಖರೀದಿಸಿದರು —ಪ್ರಜಾವಾಣಿ ಚಿತ್ರ

ಪೂಜಾ ಸಾಮಗ್ರಿಗಳ ಖರೀದಿ ಭರಾಟೆ: ದೀಪಾವಳಿಯನ್ನು ವಿವಿಧ ಸಮುದಾಯಗಳಲ್ಲಿ ತಮ್ಮದೇ ವಿಶೇಷ ಶೈಲಿಗಳಲ್ಲಿ ಆಚರಿಸಲಾಗುತ್ತದೆ. ಬಹುತೇಕರು ಹಿಂದಿನಿಂದಲೂ ಈ ಹಬ್ಬಕ್ಕೆ ನೋಮುವ ಸಂಪ್ರದಾಯ ಉಳಿಸಿಕೊಂಡಿದ್ದಾರೆ. ಇದಕ್ಕೆಂದೇ ಕೈಗೆ ನೋಮುದಾರ ಕಟ್ಟಿಕೊಂಡು ಆಚರಣೆಯಲ್ಲಿ ತೊಡಗುತ್ತಾರೆ.

ಪೂಜೆಯ ವೇಳೆ ನೋಮುದಾರ, ಅರಿಶಿನ-ಕುಂಕುಮ, ಅಡಿಕೆ, ವೀಳ್ಯದ ಎಲೆಗಳನ್ನು ಬಾಗಿನ ರೂಪದಲ್ಲಿ ಪ್ರಧಾನವಾಗಿ ಇಡುತ್ತಾರೆ. ಹಾಗಾಗಿ, ಪೂಜಾ ಸಾಮಗ್ರಿಗಳ ಮಳಿಗೆಗಳ ಬಳಿಯೂ ಜನರ ದಂಡು ಬೀಡುಬಿಟ್ಟಿತ್ತು.

ಹಣತೆ ವೈವಿಧ್ಯ

ಕೋವಿಡ್ ಕಾರಣದಿಂದ ಕಳೆದ ಎರಡು ವರ್ಷಗಳಿಂದ ಮಂಕಾಗಿದ್ದ ಬೆಳಕಿನ ಹಬ್ಬ ದೀಪಾವಳಿ ಸಂಭ್ರಮ ಇಂದಿನಿಂದಲೇ ಸಿದ್ಧತೆಗಳು ಜೋರಾಗಿವೆ. ಮನೆಯಲ್ಲಿ ಖುಷಿ ಆಚರಣೆಗೆ ಸಿದ್ಧತೆ ಶುರುವಾಗಿದೆ. ದೀಪಾವಳಿ ಹಬ್ಬಕ್ಕೆ ಹಣತೆಗಳು ಬೇಕೇ ಬೇಕು. ಹಣತೆಗಳ ಬೆಳಕು ಮನೆಯಲ್ಲಿ ಇಲ್ಲದೇ ಇದ್ದಲ್ಲಿ ಹಬ್ಬವೇ ಅಪೂರ್ಣ ಎನ್ನುವ ಭಾವನೆ ಜನರದು. ಈಗಾಗಲೇ ಚೀನಾದ ಆಕಾಶ ಬುಟ್ಟಿಗಳು ಮತ್ತು ಇತರೆ ಅಲಂಕಾರಿಕ ವಸ್ತುಗಳು ಗ್ರಾಹಕರನ್ನು ಆಕರ್ಷಿಸುತ್ತಿವೆ.

ದೀಪಾವಳಿಯ ಸೂಚಕವಾಗಿ ಮನೆಯ ಹೊರ ಮತ್ತು ಒಳಭಾಗಗಳಲ್ಲಿ ದೀಪಗಳನ್ನು ಬೆಳಗುವುದರಿಂದ ಮಣ್ಣಿನ ಹಣತೆಗಳನ್ನು ರಸ್ತೆ ಬದಿಗಳಲ್ಲಿ ರಾಶಿ ಹಾಕಲಾಗಿದ್ದು, ಹಬ್ಬಕ್ಕಾಗಿ ಸಿದ್ಧಪಡಿಸಿರುವ ತರಹೇವಾರಿ ವಿನ್ಯಾಸದ ಹಣತೆಗಳು ಜನರನ್ನು ಆಕರ್ಷಿಸುತ್ತಿದ್ದವು. ದೀಪವೊಂದರ ಬೆಲೆ ₹5ರಿಂದ ಆರಂಭಗೊಂಡು ₹300ವರೆಗೆ ಮಾರಾಟವಾಗುತ್ತಿದೆ.

ಸುದ್ದಿ 2 ನಿಮಿಷ

ಕೋಟಿ ಗಾಯನ: 60 ಲಕ್ಷ ನೋಂದಣಿ

ಬೆಂಗಳೂರು: ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಇದೇ 28 ರಂದು ಆಯೋಜಿಸಿರುವ 'ಕೋಟಿ ಕಂಠ ಗಾಯನ' ಕಾರ್ಯಕ್ರಮಕ್ಕೆ ದೇಶ-ವಿದೇಶಗಳಿಂದ ಉತ್ತಮ ಸ್ಪಂದನೆ ವ್ಯಕ್ತವಾಗಿದ್ದು, ಈಗಾಗಲೇ 60 ಲಕ್ಷಕ್ಕೂ ಅಧಿಕ ಮಂದಿ ಹೆಸರು ನೋಂದಾಯಿಸಿಕೊಂಡಿದ್ದಾರೆ.

ಈ ಕಾರ್ಯಕ್ರಮಕ್ಕೆ ಇಲಾಖೆ ಪ್ರತ್ಯೇಕ ಕ್ಯೂಆರ್ ಕೋಡ್ ರಚಿಸಿದೆ. ಇದರಿಂದಾಗಿ 29 ರಾಜ್ಯ ಹಾಗೂ 25 ರಾಷ್ಟ್ರಗಳಿಂದ ಕನ್ನಡ ಪ್ರೇಮಿಗಳು ಹೆಸರು ನೋಂದಾಯಿಸಿಕೊಂಡಿದ್ದಾರೆ. ಆದರೆ, ಕನ್ನಡ ಚಿತ್ರರಂಗದಿಂದ ನೀರಸ ಪ್ರತಿಕ್ರಿಯೆ ವ್ಯಕ್ತವಾಗಿದೆ.

'ಕಾರ್ಯಕ್ರಮದ ಬಗ್ಗೆ ಚಲನಚಿತ್ರ ವಾಣಿಜ್ಯ ಮಂಡಳಿಗೆ ಪತ್ರ ಬರೆದು, ಮನವಿ ಮಾಡಲಾಗಿದೆ. ಹಲವು ನಟರಿಗೆ ಖುದ್ದಾಗಿ ಕರೆ ಮಾಡಿ, ವಿನಂತಿಸಿಕೊಳ್ಳಲಾಗಿದೆ. ಕಾರ್ಯಕ್ರಮದ ವಿಡಿಯೊ ಸಂದೇಶ ನೀಡಲು ಕೆಲ ಕಲಾವಿದರು ಸಂಭಾವನೆ ಕೇಳಿದ್ದಾರೆ. ಕನ್ನಡದ ಕೆಲಸಕ್ಕೆ, ಕನ್ನಡದ ಹಾಡಿಗೆ ಧ್ವನಿಯಾಗುವುದಕ್ಕೆ ಚಿತ್ರರಂಗ ನಿರಾಸಕ್ತಿ ತೋರುತ್ತಿರುವುದು ಬೇಸರವನ್ನುಂಟು ಮಾಡಿದೆ' ಎಂದು ಇಲಾಖೆಯ ಅಧಿಕಾರಿಗಳು ತಿಳಿಸಿದ್ದಾರೆ.

'ಗಾಯನದಲ್ಲಿ ಭಾಗವಹಿಸಲು ಕರ್ನಾಟಕ ಮಾತ್ರವಲ್ಲ, ಅನ್ಯ ರಾಜ್ಯಗಳು ಹಾಗೂ ವಿದೇಶದಲ್ಲಿನ ಕನ್ನಡಿಗರೂ ಹೆಸರು ನೋಂದಾಯಿಸಿಕೊಂಡಿರುವುದು ಹೆಮ್ಮೆಯ ಸಂಗತಿ' ಎಂದು ಸಚಿವ ವಿ. ಸುನಿಲ್ ಕುಮಾರ್ ಹೇಳಿದರು.

ಸ್ತನ ಕ್ಯಾನ್ಸರ್: ಮಹಿಳೆಯರಿಂದ ಜಾಗೃತಿ



ಬೆಂಗಳೂರು: ಸ್ತನ ಕ್ಯಾನ್ಸರ್ ಜಾಗೃತಿ ಮಾಸದ ಪ್ರಯುಕ್ತ ಎಲೆಕ್ಟ್ರಾನಿಕ್ ಸಿಟಿಯ ಕಾವೇರಿ ಆಸ್ಪತ್ರೆ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ನೂರಕ್ಕೂ ಅಧಿಕ ಮಹಿಳಾ ಬೈಕ್ ಸವಾರರು ಸ್ತನ ಕ್ಯಾನ್ಸರ್ ಬಗ್ಗೆ ಜಾಗೃತಿ ಮೂಡಿಸಿದರು.

ಕಬ್ಬನ್ ರಸ್ತೆಯಲ್ಲಿ ಆರಂಭಗೊಂಡ ಬೈಕ್ ರ‍್ಯಾಲಿ, ಎಲೆಕ್ಟ್ರಾನಿಕ್ ಸಿಟಿಯಲ್ಲಿ ಅಂತ್ಯಗೊಂಡಿತು. ಸ್ತನ ಕ್ಯಾನ್ಸರ್ ತಡೆಗಟ್ಟುವಿಕೆ, ರೋಗ ನಿರ್ಣಯ, ಚಿಕಿತ್ಸೆಯ ಬಗ್ಗೆ ಸಾರ್ವಜನಿಕರಿಗೆ ಅರಿವು ಮೂಡಿಸಲಾಯಿತು.

ಆಸ್ಪತ್ರೆಯ ಕಾರ್ಯನಿರ್ವಾಹಕ ನಿರ್ದೇಶಕ ಎಸ್. ವಿಜಯ್ ಭಾಸ್ಕರನ್, 'ಪಾಶ್ಚಾತ್ಯ ಜೀವನ ವಿಧಾನದಿಂದಾಗಿ ಇತ್ತೀಚಿನ ದಿನಗಳಲ್ಲಿ ಸ್ತನ ಕ್ಯಾನ್ಸರ್ ಪ್ರಕರಣಗಳು ಹೆಚ್ಚುತ್ತಿವೆ. ಕಳಪೆ ಆಹಾರ ಪದ್ಧತಿ, ವಾಯುಮಾಲಿನ್ಯವೂ ಕ್ಯಾನ್ಸರ್‌ಗೆ ಕಾರಣವಾಗುತ್ತಿದೆ. 40 ವರ್ಷದೊಳಗಿನ ಮಹಿಳೆಯರಲ್ಲಿಯೂ ಸ್ತನ ಕ್ಯಾನ್ಸರ್ ಕಾಣಿಸಿಕೊಳ್ಳುತ್ತಿದೆ. ಪ್ರಾರಂಭಿಕ ಹಂತದಲ್ಲಿಯೇ ರೋಗ ಪತ್ತೆ ಮಾಡಿ, ಚಿಕಿತ್ಸೆ ಒದಗಿಸಿದಲ್ಲಿ ಕಾಯಿಲೆ ವಾಸಿ ಮಾಡಬಹುದು' ಎಂದು ಹೇಳಿದರು.

'ಸ್ತನ ಕ್ಯಾನ್ಸರ್ ಭಾರತೀಯ ಮಹಿಳೆಯರಲ್ಲಿ ಅತ್ಯಂತ ಸಾಮಾನ್ಯವಾದ ಕ್ಯಾನ್ಸರ್ ಆಗಿದೆ. ಪ್ರತಿ 28 ಮಹಿಳೆಯರಲ್ಲಿ ಒಬ್ಬರಿಗೆ ತಮ್ಮ ಜೀವಿತಾವಧಿಯಲ್ಲಿ ಸ್ತನ ಕ್ಯಾನ್ಸರ್ ಬರುವ ಸಾಧ್ಯತೆ ಇದೆ' ಎಂದರು.

ನಿಧನವಾರ್ತೆ

ಮಾಜಿ ಸಚಿವ ಸುಧೀಂದ್ರರಾವ್



ರಾಯಚೂರು: ಮಾಜಿ ಸಚಿವ ಸುಧೀಂದ್ರರಾವ್ ಕಸ್ಬೆ (83) ಅವರು ಸ್ವಗ್ರಾಮ ತಾಲ್ಲೂಕಿನ ಗಿಲ್ಲೇಸುಗೂರಿನಲ್ಲಿ ಭಾನುವಾರ ನಿಧನರಾದರು. ಅವರಿಗೆ ಇಬ್ಬರು ಪತ್ನಿಯರು, ಮೂವರು ಪುತ್ರರು ಮತ್ತು ಪುತ್ರಿ ಇದ್ದಾರೆ.

1978ರಲ್ಲಿ ಕಲ್ಮಲಾ ಕ್ಷೇತ್ರದ ಕಾಂಗ್ರೆಸ್ ಶಾಸಕರಾಗಿ ಆಯ್ಕೆಯಾಗಿದ್ದರು. 1980ರಲ್ಲಿ ಮುಜರಾಯಿ, ಕೃಷಿ ಖಾತೆ ಸಚಿವರಾಗಿದ್ದರು. 1983ರಲ್ಲಿ ಅದೇ ಕ್ಷೇತ್ರದಿಂದ ಮರು ಆಯ್ಕೆಯಾಗಿದ್ದರು.

ಭಾನುವಾರ ಸಂಜೆ ಸರ್ಕಾರಿ ಗೌರವಗಳೊಂದಿಗೆ ಅಂತ್ಯಕ್ರಿಯೆ ನಡೆಯಿತು.

ಸೋಮಣ್ಣ ರಾಜೀನಾಮೆಗೆ ಜೆಡಿಎಸ್ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಸತಿ ಸೌಲಭ್ಯ ಕೋರಿ ಬಂದ ಮಹಿಳೆ ಮೇಲೆ ಹಲ್ಲೆ ನಡೆಸಿರುವ ವಸತಿ ಸಚಿವ ಸೋಮಣ್ಣ ಅವರಿಂದ ತಕ್ಷಣ ರಾಜೀನಾಮೆ ಪಡೆಯಬೇಕು ಎಂದು ಜೆಡಿಎಸ್ ಆಗ್ರಹಿಸಿದೆ.

ಈ ಕುರಿತು ಭಾನುವಾರ ಪತ್ರಿಕಾ ಹೇಳಿಕೆ ನೀಡಿರುವ ಪಕ್ಷದ ರಾಜ್ಯ ಘಟಕದ ಪ್ರಧಾನ ಕಾರ್ಯದರ್ಶಿ ಸಿ.ರಾಜಣ್ಣ, 'ಹಿರಿಯ ರಾಜಕಾರಣಿಗಳು ಮಾದರಿಯಾಗಿರಬೇಕು. ಆದರೆ, ಕೇವಲ ತಮ್ಮ ಕುಟುಂಬದ ಅಭಿವೃದ್ಧಿಗಾಗಿ ರಾಜಕಾರಣದಲ್ಲಿ ತೊಡಗಿರುವ ಸೋಮಣ್ಣ ಬಡವರ ಪರವಾಗಿಲ್ಲ ಎಂಬುದು ಅವರ ವರ್ತನೆಯಿಂದ ಸಾಬೀತಾಗಿದೆ. ಅವರ ಸಂಭಾವಿತ ಸೋಗಿನ ಹಿಂದಿರುವ ವ್ಯಾಘ್ರತನ ಬಯಲಾಗಿದೆ' ಎಂದು ಟೀಕಿಸಿದ್ದಾರೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ತಕ್ಷಣವೇ ಸೋಮಣ್ಣ ಅವರನ್ನು ಸಂಪುಟದಿಂದ ಕೈಬಿಡಬೇಕು ಎಂದೂ ಅವರು ಆಗ್ರಹಿಸಿದ್ದಾರೆ.


ಅಭಿವ್ಯಕ್ತಿ ಸಾಂಸ್ಕೃತಿಕ ಟ್ರಸ್ಟ್‌ನಿಂದ ಭಾನುವಾರ ಮಲ್ಲೇಶ್ವರದ ಶ್ರೀಕೃಷ್ಣದೇವರಾಯ ಕಲಾಮಂದಿರದಲ್ಲಿ ಆಯೋಜಿಸಿದ್ದ ಭರತನಾಟ್ಯ ಕಾರ್ಯಕ್ರಮದಲ್ಲಿ ರಕ್ಷಿತಾ ಆರ್. ಅವರ ರಂಗಪ್ರವೇಶ ನೆರವೇರಿತು. ಅವರ ನೃತ್ಯದ ಒಂದು ಭಂಗಿ—ಪ್ರಜಾವಾಣಿ ಚಿತ್ರ

ಹಬ್ಬಕ್ಕೂ ಮುನ್ನ ಪಟಾಕಿ ಅವಘಡ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದಲ್ಲಿ ದೀಪಾವಳಿ ಹಬ್ಬಕ್ಕೂ ಮುನ್ನವೇ ಪಟಾಕಿ ಅವಘಡಗಳು ಸಂಭವಿಸುತ್ತಿದ್ದು, ಮಿಂಟೊ ಕಣ್ಣಿನ ಆಸ್ಪತ್ರೆಯಲ್ಲಿ ಎರಡು ಪ್ರಕರಣಗಳು ವರದಿಯಾಗಿವೆ.

ಕಲಾಸಿಪಾಳ್ಯದ 35 ವರ್ಷದ ಸರೇಶ್ ಹಾಗೂ ಜೆ.ಪಿ. ನಗರದ 10 ವರ್ಷದ ಮನೋಜ್ ಪಟಾಕಿಯಿಂದಾಗಿ ಗಾಯಗೊಂಡಿದ್ದಾರೆ. ರಾಕೆಟ್ ಸ್ಫೋಟದಿಂದ ಬಾಲಕನ ಮುಖದ ಚರ್ಮ ಹಾಗೂ ಕಣ್ಣಿಗೆ ಹಾನಿಯಾಗಿದೆ. ಕಣ್ಣಿನ ರೆಪ್ಪೆ ಹಾಗೂ ತಲೆ ಕೂದಲುಗಳು ಸುಟ್ಟುಹೋಗಿವೆ. ಇದರಿಂದಾಗಿ ವಿಕ್ಟೋರಿಯಾ ಆಸ್ಪತ್ರೆಯ ಸುಟ್ಟ ಗಾಯಗಳ ವಾರ್ಡ್‌ನಲ್ಲಿ ದಾಖಲಿಸಿ, ಚಿಕಿತ್ಸೆ ಒದಗಿಸಲಾಗುತ್ತಿದೆ. ಕಣ್ಣಿಗೆ ಗಂಭೀರ ಹಾನಿಯಾಗಿರುವುದರಿಂದ ದೃಷ್ಟಿ ಕಳೆದುಕೊಳ್ಳುವ ಸಾಧ್ಯತೆಯ ಬಗ್ಗೆ ವೈದ್ಯರು ಕಳವಳ ವ್ಯಕ್ತಪಡಿಸಿದ್ದಾರೆ.

35 ವರ್ಷದ ವ್ಯಕ್ತಿ ಸರ ಪಟಾಕಿ ಸಿಡಿಸುವ ವೇಳೆಗೆ ಗಾಯಗೊಂಡಿದ್ದು, ಮಿಂಟೊ ಆಸ್ಪತ್ರೆಯಲ್ಲಿ ಹೊರ ರೋಗಿಯಾಗಿ ಚಿಕಿತ್ಸೆ ಪಡೆದುಕೊಂಡಿದ್ದಾರೆ.

ನಗರದ ವಿವಿಧ ಕಣ್ಣಿನ ಆಸ್ಪತ್ರೆಗಳಲ್ಲಿ ಚಿಕಿತ್ಸೆಗೆ ವ್ಯವಸ್ಥೆ: ಹಾಸಿಗೆಗಳು ಮೀಸಲು

ಪಟಾಕಿ ಗಾಯಕ್ಕೆ 24 ಗಂಟೆಯೂ ಸೇವೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೆಳಕಿನ ಹಬ್ಬ ದೀಪಾವಳಿಯ ಸಂಭ್ರಮವನ್ನು ಇನ್ನಷ್ಟು ಹೆಚ್ಚಿಸುವುದು ಪಟಾಕಿ. ಆದರೆ, ಪಟಾಕಿ ಸಿಡಿತದ ವೇಳೆ ಅಜಾಗರೂಕತೆಯೇ ಶಾಶ್ವತ ಅಂಧತ್ವಕ್ಕೆ ನೂಕುವ ಸಾಧ್ಯತೆಗಳಿವೆ. ಹಾಗಾಗಿ, ನಗರದ ವಿವಿಧ ಆಸ್ಪತ್ರೆಗಳು ಚಿಕಿತ್ಸೆಗೆ ಅಗತ್ಯ ವ್ಯವಸ್ಥೆ ಮಾಡಿಕೊಂಡಿದ್ದು, ಹಬ್ಬದ ದಿನಗಳಲ್ಲಿ 24x7 ಸೇವೆಗಳನ್ನು ನೀಡಲು ಮುಂದಾಗಿವೆ.

ಮಿಂಟೊ, ನಾರಾಯಣ ನೇತ್ರಾಲಯ, ನೇತ್ರಧಾಮ, ಶಂಕರ, ಡಾ. ಅಗರವಾಲ್ ಸೇರಿ ವಿವಿಧ ಕಣ್ಣಿನ ಆಸ್ಪತ್ರೆಗಳು ಚಿಕಿತ್ಸೆಗೆ ಬೇಕಾದ ಔಷಧಗಳನ್ನು ದಾಸ್ತಾನು ಮಾಡಿಕೊಂಡಿವೆ. ಅದೇ ರೀತಿ, ಪ್ರತ್ಯೇಕ ಹಾಸಿಗೆ ವ್ಯವಸ್ಥೆಯನ್ನು ಮಿಂಟೊ, ನಾರಾಯಣ ನೇತ್ರಾಲಯ ಸೇರಿ ಕೆಲ ಆಸ್ಪತ್ರೆಗಳಲ್ಲಿ ಮಾಡಲಾಗಿದೆ. ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಜತೆಗೆ ವಿವಿಧ ಸಂಘ–ಸಂಸ್ಥೆಗಳು ಹಾಗೂ ಸರ್ಕಾರೇತರ ಸಂಸ್ಥೆಗಳು ಪಟಾಕಿ ತ್ಯಜಿಸಿ, ಹಣತೆ ದೀಪ ಹಚ್ಚುವ ಮೂಲಕ ಈ ವರ್ಷದ ದೀಪಾವಳಿ ಆಚರಿಸುವಂತೆ ಮನವಿ ಮಾಡಿಕೊಂಡಿವೆ.

'ಪಟಾಕಿ ಸಿಡಿತದಿಂದ ಕಣ್ಣಿಗೆ ಹಾನಿಯಾಗುವ ಜತೆಗೆ ಸುಟ್ಟಗಾಯಗಳಾಗುವ ಸಾಧ್ಯತೆಗಳಿರುತ್ತವೆ. ಪಟಾಕಿಯ ಜೋರಾದ ಶಬ್ದದಿಂದ ಶ್ರವಣ ಸಮಸ್ಯೆ ಕೂಡ ಉಂಟಾಗುತ್ತದೆ. ಪಟಾಕಿಯಿಂದ ಹೊರಹೊಮ್ಮುವ ರಾಸಾಯನಿಕ ಹೊಗೆಯಿಂದ ಉಸಿರಾಟದ (ಆಸ್ತಮಾ) ಹಾಗೂ ಚರ್ಮದ ತೊಂದರೆಗಳು ಕಾಣಿಸಿಕೊಳ್ಳಲಿವೆ. ಪಟಾಕಿಗಳನ್ನು ಹಚ್ಚಲೇಬೇಕು ಎಂದಾದಲ್ಲಿ ಹೆಚ್ಚಿನ ಮುಂಜಾಗ್ರತೆ ಕ್ರಮಗಳನ್ನು ಕೈಗೊಳ್ಳಿ' ಎಂದು ನಗರದ ನೇತ್ರ ವೈದ್ಯರು ಮನವಿ ಮಾಡಿದ್ದಾರೆ.

'ಪಟಾಕಿ ಕಣ್ಣಿಗೆ ಮಾರಕವಾಗಿದ್ದು, ಅಂಧತ್ವ ತರುವ ಸಾಧ್ಯತೆಯಿರುತ್ತದೆ. ಕಣ್ಣು ಅತ್ಯಂತ ಸೂಕ್ಷ್ಮ ಇಂದ್ರಿಯವಾಗಿದ್ದು, ಪಟಾಕಿ ಹಚ್ಚುವ ಮುನ್ನ ಎಚ್ಚರವಹಿಸಬೇಕು. ಸಾಮಾನ್ಯವಾಗಿ ಪಟಾಕಿ ಸಿಡಿತದಿಂದ ಗಾಯಕ್ಕೊಳಗಾದವರಲ್ಲಿ ಶೇ 19ರಷ್ಟು ಮಂದಿಗೆ ಕಣ್ಣಿಗೆ ಹಾನಿಯಾಗಿರುತ್ತದೆ. ಶೇ 30ರಷ್ಟು ಮಂದಿ ಕೈ ಬೆರಳಿಗೆ ಹಾನಿ ಮಾಡಿಕೊಂಡಿರುತ್ತಾರೆ' ಎಂದು ಮಿಂಟೊ ಕಣ್ಣಿನ ಆಸ್ಪತ್ರೆಯ ನಿರ್ದೇಶಕಿ ಡಾ. ಸುಜಾತ ರಾಥೋಡ್ ತಿಳಿಸಿದರು.

'ಹಸಿರು ಪಟಾಕಿಗಳಲ್ಲಿ ರಾಸಾಯನಿಕಗಳ ಬಳಕೆ ಪ್ರಮಾಣ ಶೇ 50ರಷ್ಟು ಕಡಿಮೆ ಇರುತ್ತದೆ. ಹೆಚ್ಚು ಹಾನಿ ಮಾಡುವ ಬೇರಿಯಂ ಮತ್ತು ಲಿಥಿಯಂ ಹೊರತುಪಡಿಸಿ ಇತರೆ ರಾಸಾಯನಿಕಗಳನ್ನು ಬಳಸಲಾಗುತ್ತದೆ. ಇದರಿಂದ ಮಾಲಿನ್ಯ ಪ್ರಮಾಣ ಕಡಿಮೆಯಾದರೂ, ಸ್ಫೋಟ ಮತ್ತು ಶಬ್ದದ ತೀವ್ರತೆ ಸಾಮಾನ್ಯ ಪಟಾಕಿಗಳಂತೆ ಇರುತ್ತದೆ' ಎಂದರು.

ನಕ್ಷತ್ರಕಡ್ಡಿಯೂ ಅಪಾಯಕಾರಿ: 'ಜಾಗೃತಿಯಿಂದಾಗಿ ವರ್ಷದಿಂದ ವರ್ಷಕ್ಕೆ ಪಟಾಕಿ ಸಿಡಿಸುವ ಪ್ರಮಾಣ ಕಡಿಮೆಯಾಗುತ್ತಿದೆ. ಎಚ್ಚರಿಕೆ ವಹಿಸದೆ ಪಟಾಕಿ ಸಿಡಿಸಿದಲ್ಲಿ ದೀಪಾವಳಿ ಕತ್ತಲೆಯನ್ನು ತರುವ ಸಾಧ್ಯತೆಗಳಿವೆ' ಎಂದು ನಾರಾಯಣ ನೇತ್ರಾಲಯದ ಅಧ್ಯಕ್ಷ ಡಾ. ಭುಜಂಗ ಶೆಟ್ಟಿ ತಿಳಿಸಿದರು.

'ಕಡಿಮೆ ತೀವ್ರತೆಯ ಪಟಾಕಿಗಳೆಂದು ಗುರುತಿಸಿರುವ ನಕ್ಷತ್ರ-ಕಡ್ಡಿ, ಭೂಚಕ್ರ ಇನ್ನಿತರವುಗಳೇ ಹೆಚ್ಚು ಅಪಾಯಕಾರಿ. ಇವುಗಳೂ ಸಿಡಿಯುವ ಸಾಧ್ಯತೆ ಇರುತ್ತದೆ. ಆದ್ದರಿಂದ ಮಕ್ಕಳಿಗೆ ಆದಷ್ಟು ದೂರದಿಂದಲೇ ಬೆಂಕಿ ಹಚ್ಚುವ ಅವಕಾಶ ನೀಡುವುದು ಉತ್ತಮ' ಎಂದರು.

30 ಹಾಸಿಗೆಗಳ ವಾರ್ಡ್

ನಗರದ ಮಿಂಟೊ ಕಣ್ಣಿನ ಆಸ್ಪತ್ರೆಯಲ್ಲಿ ಪಟಾಕಿ ಗಾಯಗಳ ಚಿಕಿತ್ಸೆಗೆ ಪ್ರತ್ಯೇಕ ವಾರ್ಡ್ ಮೀಸಲಿಡಲಾಗಿದೆ. 30 ಹಾಸಿಗೆಗಳು ಈ ವಾರ್ಡ್‌ನಲ್ಲಿ ಇರಲಿವೆ. ದೀಪಾವಳಿ ಹಬ್ಬದ ಸಂದರ್ಭದಲ್ಲಿ ವೈದ್ಯರು ಹಾಗೂ ಸಿಬ್ಬಂದಿ ರಜೆ ಪಡೆಯದೆಯೇ ಸೇವೆ ಸಲ್ಲಿಸಲಿದ್ದಾರೆ.

'ಆಸ್ಪತ್ರೆಯಲ್ಲಿ ಚಿಕಿತ್ಸೆಗೆ ಅಗತ್ಯವಾದ ವೈದ್ಯರು, ಶುಶ್ರೂಷಕರು, ಅರೆವೈದ್ಯಕೀಯ ಸಿಬ್ಬಂದಿಯಿದ್ದು, ಅಗತ್ಯ ಔಷಧ ಸಾಮಗ್ರಿಗಳ ವ್ಯವಸ್ಥೆಯನ್ನೂ ಮಾಡಿಕೊಳ್ಳಲಾಗಿದೆ' ಎಂದು ಡಾ. ಸುಜಾತಾ ರಾಥೋಡ್ ತಿಳಿಸಿದರು.

ಸಹಾಯವಾಣಿಗಳು

ಮಿಂಟೊ ಆಸ್ಪತ್ರೆ	9480832430, 948174013
ನಾರಾಯಣ ನೇತ್ರಾಲಯ	ರಾಜಾಜಿನಗರ ಶಾಖೆ- 080 66121643, 9902 546046, ಹೊಸೂರು ರಸ್ತೆ ಶಾಖೆ- 080-66660655, 9902 821128, ಇಂದಿರಾನಗರ ಶಾಖೆ- 080 66974000, ಬನ್ನೇರುಘಟ್ಟ ರಸ್ತೆ ಶಾಖೆ– 080 66121618, 9513522400
ಶಂಕರ ಕಣ್ಣಿನ ಆಸ್ಪತ್ರೆ	(ಮಾರತಹಳ್ಳಿ) 080 69038900, 9739270477
ರೈನ್‌ಬೋ ಮಕ್ಕಳ ಆಸ್ಪತ್ರೆ	(ಬನ್ನೇರುಘಟ್ಟ) 9355400341, ಮಾರತಹಳ್ಳಿ ಶಾಖೆ 9355400340, ಹೆಬ್ಬಾಳ ಶಾಖೆ 9355400342
ಜಯನಗರದ ನೇತ್ರಧಾಮ	080 26088000,9448071816
ಡಾ. ಅಗರವಾಲ್ ಕಣ್ಣಿನ ಆಸ್ಪತ್ರೆ	ಬನ್ನೇರುಘಟ್ಟ ಶಾಖೆ 08048193419, ರಾಜರಾಜೇಶ್ವರಿ ನಗರ ಶಾಖೆ 918048193501

ವಿಕ್ಟೋರಿಯಾದಲ್ಲಿ ಸುಟ್ಟಗಾಯಕ್ಕೆ ಚಿಕಿತ್ಸೆ

ಪಟಾಕಿ ಅವಘಡದಿಂದ ಸಂಭವಿಸುವ ಸುಟ್ಟ ಗಾಯಗಳಿಗೆ ತುರ್ತು ಚಿಕಿತ್ಸೆ ನೀಡಲು ವಿಕ್ಟೋರಿಯಾ ಆಸ್ಪತ್ರೆ ಆವರಣದಲ್ಲಿರುವ ಮಹಾಬೋಧಿ ಸುಟ್ಟ ಗಾಯಗಳ ಚಿಕಿತ್ಸಾ ಕೇಂದ್ರ ಅಗತ್ಯ ಸಿದ್ಧತೆ ಮಾಡಿಕೊಂಡಿದೆ. ಈ ಕೇಂದ್ರಕ್ಕೆ ಅಗತ್ಯ ವೈದ್ಯರು, ಶುಶ್ರೂಷಕರು ಹಾಗೂ ಸಹಾಯಕ ಸಿಬ್ಬಂದಿಯನ್ನು ನಿಯೋಜಿಸಲಾಗಿದ್ದು, ದಿನದ 24 ಗಂಟೆಯೂ ಇಲ್ಲಿ ವೈದ್ಯಕೀಯ ಸೇವೆ ಲಭ್ಯವಿರಲಿದೆ. ಕೇಂದ್ರದಲ್ಲಿ 54 ಹಾಸಿಗೆಗಳಿವೆ.

ಮತದಾರರ ಸೆಳೆಯುವ ಕಸರತ್ತು: ಸೀರೆ, ಹಾಟ್‌ಬಾಕ್ಸ್, ಟೋಕನ್ ವಿತರಣೆ

ಟಿಕೆಟ್ ಆಕಾಂಕ್ಷಿಗಳಿಂದ ಹಬ್ಬದ ಉಡುಗೊರೆ

• ಆದಿತ್ಯ ಕೆ.ಎ.

ಬೆಂಗಳೂರು: ವಿಧಾನಸಭೆ ಚುನಾವಣೆಗೆ ಕೆಲವೇ ತಿಂಗಳು ಬಾಕಿ ಇದ್ದು, ಟಿಕೆಟ್ ಆಕಾಂಕ್ಷಿಗಳು ಸಾಲು ಸಾಲು ಹಬ್ಬಗಳನ್ನೇ ನೆಪವಾಗಿಸಿಕೊಂಡು ಮತದಾರರ ಸೆಳೆಯಲು 'ಉಡುಗೊರೆ'ಯ ಮೊರೆ ಹೋಗಿದ್ದಾರೆ.

ಹಾಸನ, ಚಿಕ್ಕಬಳ್ಳಾಪುರ, ಬೆಂಗಳೂರು ನಗರ, ಕೊಡಗು ಜಿಲ್ಲೆ ಒಳಗೊಂಡಂತೆ ರಾಜ್ಯದ ಹಲವು ವಿಧಾನಸಭಾ ಕ್ಷೇತ್ರದಲ್ಲಿನ ಟಿಕೆಟ್ ಆಕಾಂಕ್ಷಿಗಳು ಹಾಗೂ ಹಾಲಿ ಶಾಸಕರು ಮನೆ ಮನೆಗೆ ತೆರಳಿ ಸೀರೆ, ಹಾಟ್ ಬಾಕ್ಸ್, ಬಳೆ ಹಾಗೂ ಟೋಕನ್ ವಿತರಣೆ ಮಾಡುತ್ತಿದ್ದಾರೆ. ಟಿಕೆಟ್ ಸಿಗುತ್ತದೆ ಎಂದು ನಂಬಿರುವ ಹೊಸಮುಖಗಳೂ ಅಖಾಡ ಸಜ್ಜುಗೊಳಿಸಿಕೊಳ್ಳುತ್ತಿದ್ದಾರೆ.

ಚುನಾವಣೆ ಘೋಷಣೆಯಾದ ಮೇಲೆ ಮತದಾರರಿಗೆ ಸಾಮಗ್ರಿ ಹಂಚಿಕೆ ಸಾಧ್ಯವಿಲ್ಲ ಎಂಬ ಕಾರಣಕ್ಕೆ ಈಗಿನಿಂದಲೇ ಮಹಿಳಾ ಮತದಾರರ ಮನ ಗೆಲ್ಲಲು ಕಸರತ್ತು ನಡೆಯುತ್ತಿವೆ ಎಂದು ಹಾಸನ ಜಿಲ್ಲೆಯ ಬೇಲೂರಿನ ಯುವ ಮತದಾರ ಸಂದೇಶ ಹೇಳುತ್ತಾರೆ.

ರಾಜ್ಯದ ಕೆಲವು ಕ್ಷೇತ್ರಗಳಲ್ಲಿ ಬಟ್ಟೆ ಹಾಗೂ ಪಾತ್ರೆ ಅಂಗಡಿಗೆ ಆಕಾಂಕ್ಷಿಗಳು ಮುಂಗಡ ಹಣ ಪಾವತಿಸಿ ಮತದಾರರಿಗೆ ಟೋಕನ್ ವ್ಯವಸ್ಥೆ ಮಾಡಿದ್ದಾರೆ. ಮತದಾರರು ನಿಗದಿತ ಸಮಯದಲ್ಲಿ ಟೋಕನ್ ನೀಡಿ ವಸ್ತು ಖರೀದಿಸುತ್ತಿದ್ದಾರೆ. ದೇವಸ್ಥಾನಗಳ ಜೀರ್ಣೋದ್ಧಾರಕ್ಕೂ ಮುಂಗಡ ಹಣ ಪಾವತಿಸಿ ನೆಲೆ ಭದ್ರ ಪಡಿಸಿಕೊಳ್ಳುತ್ತಿದ್ದಾರೆ.

'ಹಾಸನ ಕ್ಷೇತ್ರದಲ್ಲಿ ಹಾಲಿ ಶಾಸಕ ಪ್ರೀತಂಗೌಡ ಬೆಂಬಲಿಗರು ಈ ಹಿಂದಿನ ಗಣೇಶ ಚತುರ್ಥಿಯಲ್ಲೇ ಸರ್ಕಾರಿ ನೌಕರರಿರುವ ಪ್ರತಿ ಮನೆಗೆ ಸೀರೆ ಹಾಗೂ ಬಳೆ ವಿತರಿಸಿದ್ದಾರೆ' ಎಂದು ಮೂಲಗಳು ಖಚಿತಪಡಿಸಿವೆ.

ರಾಜ್ಯದ ಕೆಲವು ಕ್ಷೇತ್ರಗಳಲ್ಲಿ ವರ್ಷದ ತೊಡಕು ನೆಪದಲ್ಲಿ ದೀಪಾವಳಿ ಬಳಿಕ ಮಾಂಸದೂಟ ಹಾಕಿಸಲು ಯೋಜನೆ ರೂಪಿಸಲಾಗಿದೆ. 'ಹಾಸನದ ಬೇಲೂರು ವಿಧಾನಸಭಾ ಕ್ಷೇತ್ರದಲ್ಲಿ ಬಿಜೆಪಿ ಟಿಕೆಟ್ ಆಕಾಂಕ್ಷಿ ಹುಲ್ಲಳ್ಳಿ ಸುರೇಶ್, ಬೆಳಕಿನ ಹಬ್ಬ ದೀಪಾವಳಿ ನೆಪದಲ್ಲಿ ಸಾವಿರಾರು ಸೀರೆ ವಿತರಿಸಿದ್ದಾರೆ. ಅವರ ಬೆಂಬಲಿಗರು ತಾಲ್ಲೂಕಿನ ಗೆಂಡೇಹಳ್ಳಿ, ತೊಳಲು, ನವಿಲೇಹಳ್ಳಿ, ಮರೂರು ಭಾಗದ ಬಹುತೇಕ ಮನೆಗಳಿಗೆ ಸೀರೆ ಹಂಚಿದ್ದಾರೆ' ಎಂದು ಮತದಾರರೊಬ್ಬರು 'ಪ್ರಜಾವಾಣಿ'ಗೆ ತಿಳಿಸಿದ್ದಾರೆ.


ಬೆಂಗಳೂರಿನ ರಾಜರಾಜೇಶ್ವರಿ ನಗರ ಕ್ಷೇತ್ರದಲ್ಲೂ ಕಾಂಗ್ರೆಸ್‌ನ ಎಚ್. ಕುಸುಮಾ ಹಬ್ಬದ ಅಂಗವಾಗಿ ನೂರಾರು ಮಹಿಳೆಯರಿಗೆ ಬಾಗಿನ ನೀಡಿದ್ದಾರೆ. 'ಚುನಾವಣೆ ಕಾರಣಕ್ಕೆ ಅಲ್ಲ, ಇದು ಸಂಪ್ರದಾಯ' ಎಂದು ಕುಸುಮಾ ಆಪ್ತರಲ್ಲಿ ಹೇಳಿಕೊಂಡಿದ್ದರು. ಚಿಕ್ಕಬಳ್ಳಾಪುರ ಗೌರಿಬಿದನೂರಿನಲ್ಲಿ ಸಮಾಜ ಸೇವಕ ಕೆ.ಎಚ್.ಪುಟ್ಟಸ್ವಾಮಿ ಸಾವಿರಾರು ಟೋಕನ್ ವಿತರಿಸಿದ್ದಾರೆ. ಕೊಡಗಿನಲ್ಲಿ ಕಾಂಗ್ರೆಸ್ ಟಿಕೆಟ್ ಆಕಾಂಕ್ಷಿ ಮಂಥರ್‌ಗೌಡ ಕ್ಷೇತ್ರದಲ್ಲಿನ ಕ್ರೀಡಾ ಆಯೋಜಕರಿಗೆ ದೇಣಿಗೆ ನೀಡುತ್ತಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಯಶವಂತಪುರ ವಿಧಾನಸಭಾ ಕ್ಷೇತ್ರದ ಶಾಸಕರೂ ಆಗಿರುವ ಸಹಕಾರ ಸಚಿವ ಎಸ್.ಟಿ.ಸೋಮಶೇಖರ್ ನೇತೃತ್ವದಲ್ಲಿ ಕೆಂಗೇರಿ ಭಾಗದಲ್ಲಿ ಸೀಮಂತ ಸಂಭ್ರಮವೂ ನಡೆದಿತ್ತು.


'ಸೀರೆ, ಹಾಟ್ ಬಾಕ್ಸ್‌ನಲ್ಲಿ ಆಕಾಂಕ್ಷಿಗಳು ಹೆಸರು ಹಾಗೂ ಫೋಟೊ ಹಾಕಿಲ್ಲ. ವಿರೋಧಿಗಳಿಗೆ ಸುಳಿವು ಸಿಗದಂತೆ ಉಪಾಯ ಕಂಡುಕೊಂಡಿದ್ದಾರೆ' ಎಂದು ಮಹಿಳೆಯೊಬ್ಬರು ತಿಳಿಸಿದ್ದಾರೆ.

ಮುಖ್ಯಾಂಶಗಳು

- ದೇಗುಲ ಜೀರ್ಣೋದ್ಧಾರ: ಅನುದಾನದ ಒಪ್ಪಿಗೆ
- ಕ್ರೀಡಾಕೂಟ ಆಯೋಜಕರಿಗೂ ದೇಣಿಗೆ
- ಹಬ್ಬದ ನೆಪ; ಚುನಾವಣೆ ದೃಷ್ಟಿ


ಹಾಸನ ಜಿಲ್ಲೆ ಬೇಲೂರು ತಾಲ್ಲೂಕಿನಲ್ಲಿ ಮಹಿಳೆಯರಿಗೆ ದೀಪಾವಳಿ ಹಬ್ಬದ ನೆಪದಲ್ಲಿ ವಿತರಣೆ ಮಾಡಿರುವ ಸೀರೆ


ನೈಜ ಹೋರಾಟಗಾರರ ವೇದಿಕೆ ಕಾರ್ಯಕರ್ತರು ನಗರದ ನ್ಯಾಯಾಂಗ ಬಡಾವಣೆಯ ರಸ್ತೆಯಲ್ಲಿನ ಗುಂಡಿಗಳಲ್ಲಿ ಹಣತೆ ಹಚ್ಚಿ ದೀಪಾವಳಿ ಆಚರಿಸುವ ಮೂಲಕ ಪ್ರತಿಭಟನೆ ನಡೆಸಿದರು


ಸುಚಿತ್ರಾ ಫಿಲ್ಮ್ ಸೊಸೈಟಿ ನಗರದಲ್ಲಿ ಭಾನುವಾರ ಹಮ್ಮಿಕೊಂಡ ಕಾರ್ಯಕ್ರಮದಲ್ಲಿ ಚಲನಚಿತ್ರ ನಿರ್ದೇಶಕಿ ಅರುಣ ರಾಜೇ ಪಾಟೀಲ್ ಅವರು 'ಫಿಲ್ಮ್ ಥ್ರೂ ವುಮೆನ್ಸ್ ಐಯ್ಸ್ ಪುಸ್ತಕ'ದ ಪ್ರಥಮ ಪ್ರತಿಯನ್ನು ಲೇಖಕಿ ವಿಜಯಾ ಅವರಿಗೆ ನೀಡಿದರು. ಸುಚಿತ್ರಾ ಫಿಲ್ಮ್ ಸೊಸೈಟಿ ಅಧ್ಯಕ್ಷ ಬಿ. ಸುರೇಶ್, ಕರ್ನಾಟಕ ಚಲನಚಿತ್ರ ನಿರ್ದೇಶಕರ ಸಂಘದ ಅಧ್ಯಕ್ಷ ನಂಜುಂಡೇಗೌಡ, ಸೊಸೈಟಿಯ ಮಾಜಿ ಅಧ್ಯಕ್ಷ ವಿದ್ಯಾಶಂಕರ್ ಹಾಗೂ ಲೇಖಕ ಮನು ಚಕ್ರವರ್ತಿ ಇದ್ದರು —ಪ್ರಜಾವಾಣಿ ಚಿತ್ರ

ಪ್ರಜಾವಾಣಿ @75
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಇನ್ನು ಎಸ್‌ಸಿ ಶೇ 17, ಎಸ್‌ಟಿ ಶೇ 7 ಮೀಸಲಾತಿ ಹೆಚ್ಚಳ ಅನುಷ್ಠಾನದ ಕುತೂಹಲ

ಸುಗ್ರೀವಾಜ್ಞೆಗೆ ರಾಜ್ಯಪಾಲರ ಅಂಕಿತ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪರಿಶಿಷ್ಟ ಜಾತಿ (ಎಸ್‌ಸಿ) ಮೀಸಲಾತಿಯನ್ನು ಶೇ 15 ರಿಂದ ಶೇ 17ಕ್ಕೆ ಮತ್ತು ಪರಿಶಿಷ್ಟ ಪಂಗಡ (ಎಸ್‌ಟಿ) ಮೀಸಲಾತಿಯನ್ನು ಶೇ 3ರಿಂದ ಶೇ 7ಕ್ಕೆ ಹೆಚ್ಚಿಸಲು ರಾಜ್ಯ ಸರ್ಕಾರ ಸಿದ್ಧಪಡಿಸಿರುವ 'ಕರ್ನಾಟಕ ಅನುಸೂಚಿತ ಜಾತಿಗಳು ಮತ್ತು ಅನುಸೂಚಿತ ಪಂಗಡಗಳು (ಶೈಕ್ಷಣಿಕ ಸಂಸ್ಥೆಗಳಲ್ಲಿನ ಸ್ಥಾನಗಳಲ್ಲಿ ಮತ್ತು ರಾಜ್ಯಾಧೀನ ಸೇವೆಗಳಲ್ಲಿನ ನೇಮಕಾತಿ ಅಥವಾ ಹುದ್ದೆಗಳಲ್ಲಿ ಮೀಸಲಾತಿ) ಸುಗ್ರೀವಾಜ್ಞೆ- 2022'ಗೆ ರಾಜ್ಯಪಾಲ ಥಾವರಚಂದ್ ಗೆಹಲೋತ್ ಭಾನುವಾರ ಅಂಕಿತ ಹಾಕಿದ್ದಾರೆ. ಇದರ ಬೆನ್ನಲ್ಲೇ ವಿಶೇಷ ರಾಜ್ಯಪತ್ರವನ್ನು ಹೊರಡಿಸಲಾಗಿದೆ.

ಕೇವಲ ಸರ್ಕಾರಿ ಆದೇಶದ ಮೂಲಕ ಎಸ್‌ಸಿ, ಎಸ್‌ಟಿ ಮೀಸಲಾತಿ ಹೆಚ್ಚಿಸಿದರೆ ನ್ಯಾಯಾಲಯದಲ್ಲಿ ಹಿನ್ನಡೆ ಆಗಬಹುದು ಎಂಬ ಕಾರಣಕ್ಕೆ ಸುಗ್ರೀವಾಜ್ಞೆ ಮೂಲಕ ಸರ್ಕಾರ ಅದನ್ನು ಜಾರಿಗೊಳಿಸುತ್ತಿದೆ. ಸುಗ್ರೀವಾಜ್ಞೆಯಲ್ಲಿ ಮೀಸಲಾತಿ ಹೆಚ್ಚಳಕ್ಕೆ ಪೂರಕವಾದ ಸಮರ್ಥನೆಗಳನ್ನು ವಿವರಿಸಲಾಗಿದೆ. ಸುಗ್ರೀವಾಜ್ಞೆಯ ಪ್ರತಿ 'ಪ್ರಜಾವಾಣಿ' ಗೆ ಲಭ್ಯವಾಗಿದೆ.

ಮೀಸಲಾತಿ ಪ್ರಮಾಣ ಶೇ 50 ಮೀರುವಂತಿಲ್ಲ ಎಂದು ಇಂದಿರಾ ಸಾಹ್ನಿ ಪ್ರಕರಣದಲ್ಲಿ ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ರಾಜ್ಯದಲ್ಲಿ ಈಗ ಶೇ 50 ರಷ್ಟು ಮೀಸಲಾತಿ ಇದೆ. ಹೆಚ್ಚಳ ಜಾರಿಯಾದರೆ ಈ ಪ್ರಮಾಣ ಶೇ 56 ರಷ್ಟು ಆಗಲಿದೆ. ಈ ಮಿತಿಯನ್ನು ಮೀರದೆ ಎಸ್‌ಸಿ, ಎಸ್‌ಟಿ ಮೀಸಲಾತಿಯನ್ನು ಒಟ್ಟು ಶೇ 6 ರಷ್ಟು ಹೆಚ್ಚಿಸಲು ಹೇಗೆ ಸಾಧ್ಯ ಎಂಬ ಬಗ್ಗೆ ಮಾಹಿತಿಯನ್ನು ಸುಗ್ರೀವಾಜ್ಞೆಯಲ್ಲಿ ವಿವರಿಸಿಲ್ಲ ಎಂದು ಸಂಸದೀಯ ವ್ಯವಹಾರಗಳ ಇಲಾಖೆಯ ಮೂಲಗಳು ತಿಳಿಸಿವೆ.

'ಸೆಪ್ಟೆಂಬರ್‌ನಲ್ಲಿ ನಡೆದ ಮುಂಗಾರು ಅಧಿವೇಶನವನ್ನು ಅನಿರ್ದಿಷ್ಟ ಕಾಲದವರೆಗೆ ಮುಂದೂಡಲಾಗಿತ್ತು, ಸಂವಿಧಾನದ 174 ಮತ್ತು 213 ನೇ ಪರಿಚ್ಛೇದದ ಪ್ರಕಾರ ಅಧಿವೇಶನವನ್ನು ಮುಕ್ತಾಯಗೊಳಿಸದೇ ಯಾವುದೇ ಸುಗ್ರೀವಾಜ್ಞೆ ಹೊರಡಿಸಲು ಅವಕಾಶ ಇರಲಿಲ್ಲ. ಹೀಗಾಗಿ, ಅಧಿವೇಶನವನ್ನು ಮುಕ್ತಾಯಗೊಳಿಸಲು (ಸಮಾಪನ) ಪ್ರಸ್ತಾಪಿಸಿ ಮಂಡಿಸಿದ್ದ ಕಡತಕ್ಕೂ ರಾಜ್ಯಪಾಲರು ಭಾನುವಾರ ಬೆಳಿಗ್ಗೆ ಒಪ್ಪಿಗೆ ಸೂಚಿಸಿದ್ದಾರೆ. ಬಳಿಕ ಸುಗ್ರೀವಾಜ್ಞೆಗೆ ಸಹಿ ಹಾಕಿದ್ದಾರೆ' ಎಂದೂ ಮೂಲಗಳು ಹೇಳಿವೆ.

ಸುಗ್ರೀವಾಜ್ಞೆಯಲ್ಲಿ ಏನಿದೆ?: ಕೆಲವು ಸಮುದಾಯಗಳನ್ನು ಸೇರಿಸಿದ್ದರಿಂದ ಎಸ್‌ಸಿ, ಎಸ್‌ಟಿ ಜನಸಂಖ್ಯೆ ತೀವ್ರವಾಗಿ ಹೆಚ್ಚಿದೆ. 1976 ರಲ್ಲಿ ಎಸ್‌ಸಿ ಮತ್ತು ಎಸ್‌ಟಿ ಆದೇಶಗಳ ತಿದ್ದುಪಡಿ ಕಾಯ್ದೆ 1976 (1976ರ ಕೇಂದ್ರ ಕಾಯ್ದೆ 108) ಅನುಸಾರ ಜಾತಿಗಳಿಗೆ ಹಾಕಲಾದ ಭೌಗೋಳಿಕ ಮಿತಿಗಳನ್ನು ತೆಗೆದು ಹಾಕಿರುವುದು ರಾಜ್ಯದಲ್ಲಿ ಎಸ್‌ಸಿ, ಎಸ್‌ಟಿ ಜನಸಂಖ್ಯೆ ಅಸಾಧಾರಣ ಹೆಚ್ಚಳಕ್ಕೆ ಕಾರಣವಾಗಿದೆ.

10ನೇ ಪುಟ ನೋಡಿ

ಎಲ್ಲೆಲ್ಲಿ ಮೀಸಲಾತಿ ಅನ್ವಯ

ಎಸ್‌ಸಿ, ಎಸ್‌ಟಿ ಮೀಸಲಾತಿ ಹೆಚ್ಚಳವು ರಾಜ್ಯ ಸರ್ಕಾರದ ಅಥವಾ ಅನುದಾನಿತ ಯಾವುದೇ ಶಾಲೆ, ಕಾಲೇಜು ಅಥವಾ ಇತರ ಶೈಕ್ಷಣಿಕ ಸಂಸ್ಥೆಗಳಲ್ಲಿ ಪ್ರವೇಶ ಅವಕಾಶಕ್ಕೆ ಅನ್ವಯ ಆಗಲಿದೆ. ರಾಜ್ಯ ಸರ್ಕಾರಿ ಅಂದರೆ, ಸರ್ಕಾರ, ವಿಧಾನಮಂಡಲ, ಯಾವುದೇ ಸ್ಥಳೀಯ ಪ್ರಾಧಿಕಾರ ಅಥವಾ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಯಾವುದೇ ನಿಗಮ ಅಥವಾ ಕಂಪನಿ. ಸಾರ್ವಜನಿಕ ಸಂಸ್ಥೆಗಳು ಅಂದರೆ, ಕರ್ನಾಟಕ ಸಹಕಾರ ಸಂಘಗಳ ಕಾಯ್ದೆಯಡಿ ನೋಂದಣಿಯಾದ ಸಹಕಾರ ಸಂಘಗಳು, ಸರ್ಕಾರಿ ಅಥವಾ ಅನುದಾನಿತ ಶೈಕ್ಷಣಿಕ ಸಂಸ್ಥೆಗಳು, ಕಂಪನಿ ಕಾಯ್ದೆಗಳಡಿ ಬರುವ ಸರ್ಕಾರಿ ಕಂಪನಿ, ಸ್ಥಳೀಯ ಪ್ರಾಧಿಕಾರ, ಸರ್ಕಾರದ ಒಡೆತನ ಅಥವಾ ನಿಯಂತ್ರಣದಲ್ಲಿರುವ ಸ್ವಾಯತ್ತ ಸಂಸ್ಥೆಗಳಲ್ಲಿ ನೇಮಕಾತಿ ಮತ್ತು ಹುದ್ದೆಗಳಿಗೆ ಅನ್ವಯ ಆಗಲಿದೆ.

ನೇಮಕಾತಿ ಅಥವಾ ಹುದ್ದೆಗಳಿಗೆ ಸ್ವಂತ ಅರ್ಹತೆಯ ಆಧಾರದಲ್ಲಿ ಎಸ್‌ಸಿ, ಎಸ್‌ಟಿ ಸಮುದಾಯದವರು ಆಯ್ಕೆಯಾಗಿದ್ದರೆ, ಅಂಥವರನ್ನು ಮೀಸಲಾತಿಯಡಿ ಪರಿಗಣಿಸುವಂತಿಲ್ಲ. ಆ ಮೂಲಕ, ಮೀಸಲಿರಿಸಿದ ಸಂಖ್ಯೆಗೆ ಯಾವುದೇ ರೀತಿಯ ಬಾಧಕ ಉಂಟಾಗುವಂತಿಲ್ಲ ಎಂದೂ ಸುಗ್ರೀವಾಜ್ಞೆಯಲ್ಲಿ ಸ್ಪಷ್ಟಪಡಿಸಲಾಗಿದೆ.

ಮೀಸಲಾತಿ ಪ್ರಮಾಣ ಹೆಚ್ಚಿಸಿ ನಮ್ಮ ಸರ್ಕಾರ ಬದ್ಧತೆಯಿಂದ ನಡೆದುಕೊಂಡಿದೆ. ಎಸ್‌ಸಿ,ಎಸ್‌ಟಿ ಸಮುದಾಯಕ್ಕೆ ದೀಪಾವಳಿ ಕೊಡುಗೆ ಕೊಟ್ಟಿದೆ

ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಚಿನಕುರಳಿ

ಪ್ರಕಾಶ್ ಶೆಟ್ಟಿ



ರಾಜ್ಯದಾದ್ಯಂತ ಆಕ್ರೋಶ: ಸಚಿವರಿಂದ ಕ್ಷಮೆಯಾಚನೆ

ಮಹಿಳೆ ಕೆನ್ನೆಗೆ ಹೊಡೆದ ಸೋಮಣ್ಣ

ಪ್ರಜಾವಾಣಿ ವಾರ್ತೆ

ಚಾಮರಾಜನಗರ: ಸಮಸ್ಯೆಯನ್ನು ಹೇಳಿಕೊಳ್ಳಲು ಬಂದಿದ್ದ ಮಹಿಳೆಗೆ ಜಿಲ್ಲಾ ಉಸ್ತುವಾರಿ ಸಚಿವ ವಿ.ಸೋಮಣ್ಣ ಕೆನ್ನೆಗೆ ಹೊಡೆದಿದ್ದಾರೆ. ಇದರ ವಿರುದ್ಧ ರಾಜ್ಯದಾದ್ಯಂತ ತೀವ್ರ ಆಕ್ರೋಶ ವ್ಯಕ್ತವಾಗುತ್ತಿದ್ದಂತೆ ಭಾನುವಾರ ಕ್ಷಮೆ ಯಾಚಿಸಿದ್ದಾರೆ.

ಗುಂಡ್ಲುಪೇಟೆ ತಾಲ್ಲೂಕಿನ ಹಂಗಳ ಗ್ರಾಮದಲ್ಲಿ ಶನಿವಾರ ನಡೆದ ನಿವೇಶನ ಹಕ್ಕುಪತ್ರ ವಿತರಣೆ ಕಾರ್ಯಕ್ರಮದಲ್ಲಿ ಈ ಘಟನೆ ನಡೆದಿದೆ. ಈ ವಿಡಿಯೊ ತುಣುಕು ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡಿದೆ.

'ಆ ಹೆಣ್ಣು ಮಗಳು ಪದೇ ಪದೇ ವೇದಿಕೆ ಮೇಲೆ ಬರುತ್ತಿದ್ದಳು. 'ತಾಯಿ ಎಷ್ಟು ಸಾರಿ ಬರುತ್ತೀಯಾ' ಎಂದು ವಿಚಾರಿಸಿದೆ. ನಿನ್ನ ಸಮಸ್ಯೆ ಬಗೆಹರಿಸುತ್ತೇನೆ ಎಂದು ಕೈಯಲ್ಲಿ ಪಕ್ಕಕ್ಕೆ ಸರಿಸಿದ್ದೇನೆ. ಯಾರಿಗಾದರೂ ನೋವಾಗಿದ್ದರೆ ಕ್ಷಮೆ ಯಾಚಿಸುತ್ತೇನೆ. ಆ ಹೆಣ್ಣು ಮಗಳಿಗೂ ಹಕ್ಕುಪತ್ರ ಕೊಡಿಸಿದ್ದೇನೆ' ಎಂದು ಸಚಿವರು ಕೊಳ್ಳೇಗಾಲದಲ್ಲಿ ಪ್ರತಿಕ್ರಿಯೆ ನೀಡಿದರು.

ವಿವರ: ಹಂಗಳ ಗ್ರಾಮ ಪಂಚಾಯ್ತಿ ವತಿಯಿಂದ 173 ಫಲಾನುಭವಿಗಳಿಗೆ ನಿವೇಶನ ಹಕ್ಕುಪತ್ರಗಳನ್ನು ವಿತರಿಸುವ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿತ್ತು.

'ಫಲಾನುಭವಿಗಳನ್ನು ಸರಿಯಾಗಿ ಆಯ್ಕೆ ಮಾಡಿಲ್ಲ, ಅನ್ಯಾಯವಾಗಿದೆ. ಕಾಂಗ್ರೆಸ್ ಮುಖಂಡ ನಂಜಪ್ಪ ಹೇಳಿದವರಿಗೆ ನಿವೇಶನ ನೀಡಲಾಗಿದೆ' ಎಂದು ಕೆಲ ಮಹಿಳೆಯರು ಸಚಿವರಿಗೆ ಮುತ್ತಿಗೆ ಹಾಕಲು ಯತ್ನಿಸಿದ್ದರು. ಆಗ ಕೆಂಪಮ್ಮ ಎಂಬವರು ಸಚಿವರ ಬಳಿಗೆ ಹೋಗಿ ಸಮಸ್ಯೆ ಹೇಳಲು ಮುಂದಾದಾಗ ಸೋಮಣ್ಣ ಕೆನ್ನೆಗೆ ಹೊಡೆದಿದ್ದರು.

ಮಹಿಳೆ ವಿಡಿಯೊ: ಬಳಿಕ ಕೆಂಪಮ್ಮ ಅವರು ಸ್ಪಷ್ಟನೆ ನೀಡುವ ವಿಡಿಯೊ ತುಣಕನ್ನು, ಸಚಿವರ ತಂಡ ನಿರ್ವಹಿಸುವ ಮಾಧ್ಯಮದವರ ವಾಟ್ಸ್‌ಆ್ಯಪ್ ಗ್ರೂಪ್‌ನಲ್ಲಿ ಹಾಕಲಾಗಿತ್ತು.

6ನೇ ಪುಟ ನೋಡಿ

ಜನಸಾಗರದ ಮಧ್ಯೆ ಶಾಸಕ ಮಾಮನಿ ಅಂತ್ಯಕ್ರಿಯೆ

ಸವದತ್ತಿ (ಬೆಳಗಾವಿ ಜಿಲ್ಲೆ): ಅನಾರೋಗ್ಯದಿಂದಾಗಿ ಶನಿವಾರ ರಾತ್ರಿ ನಿಧನರಾಗಿದ್ದ ವಿಧಾನ ಸಭೆಯ ಉಪಸಭಾಧ್ಯಕ್ಷ ಆನಂದ ಮಾಮನಿ (56) ಅವರ ಅಂತ್ಯಕ್ರಿಯೆ, ಇಲ್ಲಿನ ಯಡ್ರಾಂವಿ ರಸ್ತೆಯಲ್ಲಿರುವ ಅವರ ತೋಟದಲ್ಲಿ ಭಾನುವಾರ ಸಂಜೆ ನಡೆಯಿತು. ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಸೇರಿದಂತೆ ರಾಜ್ಯದ ಹಲವು ಸಚಿವರು, ಶಾಸಕರು ಅಂತಿಮ ದರ್ಶನ ಪಡೆದರು. 6

ಜಯದ ಹಣತೆ ಹಚ್ಚಿದ ವಿರಾಟ್

ಮೆಲ್ಬರ್ನ್ ಕ್ರಿಕೆಟ್ ಕ್ರೀಡಾಂಗಣದಲ್ಲಿ ವಿರಾಟ್ ಕೊಹ್ಲಿ ದೀಪಾವಳಿ ಸಂಭ್ರಮಕ್ಕೆ ಮುನ್ನುಡಿ ಬರೆದರು. ಭಾನುವಾರ ನಡೆದ ಟಿ20 ಕ್ರಿಕೆಟ್ ವಿಶ್ವಕಪ್ ಟೂರ್ನಿಯ ಪಂದ್ಯದಲ್ಲಿ ಕೊಹ್ಲಿ ಚೆಂದದ ಆಟದಿಂದಾಗಿ ರೋಹಿತ್ ಶರ್ಮಾ ಬಳಗವು ಪಾಕಿಸ್ತಾನದ ಎದುರು ರೋಚಕ ಜಯ ದಾಖಲಿಸಿತು.



ಪಾಕಿಸ್ತಾನ 8ಕ್ಕೆ 159 (20 ಓವರ್‌ಗಳಲ್ಲಿ)

ಭಾರತ 6ಕ್ಕೆ 160 (20 ಓವರ್‌ಗಳಲ್ಲಿ)

ಫಲಿತಾಂಶ: ಭಾರತಕ್ಕೆ 4 ವಿಕೆಟ್‌ಗಳ ಜಯ. 2 ಅಂಕ. (ಹಂತ: ಸೂಪರ್ 12, ಗುಂಪು: ಬಿ)

ವಿಜಯದ ರೂವಾರಿ ವಿರಾಟ್ ಕೊಹ್ಲಿಯನ್ನು ತಮ್ಮ ಹೆಗಲ ಮೇಲೆ ಹೊತ್ತು ಸಂಭ್ರಮಿಸಿದ ನಾಯಕ ರೋಹಿತ್ ಶರ್ಮಾ
—ಎಎಫ್‌ಪಿ ಚಿತ್ರ

ವಿರಾಟ್ ಕೊಹ್ಲಿ

82*	ರನ್
53	ಎಸೆತ
6	ಬೌಂಡರಿ
4	ಸಿಕ್ಸರ್
154.72	ಸ್ಟ್ರೈಕ್‌ರೇಟ್

14

ವಿದೇಶಿ ದೇಣಿಗೆ ಎರಡು ಸಂಸ್ಥೆಗಳ ಪರವಾನಗಿ ರದ್ದು

ನವದೆಹಲಿ (ಪಿಟಿಐ): ಕಾಂಗ್ರೆಸ್ ನಾಯಕಿ ಸೋನಿಯಾಗಾಂಧಿ ನೇತೃತ್ವದ ಎರಡು ಸಂಸ್ಥೆಗಳಿಗೆ, ವಿದೇಶಿ ನೆರವು ನಿಯಂತ್ರಣ ಕಾಯ್ದೆಯಡಿ (ಎಫ್‌ಸಿಆರ್‌ಎ) ನೀಡಲಾಗಿದ್ದ ಪರವಾನಗಿಯನ್ನು ಕೇಂದ್ರ ಸರ್ಕಾರ ರದ್ದುಪಡಿಸಿದೆ. 10

ಸತತ 3ನೇ ಬಾರಿಗೆ ಚೀನಾದ ಅಧ್ಯಕ್ಷರಾಗಿ ಜಿನ್‌ಪಿಂಗ್ ಆಯ್ಕೆ

ಬೀಜಿಂಗ್: ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಸತತ ಮೂರನೇ ಬಾರಿಗೆ ಚೀನಾ ಕಮ್ಯುನಿಸ್ಟ್ ಪಾರ್ಟಿಯ ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾಗುವ ಮೂಲಕ ದಾಖಲೆ ನಿರ್ಮಿಸಿದ್ದಾರೆ. ಸಿಪಿಸಿ ಪ್ರಧಾನ ಕಾರ್ಯದರ್ಶಿಯಾಗಿ ಪುನರಾಯ್ಕೆಯಾಗಿರುವ ಕಾರಣ, ಷಿ ಅವರು ದೇಶದ ಅಧ್ಯಕ್ಷರಾಗಿ ಹಾಗೂ ಸೇನೆಯ ಮುಖ್ಯಸ್ಥರಾಗಿಯೂ ಮುಂದುವರಿಯಲಿದ್ದಾರೆ. 10

ಎಲೆಚುಕ್ಕಿ ರೋಗ: ಅಧ್ಯಯನಕ್ಕೆ ತಜ್ಞರ ಸಮಿತಿ ರಚನೆ


ನವದೆಹಲಿ: ಕರ್ನಾಟಕದಲ್ಲಿ ಅಡಿಕೆ ತೋಟಗಳಲ್ಲಿ ಹಬ್ಬಿರುವ ಎಲೆಚುಕ್ಕಿ ರೋಗದ ಬಗ್ಗೆ ಅಧ್ಯಯನ ನಡೆಸಲು ಏಳು ತಜ್ಞರನ್ನು ಒಳಗೊಂಡ ಸಮಿತಿಯನ್ನು ಕೇಂದ್ರ ಕೃಷಿ ಸಚಿವಾಲಯ ರಚಿಸಿದೆ. 11

ಮೇಲ್ಸೇತುವೆ ಬದಲು ಸಾರ್ವಜನಿಕ ಸಾರಿಗೆ ಬಲಗೊಳಿಸಲು ಸಿಟಿಜನ್ ಫಾರ್ ಸಿಟಿಜನ್ ಸಂಸ್ಥೆ ಸಲಹೆ

ವಿಮಾನ ನಿಲ್ದಾಣಕ್ಕೆ ದಾರಿ: 4 ಮಾರ್ಗೋಪಾಯ

• ವಿಜಯಕುಮಾರ್ ಎಸ್.ಕೆ.

ಪ್ರಜಾವಾಣಿ ವಿಶೇಷ



ಹೈಗ್ರೌಂಡ್ಸ್ ವೃತ್ತದ ಬಳಿಯ ಸಂಚಾರ ದಟ್ಟಣೆ

ಬೆಂಗಳೂರು: ಬಸವೇಶ್ವರ ವೃತ್ತದಿಂದ ಹೆಬ್ಬಾಳದ ತನಕ ಸಿಗ್ನಲ್‌ಮುಕ್ತ ಮಾಡುವ ಮತ್ತೊಂದು ಪ್ರಸ್ತಾವನೆಯನ್ನು ಬಿಬಿಎಂಪಿ ಸಿದ್ಧಪಡಿಸಿದೆ. ಮೇಲ್ಸೇತುವೆ ಕಟ್ಟುವ ಬದಲು ಸಾರ್ವಜನಿಕ ಸಾರಿಗೆ ವ್ಯವಸ್ಥೆಯನ್ನು ಬಲಗೊಳಿಸುವುದು ಸೂಕ್ತ ಎಂದು ಸಿಟಿಜನ್ ಫಾರ್ ಸಿಟಿಜನ್ ಸಂಸ್ಥೆ ಸಲಹೆ ನೀಡಿದೆ.

ಬಸವೇಶ್ವರ ವೃತ್ತದಿಂದ ಹೆಬ್ಬಾಳ ತನಕ 7 ಕಿಲೋ ಮೀಟರ್ ಉದ್ದದ ಉಕ್ಕಿನ ಮೇಲ್ಸೇತುವೆ ನಿರ್ಮಾಣದ ಯೋಜನೆಯನ್ನು 2016ರಲ್ಲಿ ಪ್ರಸ್ತಾಪಿಸಿ ಸಾರ್ವಜನಿಕರ ವಿರೋಧ ವ್ಯಕ್ತವಾದ ಬಳಿಕ ಯೋಜನೆಯನ್ನು ಸರ್ಕಾರ ಕೈಬಿಟ್ಟಿತ್ತು. ಈಗ ಯೋಜನೆಯನ್ನು ಕೊಂಚ ಬದಲಿಸಿ ಕಾರ್ಯಗತಗೊಳಿಸಲು ಕಾರ್ಯಸಾಧ್ಯತೆ ವರದಿ ಹಾಗೂ ವಿಸ್ತೃತ ಯೋಜನಾ ವರದಿ (ಡಿಪಿಆರ್) ಸಿದ್ಧಪಡಿಸಲು ಬಿಬಿಎಂಪಿ ಟೆಂಡರ್ ಕರೆದಿದೆ.

ವಿಮಾನ ನಿಲ್ದಾಣ ಮಾರ್ಗಕ್ಕೆ ರಸ್ತೆಯನ್ನೇ ಅವಲಂಬಿಸದೆ ರೈಲು, ಉಪನಗರ ರೈಲು, ಮೆಟ್ರೊ ರೈಲುಗಳು ಆದಷ್ಟು ಬೇಗ ಜನರಿಗೆ ಲಭ್ಯವಾಗುವಂತೆ ಮಾಡಬೇಕು ಎಂಬುದು ಸಿಟಿಜನ್ ಫಾರ್ ಸಿಟಿಜನ್‌ನ ಸಂಸ್ಥಾಪಕ ರಾಜಕುಮಾರ್ ದುಗಾರ್ ಅವರ ಸಲಹೆ. ಈ ಸಂಬಂಧ ವರದಿಯೊಂದನ್ನು ಅವರ ತಂಡ ಸಿದ್ಧಪಡಿಸಿದೆ.

'ಈ ಮಾರ್ಗದಲ್ಲಿ ಪ್ರಮುಖವಾಗಿ ನಾಲ್ಕು ಕಡೆ ಸಂಚಾರ ದಟ್ಟಣೆ ಕಾಣಿಸುತ್ತಿದೆ. ಹೈಗ್ರೌಂಡ್ಸ್ ಜಂಕ್ಷನ್, ಬಿಡಿಎ ಕಚೇರಿ ಎದುರಿನ ಮೇಲ್ಸೇತುವೆ, ಕಾವೇರಿ ಚಿತ್ರಮಂದಿರ ಬಳಿಯ ವೃತ್ತ, ಮೇಖ್ರಿ ವೃತ್ತದಲ್ಲಿ ವಾಹನ ದಟ್ಟಣೆ ಕಾಣಿಸುತ್ತಿದೆ. ನಾಲ್ಕೂ ಕಡೆಗಳಲ್ಲಿ ಅತಿ ಕಡಿಮೆ ಖರ್ಚಿನಲ್ಲಿ ಸಣ್ಣ–ಸಣ್ಣ ಬದಲಾವಣೆಗಳನ್ನು ಮಾಡಿಕೊಂಡರೆ ವಾಹನ ಸಂಚಾರ ಸುಗಮ ಆಗಲಿದೆ. ಈ ಬಗ್ಗೆ ಅಧ್ಯಯನ ನಡೆಸಿದ್ದೇವೆ' ಎಂದು ಅವರು ಹೇಳಿದರು.

'ಹೈಗ್ರೌಂಡ್ಸ್ ಜಂಕ್ಷನ್‌ನಲ್ಲಿ ಬಸವೇಶ್ವರ ವೃತ್ತದ ಕಡೆಯಿಂದ ಬರುವ ವಾಹನಗಳು ಸ್ಯಾಂಕಿ ರಸ್ತೆಗೆ ಸಿಗ್ನಲ್ ರಹಿತವಾಗಿ ಹೋಗಲು ಅವಕಾಶ ಇದ್ದರೂ ಸಾಧ್ಯವಾಗುತ್ತಿಲ್ಲ. ಅರಮನೆ ರಸ್ತೆಗೆ ಹೋಗುವ ವಾಹನಗಳು ನಿಲ್ಲುವುದರಿಂದ ಬೇರೆ ವಾಹನಗಳೂ ನಿಲ್ಲಬೇಕಾಗಿದೆ. ಇನ್ನು ಸ್ಯಾಂಕಿ ರಸ್ತೆಯಿಂದ ಬರುವ ವಾಹನಗಳು ವೃತ್ತದಲ್ಲಿ ಐಲ್ಯಾಂಡ್ (ಚಿಕ್ಕ ಉದ್ಯಾನ) ಇರುವುದರಿಂದ ನಿಧಾನವಾಗಿ ಚಲಿಸಿ ಮುಂದೆ ಹೋಗುತ್ತಿವೆ. ಈ ವೃತ್ತದ ಮಧ್ಯದಲ್ಲಿರುವ ಉದ್ಯಾನವನ್ನು ತೆರವುಗೊಳಿಸಿ ಸಿಗ್ನಲ್‌ಗಳನ್ನಷ್ಟೇ ಇರಿಸಿದರೆ ದಟ್ಟಣೆ ಕಡಿಮೆಯಾಗಲಿದೆ' ಎಂದು ವಿವರಿಸಿದರು.

ಬಿಡಿಎ ಕಚೇರಿ ಬಳಿ ಮೇಲ್ಸೇತುವೆಯನ್ನು ಅವೈಜ್ಞಾನಿಕವಾಗಿ ನಿರ್ಮಿಸಲಾಗಿದೆ. ಮೇಖ್ರಿ ವೃತ್ತದಿಂದ ಬರುವ ವಾಹನಗಳು ಸರ್ವೀಸ್ ರಸ್ತೆಯಲ್ಲಿ ಮುಂದುವರಿದರೆ ಅರಮನೆ ರಸ್ತೆ ಕಡೆಗೆ ಎಡ ತಿರುವು ಪಡೆದು ಮುಂದೆ ಹೋಗಿ ಯೂಟರ್ನ್ ಪಡೆದು ವಾಪಸ್ ಬರಬೇಕಾಗಿದೆ. ಒಂದು ಗಂಟೆ ಅವಧಿಯಲ್ಲಿ ಸರಾಸರಿ 800 ವಾಹನಗಳು ಹೀಗೆ ಯೂಟರ್ನ್ ಪಡೆಯುತ್ತಿವೆ. ಯೂಟರ್ನ್ ಪಡೆಯದೆ ನೇರವಾಗಿ ತೆರಳಲು ಅನುಕೂಲ ಮಾಡಿ ಸೇತುವೆ ಕೆಳಗೆ ಸಿಗ್ನಲ್ ಅಳವಡಿಸಿದರೆ ಸಮಸ್ಯೆ ಪರಿಹಾರವಾಗಲಿದೆ ಎಂದರು.

ಕಾವೇರಿ ಜಂಕ್ಷನ್‌ನಲ್ಲಿರುವ ಮ್ಯಾಜಿಕ್ ಬಾಕ್ಸ್ ಉಪಯೋಗಕ್ಕೆ ಬಾರದಾಗಿದೆ. ಇಲ್ಲಿ ಸಿಗ್ನಲ್ ಇಲ್ಲದಿದ್ದರೂ ಪೊಲೀಸರು ಹಗ್ಗ ಹಿಡಿದು ನಿಲ್ಲಬೇಕಾಗಿದೆ. ಬಸವೇಶ್ವರ ವೃತ್ತದಿಂದ ಬರುವ ವಾಹನಗಳು ಮ್ಯಾಜಿಕ್ ಬಾಕ್ಸ್ ಮೇಲೆ ಹೋಗಿ ಯೂಟರ್ನ್ ತೆಗೆದುಕೊಳ್ಳಬೇಕಿದ್ದು, ಇಲ್ಲಿ ಭಾರಿ ವಾಹನಗಳು ಸಿಲುಕಿಕೊಳ್ಳುತ್ತಿವೆ. ಆ ಭಾಗದಲ್ಲಿ ರಸ್ತೆ ವಿಸ್ತರಣೆ ಮಾಡಿದರೆ ಸಮಸ್ಯೆ ಕೊಂಚ ಪರಿಹಾರವಾಗಲಿದೆ. ಇಲ್ಲದಿದ್ದರೆ ಸಿಗ್ನಲ್ ಅಳವಡಿಸಿಯೂ ಸಮಸ್ಯೆಗೆ ಪರಿಹಾರ ಕಂಡುಕೊಳ್ಳಬಹುದು ಎಂದರು.

ಗಣ್ಯರು ಹೆಲಿಕಾಪ್ಟರ್ ಬಳಸುವುದು ಸೂಕ್ತ

ವಿಮಾನ ನಿಲ್ದಾಣಕ್ಕೆ ಹೋಗುವ ಮತ್ತು ಅಲ್ಲಿಂದ ಬರುವ ಗಣ್ಯರಿಗೆ ಹೆಲಿಕಾಪ್ಟರ್ ಸೇವೆ ಒದಗಿಸಿದರೆ ಈ ರಸ್ತೆಯಲ್ಲಿನ ವಾಹನ ದಟ್ಟಣೆ ಸಮಸ್ಯೆಗೆ ದೊಡ್ಡ ಪರಿಹಾರ ಸಿಕ್ಕಂತಾಗಲಿದೆ.

ಗಣ್ಯರ ವಾಹನಗಳಿಗೆ ಸಿಗ್ನಲ್ ಮುಕ್ತ ವ್ಯವಸ್ಥೆ ಕಲ್ಪಿಸಲಾಗುತ್ತಿದೆ. ಈ ರಸ್ತೆಯಲ್ಲಿನ ಸಂಚಾರ ದಟ್ಟಣೆಗೆ ನಿತ್ಯ ಶೇ 25ರಷ್ಟು ಕೊಡುಗೆಯನ್ನು ಇದು ನೀಡುತ್ತಿದೆ. 'ಗಣ್ಯರಿಗೆ ಹೆಲಿಕಾಪ್ಟರ್ ಸೇವೆ ಒದಗಿಸಿದರೆ ಶೇ 25ರಷ್ಟು ಸಮಸ್ಯೆ ಪರಿಹಾರವಾದಂತೆ. ಸಾರ್ವಜನಿಕರ ಇಂಧನ ವೆಚ್ಚ, ಪರಿಸರಕ್ಕೆ ಆಗುತ್ತಿರುವ ಪರಿಣಾಮ ಎಲ್ಲವನ್ನೂ ಲೆಕ್ಕ ಮಾಡಿದರೆ ಗಣ್ಯರಿಗೆ ಹೆಲಿಕಾಪ್ಟರ್ ಸೇವೆ ಒದಗಿಸುವುದು ದುಬಾರಿ ಆಗಲಾರದು' ಎನ್ನುವುದು ರಾಜಕುಮಾರ್ ದುಗಾರ್ ಅವರ ಅಭಿಪ್ರಾಯ.

ಮೇಖ್ರಿ ವೃತ್ತ: ಸಣ್ಣ ಪರಿಹಾರ

ಹೆಬ್ಬಾಳ ಕಡೆಯಿಂದ ಬರುವ ವಾಹನಗಳು ಜಯಮಹಲ್ ರಸ್ತೆ ಮತ್ತು ಸಿ.ವಿ. ರಾಮನ್ ರಸ್ತೆ ಕಡೆಗೆ ಹೋಗಲು ಕಿರಿದಾದ ಸರ್ವೀಸ್ ರಸ್ತೆ ಮೂಲಕ ಮೇಖ್ರಿ ವೃತ್ತಕ್ಕೆ ಬರುತ್ತಿವೆ. ಅಲ್ಲಿ ದಟ್ಟಣೆ ಸಂದರ್ಭದಲ್ಲಿ ವಾಹನಗಳು ಹೆದ್ದಾರಿಗೂ ವಿಸ್ತರಣೆಗೊಳ್ಳುತ್ತಿದ್ದು, ನೇರವಾಗಿ ಕೆಳಸೇತುವೆಯಲ್ಲಿ ಹೋಗಬೇಕಾದ ವಾಹನಗಳ ಸಂಚಾರಕ್ಕೂ ತೊಡಕಾಗುತ್ತಿದೆ.

ಮೇಲೆ ಹೋಗಲು ಇರುವ ರಸ್ತೆಯನ್ನು ಕೊಂಚ ವಿಸ್ತರಣೆ ಮಾಡಿದರೆ ಈ ವೃತ್ತದ ಸಮಸ್ಯೆಯೂ ಪರಿಹಾರವಾಗಲಿದೆ ಎಂಬುದು ಸಿಟಿಜನ್ ಫಾರ್ ಸಿಟಿಜನ್ ಸಿದ್ಧಪಡಿಸಿರುವ ವರದಿ ಹೇಳುತ್ತದೆ.

ಸುದ್ದಿ 2 ನಿಮಿಷ

ಇಕೋವಾಕ್ಸ್ ರೊಬೊಟಿಕ್ಸ್‌ಗೆ ಯಾಮಿ ಗೌತಮ್ ರಾಯಭಾರಿ

ಬೆಂಗಳೂರು: ಗೃಹ ಸೇವಾ ಕ್ಷೇತ್ರದಲ್ಲಿ ರೊಬೊಟಿಕ್ಸ್‌ನಲ್ಲಿ ಮುಂಚೂಣಿಯಲ್ಲಿರುವ ಇಕೋವಾಕ್ಸ್ ರೊಬೊಟಿಕ್ಸ್ ಈಗ ಬಾಲಿವುಡ್ ನಟಿ ಯಾಮಿ ಗೌತಮ್ ಅವರನ್ನು ಭಾರತೀಯ ರಾಯಭಾರಿಯಾಗಿ ನೇಮಿಸಿಕೊಂಡಿದೆ.



ಈ ಕುರಿತು ಪ್ರತಿಕ್ರಿಯಿಸಿರುವ ಇಕೋವಾಕ್ಸ್ ರೊಬೊಟಿಕ್ಸ್ ಉಪಾಧ್ಯಕ್ಷ ಜಾನಿ ಝು, 'ಯಾಮಿ ಗೌತಮ್ ಅವರನ್ನು ನಮ್ಮ ಕಂಪನಿಯ ಭಾರತೀಯ ಬ್ರ್ಯಾಂಡ್ ಅಂಬಾಸಿಡರ್ ಆಗಿ ನೇಮಕ ಮಾಡಿರುವುದು ಸಂತಸದ ವಿಷಯ. ದೇಶದಲ್ಲಿ ನಮ್ಮ ಕಂಪನಿಯ ಬೆಳವಣಿಗೆಗೆ ಅನುಕೂಲ ಆಗಲಿದೆ' ಎಂದರು. ನಟಿ ಯಾಮಿ ಗೌತಮ್ ಮಾತನಾಡಿ, 'ಜಾಗತಿಕ ಮಟ್ಟದ ಕಂಪನಿಯಾಗಿ ಬೆಳೆದಿರುವ ಇಕೋವ್ಯಾಕ್ಸ್‌ನ ಭಾಗವಾಗಲು ನನಗೆ ಸಂತೋಷವಿದೆ' ಎಂದು ಹೇಳಿದರು.

ಅತಿಥಿ ಉಪನ್ಯಾಸಕರ ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

ಬೆಂಗಳೂರು: ಬೆಂಗಳೂರು ನಗರ ವಿಶ್ವವಿದ್ಯಾಲಯದ 2022–23ನೇ ಸಾಲಿನ ಅತಿಥಿ ಉಪನ್ಯಾಸಕರ ಹುದ್ದೆಗೆ ಆನ್‌ಲೈನ್ ಮೂಲಕ ಸಲ್ಲಿಸುವ ಅರ್ಜಿ ಸಲ್ಲಿಸಲು ಅಕ್ಟೋಬರ್ 31ರ ವರೆಗೆ ಗಡುವು ವಿಸ್ತರಿಸಲಾಗಿದೆ.

ಉಡುಪು ಮತ್ತು ತಂತ್ರಜ್ಞಾನ, ಗಣಕ ವಿಜ್ಞಾನ, ಸಸ್ಯವಿಜ್ಞಾನ, ಪ್ರಾಣಿವಿಜ್ಞಾನ, ಸಮಾಜ ವಿಜ್ಞಾನ, ಸಮಾಜಕಾರ್ಯ, ಕನ್ನಡ, ಇಂಗ್ಲಿಷ್, ಹಿಂದಿ, ಅರ್ಥಶಾಸ್ತ್ರ, ರಾಜ್ಯಶಾಸ್ತ್ರ, ಇತಿಹಾಸ, ಸಂವಹನ ಮತ್ತು ಪತ್ರಿಕೋದ್ಯಮ ವಿಷಯಗಳ ಅತಿಥಿ ಉಪನ್ಯಾಸಕರ ಹುದ್ದೆಗೆ ಅರ್ಜಿ ಆಹ್ವಾನಿಸಲಾಗಿದೆ.

ವಿಶ್ವವಿದ್ಯಾಲಯದ ಅಧಿಸೂಚನೆ ಪ್ರಕಾರ 2022ರ ಆಗಸ್ಟ್ 29 ಮತ್ತು ಸೆಪ್ಟೆಂಬರ್ 16ರಂದು ಪದವಿ ಮತ್ತು ಸ್ನಾತಕೋತ್ತರ ವಿಭಾಗಗಳಿಗೆ ಹಾಗೂ ಮಲ್ಲೇಶ್ವರದ ಬಹುಶಿಸ್ತೀಯ ಮಹಿಳಾ ಕಾಲೇಜಿಗೆ ಅತಿಥಿ ಉಪನ್ಯಾಸಕರ ನೇಮಕಾತಿಗೆ ಅರ್ಜಿ ಆಹ್ವಾನಿಸಲಾಗಿತ್ತು. ಭೌತಿಕ ಪ್ರತಿಯನ್ನು ಇದೇ 31ರೊಳಗೆ ಸಲ್ಲಿಸಬೇಕು ಎಂದು ಪ್ರಕಟಣೆ ತಿಳಿಸಿದೆ.

ನದಿಗಳ ಸ್ಥಿತಿ ವರದಿ ತಯಾರಿ

ಬೆಂಗಳೂರು: ಅಜೀಂ ಪ್ರೇಂಜಿ ವಿಶ್ವವಿದ್ಯಾಲವು 'ರಿವರ್ಸ್ ಆಫ್ ಲೈಫ್' ಶೀರ್ಷಿಕೆಯಡಿ ಹಮ್ಮಿಕೊಂಡಿದ್ದ ಇಂಟರ್ನ್‌ಷಿಪ್ ಕಾರ್ಯಕ್ರಮದಲ್ಲಿ ದೇಶದ ಪ್ರಮುಖ ನದಿಗಳ ಸ್ಥಿತಿಗತಿಯ ಬಗ್ಗೆ ವಿದ್ಯಾರ್ಥಿಗಳು ವರದಿ ಸಿದ್ಧಪಡಿಸಿದ್ದಾರೆ.

ವಿವಿಯು 2022ರ ಮೇ ತಿಂಗಳಲ್ಲಿ ಪ್ರವೇಶಗಳನ್ನು ಆಹ್ವಾನಿಸಿತ್ತು. ಸಲ್ಲಿಕೆಯಾಗಿದ್ದ 200ಕ್ಕೂ ಅಧಿಕ ಪ್ರವೇಶಗಳಲ್ಲಿ 50 ವಿದ್ಯಾರ್ಥಿಗಳನ್ನು ಆಯ್ಕೆ ಮಾಡಲಾಗಿತ್ತು. 1 ತಿಂಗಳ ಕಾರ್ಯಕ್ರಮದಲ್ಲಿ ತರಬೇತಿ ನೀಡಲಾಗಿತ್ತು. ವೃಷಭಾವತಿ, ಗೋದಾವರಿ, ಕೃಷ್ಣ, ಗಂಗಾ, ಬ್ರಹ್ಮಪುತ್ರ ಸೇರಿ ವಿವಿಧ ನದಿಗಳ ವರದಿ ತಯಾರಿಸಲಾಗಿದೆ.

'ಅನೇಕ ನದಿಗಳು ಕಲುಷಿತಗೊಂಡಿವೆ. ವಿವಿಧ ಸಂಘ–ಸಂಸ್ಥೆಗಳ ನೆರವಿನಿಂದ ದೇಶದಲ್ಲಿನ 150ಕ್ಕೂ ಅಧಿಕ ನದಿಗಳ ಸ್ಥಿತಿಗತಿಯನ್ನು ದಾಖಲಿಸಲಾಗುವುದು' ಎಂದು ವಿಶ್ವವಿದ್ಯಾಲಯದ ಪ್ರಕಟಣೆ ತಿಳಿಸಿದೆ.

ಹೈಕೋರ್ಟ್ ನ್ಯಾಯಮೂರ್ತಿ ಪದ್ಮರಾಜ ದೇಸಾಯಿ ಅಭಿಪ್ರಾಯ

ಕಲುಷಿತ ವಾತಾವರಣ: ಜೈನ ತತ್ವದಿಂದ ಪರಿಹಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕಲುಷಿತ ವಾತಾವರಣದಲ್ಲಿ ಸಮಾಜವಿದೆ. ಈ ವೇಳೆ ಜೈನ ತತ್ವಗಳ ಪ್ರಸಾರ ಅಗತ್ಯ' ಎಂದು ಹೈಕೋರ್ಟ್ ನ್ಯಾಯಮೂರ್ತಿ ಪದ್ಮರಾಜ ದೇಸಾಯಿ ತಿಳಿಸಿದರು.

ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿ ಟ್ರಸ್ಟ್ ನಗರದಲ್ಲಿ ಭಾನುವಾರ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ಅನಿತಾ ಸುರೇಂದ್ರ ಕುಮಾರ್ ಅವರಿಗೆ 'ಆದರ್ಶ ಜೈನ ಮಹಿಳಾ ರತ್ನ ಪ್ರಶಸ್ತಿ' ಪ್ರದಾನ ಮಾಡಲಾಯಿತು. ಈ ಪ್ರಶಸ್ತಿಯು ₹ 25 ಸಾವಿರ ನಗದು ಒಳಗೊಂಡಿದೆ. 'ಬದಲಾದ ಸಮಾಜದಲ್ಲಿ ಮಹಿಳೆಯರು ಎಲ್ಲ ಕ್ಷೇತ್ರಗಳಲ್ಲಿಯೂ ಮುನ್ನೆಲೆಗೆ ಬರುತ್ತಿದ್ದಾರೆ. ನ್ಯಾಯಾಲಯ ಸೇರಿ ವಿವಿಧೆಡೆ ಮಹಿಳಾ ಪ್ರಾತಿನಿಧ್ಯ ಹೆಚ್ಚುತ್ತಿದೆ. ಇದು ಉತ್ತಮ ಬೆಳವಣಿಗೆ. ಈ ಸಮಾಜದಲ್ಲಿ ಜೈನರಾಗಿ ಹುಟ್ಟುವುದು ಮಹಾಪುಣ್ಯ. ಅದರಲ್ಲೂ ಆದರ್ಶರಾಗಿ ಜೀವನ ನಡೆಸುವುದು ಇನ್ನೂ ಶ್ರೇಷ್ಠ' ಎಂದು ನ್ಯಾ. ಪದ್ಮರಾಜ ದೇಸಾಯಿ ಹೇಳಿದರು.

ಸಾಹಿತಿ ಹಂ.ಪ. ನಾಗರಾಜಯ್ಯ, 'ಸಾಮಾಜಿಕ ಕಾರ್ಯಗಳಲ್ಲಿ ಧರ್ಮದ ಕಾರ್ಯವನ್ನೂ ಮಾಡುವ ಕೆಲಸವಾಗಬೇಕು. ಎಲ್ಲ ಧರ್ಮಗಳನ್ನು ಸಮಾನ, ಸಹಿಷ್ಣುತೆಯಿಂದ ಕಾಣುವವರು ನಮ್ಮ ನಡುವೆ ಇದ್ದಾರೆ. ಅಂತಹವರನ್ನು ನಾವು ಆದರ್ಶವಾಗಿ ಸ್ವೀಕರಿಸಬೇಕು. ಆದರ್ಶಗಳನ್ನು ಕಲಿಯಲು ಪುಸ್ತಕ ಓದಬೇಕಿಲ್ಲ. ಧರ್ಮಸ್ಥಳದ ವಿರೇಂದ್ರ ಹೆಗ್ಗಡೆ ಅವರ ಕುಟುಂಬವೇ ಒಂದು ಆದರ್ಶ' ಎಂದರು.

ಪ್ರಶಸ್ತಿ ಪುರಸ್ಕೃತೆ ಅನಿತಾ ಸುರೇಂದ್ರ ಕುಮಾರ್, 'ಧರ್ಮಸ್ಥಳದ ಮೇಲಿನ ಪ್ರೀತಿಯಿಂದ ಎಲ್ಲರೂ ನನ್ನ ಸಾಮಾಜಿಕ, ಧಾರ್ಮಿಕ ಕಾರ್ಯಕ್ಕೆ ಸಹಕರಿಸಿದ್ದಾರೆ. ಜೈನ ಪರಂಪರೆ ದೊಡ್ಡದು ಹಾಗೂ ಅದ್ಭುತವಾದದ್ದಾಗಿದೆ. ನಮ್ಮ ಯುವಜನಾಂಗ ಮಹಾನುಭವರ ಆದರ್ಶ, ಚಿಂತನೆಗಳಿಂದ ದೂರವಾಗದಂತೆ ನೋಡಿಕೊಳ್ಳಬೇಕು. ಈ ಜವಾಬ್ದಾರಿ ನಮ್ಮ ಮೇಲಿದೆ' ಎಂದರು.

108 ಶ್ರೀ ಅಮೋಘಕೀರ್ತಿ ಮುನಿಮಹಾರಾಜರು ಹಾಗೂ 108 ಶ್ರೀ ಅಮರಕೀರ್ತಿ ಮುನಿಮಹಾರಾಜರು ದಿವ್ಯ ಸಾನ್ನಿಧ್ಯ ವಹಿಸಿದ್ದರು.

ಇದೇ ವೇಳೆ ಪಿಯುಸಿಯಲ್ಲಿ ಶೇ 90ಕ್ಕಿಂತ ಅಧಿಕ ಹಾಗೂ ಎಸ್ಸೆಸ್ಸೆಲ್ಸಿಯಲ್ಲಿ ಶೇ 92ಕ್ಕಿಂತ ಅಧಿಕ ಅಂಕ ಪಡೆದ ವಿದ್ಯಾರ್ಥಿಗಳಿಗೆ ಪ್ರತಿಭಾ ಪುರಸ್ಕಾರ ಪ್ರದಾನ ಮಾಡಲಾಯಿತು.



ಅನಿತಾ ಸುರೇಂದ್ರ ಕುಮಾರ್ ಅವರಿಗೆ ಸಾಹಿತಿ ಕಮಲಾ ಹಂಪನಾ ಅವರು 'ಆದರ್ಶ ಜೈನ ಮಹಿಳಾ ರತ್ನ ಪ್ರಶಸ್ತಿ' ಪ್ರದಾನ ಮಾಡಿದರು. ಪಂಡಿತರತ್ನ ಎ. ಶಾಂತಿರಾಜಶಾಸ್ತ್ರಿ ಟ್ರಸ್ಟ್ ಅಧ್ಯಕ್ಷ ಎಸ್. ಜಿತೇಂದ್ರ ಕುಮಾರ್, ಹಂ.ಪ. ನಾಗರಾಜಯ್ಯ, ನ್ಯಾ. ಪದ್ಮರಾಜ ದೇಸಾಯಿ ಹಾಗೂ ಟ್ರಸ್ಟ್‌ನ ಧರ್ಮದರ್ಶಿ ಪಿ.ವೈ. ರಾಜೇಂದ್ರ ಕುಮಾರ್ ಇದ್ದಾರೆ.



ರಾಜರಾಜೇಶ್ವರಿನಗರ ಬಳಿಯ ಕೆಂಗುಂಟೆ ಸರ್ಕಲ್‌ನಿಂದ ನಾಗರಭಾವಿ ಸರ್ಕಲ್ ಹತ್ತಿರದ 'ನಮ್ಮೂರ ಉಪಚಾರ್' ಹೋಟೆಲ್‌ವರೆಗೆ ಕಾಣಸಿಗುವ ರಸ್ತೆ ಗುಂಡಿಗಳ ನಮೂನೆ ಇದು. ದ್ವಿಚಕ್ರ ವಾಹನ ಸವಾರರು ಪ್ರತಿನಿತ್ಯ ಇಲ್ಲಿ ಗುಂಡಿ ತಪ್ಪಿಸಲು ಹೋಗಿ ಬಿದ್ದು ಗಾಯಗೊಂಡಿರುವ ಅಸಂಖ್ಯ ಉದಾಹರಣೆಗಳಿವೆ.

ಹೊರಗೆ ಹೋಗುವಾಗ ಮುಖಗವಸು ಧರಿಸಿ

ಆಧಾರ್ ದತ್ತಾಂಶ: ಸುಪ್ರೀಂ ಕೋರ್ಟ್‌ಗೆ ಅರ್ಜಿ ಸಲ್ಲಿಸಲು ಸಲಹೆ

ಬೆಂಗಳೂರು: 'ಆಧಾರ್ ಬಯೊಮೆಟ್ರಿಕ್, ಆಧಾರ್ ವ್ಯವಸ್ಥೆಯಿಂದ ಸಂಗ್ರಹಿಸಿರುವ ದತ್ತಾಂಶ ನಿರ್ವಹಣೆ ಗುತ್ತಿಗೆಯನ್ನು ಅಮೆರಿಕ ಸೇರಿ 4 ವಿದೇಶಿ ಕಂಪನಿಗಳಿಗೆ ನೀಡಿರುವ ಬಗೆಗಿನ ಆಕ್ಷೇಪಕ್ಕೆ ಸಂಬಂಧಿಸಿ ಸುಪ್ರೀಂ ಕೋರ್ಟ್ ಮುಂದೆ ಅರ್ಜಿ ಸಲ್ಲಿಸಿ ಪರಿಹಾರ ಪಡೆದುಕೊಳ್ಳಿ' ಎಂದು ಹೈಕೋರ್ಟ್, ಅರ್ಜಿದಾರರಿಗೆ ಸಲಹೆ ನೀಡಿದೆ.

ಈ ಸಂಬಂಧ ಥಣಿಸಂದ್ರ ನಿವಾಸಿ ಮ್ಯಾಥ್ಯೂ ಥಾಮಸ್ ಸಲ್ಲಿಸಿದ್ದ ಅರ್ಜಿಯನ್ನು ಮುಖ್ಯ ನ್ಯಾಯಮೂರ್ತಿ ಪಿ.ಬಿ. ವರಾಳೆ ನೇತೃತ್ವದ ವಿಭಾಗೀಯ ನ್ಯಾಯಪೀಠ ಗುರುವಾರ ವಿಚಾರಣೆ ನಡೆಸಿತು. ಅರ್ಜಿದಾರರ ವಾದ ಆಲಿಸಿದ ನ್ಯಾಯಪೀಠ, 'ಈ ಕುರಿತು ಸುಪ್ರಿಂ ಕೋರ್ಟ್ ವಿಚಾರಣೆ ನಡೆಸುವುದೇ ಸೂಕ್ತ' ಎಂದಿತು. ಈ ಸಲಹೆಯನ್ನು ಸ್ವೀಕರಿಸಿದ ಅರ್ಜಿದಾರರು, ಅರ್ಜಿ ಹಿಂಪಡೆಯುವುದಾಗಿ ತಿಳಿಸಿದರು.

ಮನವಿಯೇನು?: 'ಆಧಾರ್ ಬಯೊಮೆಟ್ರಿಕ್ ಮತ್ತು ಆಧಾರ್ ಮೂಲಕ ಸಂಗ್ರಹಿಸಲಾದ ದತ್ತಾಂಶಗಳ ನಿರ್ವಹಣೆ ಗುತ್ತಿಗೆಯನ್ನು 4 ವಿದೇಶಿ ಕಂಪನಿಗಳಿಗೆ ನೀಡಲಾಗಿದೆ. ಗುತ್ತಿಗೆ ಪಡೆದಿರುವ ಅಮೆರಿಕದ ಕಂಪನಿಯು ಅಲ್ಲಿನ ಎಫ್‌ಬಿಐ ಮತ್ತು ಕೇಂದ್ರ ಗುಪ್ತಚರ ಏಜೆನ್ಸಿಯೊಂದಿಗೆ ಕಾರ್ಯ ನಿರ್ವಹಿಸುತ್ತದೆ. ಹಾಗಾಗಿ, ಆಧಾರ್ ದತ್ತಾಂಶ ಈ ಎಲ್ಲಾ ಕಂಪನಿಗಳಿಗೆ ಸುಲಭವಾಗಿ ಲಭ್ಯವಾಗುತ್ತದೆ' ಎಂಬುದು ಅರ್ಜಿದಾರರ ಆಕ್ಷೇಪ.

ಕುಂದು ಕೊರತೆ ಜನದನಿ



ನಗರದ ಮೂಲಸೌಕರ್ಯ ಸಮಸ್ಯೆಗಳ ಕುರಿತ ನಿಮ್ಮ ಕುಂದು ಕೊರತೆಗಳಿಗೆ ಪ್ರಜಾವಾಣಿ ಧ್ವನಿಯಾಗಲಿದೆ. ಕುಂದು ಕೊರತೆಗಳನ್ನು 150 ಪದಗಳ ಮಿತಿಯಲ್ಲಿ ಬರೆದು ಕಳುಹಿಸಿ. ಸಮಸ್ಯೆಯ ಗಂಭೀರತೆಯನ್ನು ಬಿಂಬಿಸುವ ಚಿತ್ರವೂ ಇರಲಿ. ನಿಮ್ಮ ಕುಂದುಕೊರತೆಗಳನ್ನು ಪತ್ರಿಕೆಯಲ್ಲಿ ಪ್ರಕಟಿಸಲಾಗುತ್ತದೆ.

ನಿಮ್ಮ ಅಹವಾಲುಗಳನ್ನು ಇ ಮೇಲ್ ಮಾಡಬೇಕಾದ ವಿಳಾಸ:
peoplesproblem@prajavani.co.in.
ಸಮಸ್ಯೆಗಳ ಕುರಿತ ಬರಹಗಳನ್ನು ವಾಟ್ಸ್ ಆ್ಯಪ್ (9606038256) ಸಹ ಮಾಡಬಹುದು.



ಕಸ್ತೂರಬಾ ನಗರ ಮತ್ತು ಮಲ್ಲೇಶ್ವರ ರಸ್ತೆಗಳಲ್ಲಿ ಬಿದ್ದಿರುವ ಗುಂಡಿಗಳು

'ರಸ್ತೆ ದುರಸ್ತಿ ಯಾವಾಗ?'

ಕಸ್ತೂರಬಾ ನಗರ ಮತ್ತು ಮಲ್ಲೇಶ್ವರ ರಸ್ತೆಗಳಲ್ಲಿ ಗುಂಡಿಗಳಿದ್ದು, ದುರಸ್ತಿಯಾಗಬೇಕಾಗಿದೆ. ಬಹಳ ತಿಂಗಳಿಂದ ಸಮಸ್ಯೆ ಹಾಗೆಯೇ ಇದ್ದು, ಇದುವರೆಗೂ ದುರಸ್ತಿ ಮಾಡಿಲ್ಲ. ಗುಂಡಿ ಇರುವ ಕಾರಣ ಭಾರಿ ಮಳೆಯಿಂದ ವಾಹನ ಸವಾರರಿಗೆ, ಜನ ಸಾಮಾನ್ಯರಿಗೆ ಓಡಾಡಲು ಸಮಸ್ಯೆಯಾಗುತ್ತಿದ್ದು. ರಾತ್ರಿ ವೇಳೆಯಲ್ಲಿ ಕೆಲವೊಮ್ಮೆ ಅಪಘಾತ ಸಂಭವಿಸುವ ಸಾಧ್ಯತೆ ಇದೆ. ಬಿಬಿಎಂಪಿ ಅಧಿಕಾರಿಗಳು ರಸ್ತೆ ದುರಸ್ತಿ ಕಾರ್ಯಕ್ಕೆ ಮುಂದಾಗಬೇಕು.

ಆದಿತ್ಯ ಜೇವೂರ್



ಪಾದಚಾರಿ ಮಾರ್ಗದ ಮೇಲೆ ಅಕ್ರಮ ಕಟ್ಟಡ ನಿರ್ಮಾಣ ತೆರವಿಗೆ ಆಗ್ರಹ

'ಪಾದಚಾರಿ ಮಾರ್ಗವೂ ಒತ್ತುವರಿ'

ಚಿಕ್ಕಪೇಟೆಯ ವಾರ್ಡ್ ನಂ.109ರ ಆಸ್ಪತ್ರೆ ರಸ್ತೆಯ ಪಾದಚಾರಿ ಮಾರ್ಗದಲ್ಲಿ ಪಾಲಿಕೆ ಅಧಿಕಾರಿಗಳ ಸಹಾಯದಿಂದ ಗೋಡೆಯನ್ನು ನಿರ್ಮಿಸಲಾಗುತ್ತಿದೆ. ಈ ಕುರಿತು ಅಧಿಕಾರಿಗಳಿಗೆ ದೂರು ನೀಡಿದರೂ ಯಾವುದೇ ಪ್ರಯೋಜನವಾಗಿಲ್ಲ. ಅಕ್ರಮ ಕಟ್ಟಡ ನಿರ್ಮಾಣ ಮಾಡಲು ಸಹಕಾರ ನೀಡಿರುವ ಅಧಿಕಾರಗಳ ನಡೆ ಖಂಡನೀಯ. ಈ ಮಾರ್ಗದಲ್ಲಿ ಸಾರ್ವಜನಿಕರು ಸಂಚರಿಸಲು ತೊಂದರೆಯಾಗುತ್ತಿದ್ದು, ಜೀವ ಕೈಯಲ್ಲಿ ಹಿಡಿದುಕೊಂಡು ಮುಖ್ಯರಸ್ತೆಯಲ್ಲಿ ಓಡಾಡುವ ಪರಿಸ್ಥಿತಿ ನಿರ್ಮಾಣವಾಗಿದೆ.

ಶಿವಪ್ರಸಾದ್, ಸ್ಥಳೀಯ ನಿವಾಸಿ

'ಬಸ್ ನಿಲ್ದಾಣ ನಿರ್ಮಿಸಿ'

ಜಯನಗರದ 4ನೇ ಬ್ಲಾಕ್‌ನ ಲಲಿತ ಜ್ಯುವೆಲರಿ ಮಾರ್ಟ್ ಎದುರಿನಲ್ಲಿ ಬಸ್ ನಿಲ್ದಾಣ ನಿರ್ಮಿಸಬೇಕು. ಸಂಜಯ ಗಾಂಧಿ ಆಸ್ಪತ್ರೆ, ಜಯದೇವ ಆಸ್ಪತ್ರೆ, ಬಿಟಿಎಂ ಬಡಾವಣೆಗೆ ಹಾಗೂ ಹೊಸೂರು ರಸ್ತೆಗೆ ಸಂಪರ್ಕ ಕಲ್ಪಿಸಲು ಅಗತ್ಯ ಬಿಎಂಟಿಸಿ ಬಸ್‌ಗಳು ಸಂಚರಿಸಲು ಕ್ರಮ ಕೈಗೊಳ್ಳಬೇಕು. ಈ ಭಾಗದಲ್ಲಿ ಬಸ್ ನಿಲ್ದಾಣವಿಲ್ಲ. ಹಿರಿಯ ನಾಗರಿಕರಿಗೆ ಹಾಗೂ ಇತರೆ ಪ್ರಯಾಣಿಕರು ಮಳೆ, ಬಿಸಿಲಿನಲ್ಲಿ ಕಾಯಬೇಕಾದ ಪರಿಸ್ಥಿತಿ ಇದೆ. ಸಂಬಂಧಪಟ್ಟ ಅಧಿಕಾರಿಗಳು ಬಸ್ ನಿಲ್ದಾಣ ನಿರ್ಮಿಸಲು ಕ್ರಮ ಕೈಗೊಳ್ಳಬೇಕು.

ಎಚ್. ದೊಡ್ಡ ಮಾರಯ್ಯ, ಪ್ರಯಾಣಿಕ

'ಮ್ಯಾನ್‌ಹೋಲ್ ಸರಿಪಡಿಸಿ'

ಯಶವಂತಪುರ ವಿಧಾನಸಭಾ ಕ್ಷೇತ್ರದ ವಾರ್ಡ್ ಸಂಖ್ಯೆ 198ರ ಬನಶಂಕರಿ 6ನೇ ಹಂತ, ಬಿಡಿಎ 4ನೇ 'ಟಿ' ಬ್ಲಾಕ್ ಮುಂದುವರಿದ ಬಡಾವಣೆಯ ಮೊದಲನೇ ರಸ್ತೆಯಲ್ಲಿನ (ತಲಘಟ್ಟಪುರದಿಂದ ಬರುವ ಸ್ಯಾನಿಟರಿ ಲೇನ್) ಬಿಡಬ್ಲ್ಯೂಎಸ್‌ಎಸ್‌ಬಿ ಮ್ಯಾನ್‌ಹೋಲ್ ತುಂಬಿದ ಕಾರಣ ಕಲುಷಿತ ನೀರು ಹೊರಬಂದು, ರಸ್ತೆಯ ಮೇಲೆ ಹರಿಯತೊಡಗಿದೆ. ಈ ರಸ್ತೆಯಲ್ಲಿ ಸಂಚರಿಸುವ ಮತ್ತು ಪಕ್ಕದಲ್ಲಿ ವಾಸಿಸುವ ನಿವಾಸಿಗಳಾದ ನಾವು ನರಕಯಾತನೆಯನ್ನು ಅನುಭವಿಸುತ್ತಿದ್ದೇವೆ. ಮತ್ತೊಂದೆಡೆ ಅದೇ ರಸ್ತೆಯಲ್ಲಿ ಅಂಡರ್‌ಗ್ರೌಂಡ್ ಸ್ಯಾನಿಟರಿ ಕಾಮಗಾರಿ ನಡೆದಿದ್ದು, ಓಡಾಡಲು ರಸ್ತೆ ಇಲ್ಲದಂತಾಗಿದೆ. ಸಂಬಂಧಪಟ್ಟ ಅಧಿಕಾರಿಗಳು ಗಮನಹರಿಸಿ, ಮ್ಯಾನ್‌ಹೋಲ್ ಅನ್ನು ದುರಸ್ತಿಗೊಳಿಸಿ ಸ್ವಚ್ಛತೆ ಕಾಪಾಡಬೇಕು.

ಮಲ್ಲೇಶ್ ವಿ., ಸ್ಥಳೀಯ ನಿವಾಸಿ



ಯಶವಂತಪುರದ ಬನಶಂಕರಿ 6ನೇ ಹಂತದ ರಸ್ತೆ ಮೇಲೆ ಹರಿಯುತ್ತಿರುವ ಮೋರಿ ನೀರು

ಎಂಟು ವಲಯಗಳಲ್ಲಿ ದುರಸ್ತಿ ಕಾರ್ಯ: ಬಿಬಿಎಂಪಿ

ವಾರಾಂತ್ಯಕ್ಕೆ ರಸ್ತೆ ಗುಂಡಿ ಮುಚ್ಚುವ ಗುರಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಿಬಿಎಂಪಿಯ ಎಂಟು ವಲಯಗಳಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುವ, ದುರಸ್ತಿ ಮಾಡುವ ಕಾರ್ಯ ಆರಂಭವಾಗಿದೆ. ಮಳೆ ಒಂದು ವಾರ ಬಿಡುವು ನೀಡುವ ಮುನ್ಸೂಚನೆ ಇದ್ದು, ಅಷ್ಟರೊಳಗೆ ಎಲ್ಲ ಗುಂಡಿ ಮುಚ್ಚುವ ಗುರಿಯನ್ನು ಬಿಬಿಎಂಪಿ ಹೊಂದಿದೆ.

'ನಗರದ ಎಲ್ಲ ವಲಯಗಳಲ್ಲಿ ರಸ್ತೆ ಗುಂಡಿಗಳನ್ನು ಮುಚ್ಚುವ ಕಾಮಗಾರಿ ಶನಿವಾರದಿಂದ ಆರಂಭಿಸಲಾಗಿದೆ. ಎಲ್ಲೆಡೆಯೂ ಸಮರೋಪಾದಿಯಲ್ಲಿ ಕೆಲಸ ನಡೆಯುತ್ತಿದೆ. ಹಬ್ಬದ ಸಂದರ್ಭದಲ್ಲೂ ಕಾರ್ಯನಿರ್ವಹಿಸಲಾಗುತ್ತದೆ' ಎಂದು ಬಿಬಿಎಂಪಿ ಪ್ರಧಾನ ಎಂಜಿನಿಯರ್ ಪ್ರಹ್ಲಾದ್ ತಿಳಿಸಿದರು.

'ಅತಿ ಹೆಚ್ಚು ಮಳೆಯಿಂದಾಗಿ ಹಲವು ರಸ್ತೆಗಳಲ್ಲಿ ಗುಂಡಿ ಬಿದ್ದಿದೆ. ಈ ಹಿಂದೆ ನಾವು ಲೆಕ್ಕ ಮಾಡಿದ ಗುಂಡಿಗಳಿಗಿಂತ ಸಂಖ್ಯೆ ಹೆಚ್ಚಾಗಿದೆ. ಶನಿವಾರದಿಂದ ಈ ಗುಂಡಿಗಳನ್ನು ಮುಚ್ಚುವ ಕೆಲಸ ಮಾಡಲಾಗುತ್ತಿದೆ. ಮುಖ್ಯ ಹಾಗೂ ಉಪ ಮುಖ್ಯ ರಸ್ತೆಗಳಲ್ಲಿ ಯೋಜನೆ ಹಾಗೂ ರಸ್ತೆ ಮೂಲಸೌಕರ್ಯ ವಿಭಾಗದಿಂದ ದುರಸ್ತಿ ಕಾರ್ಯ ನಡೆಯುತ್ತಿದೆ. ವಾರ್ಡ್‌ವಾರು ರಸ್ತೆಗಳಲ್ಲಿ ವಲಯ ಮಟ್ಟದ ಎಂಜಿನಿಯರಿಂಗ್ ವಿಭಾಗದಿಂದ ಗುಂಡಿಗಳನ್ನು ಮುಚ್ಚಲಾಗುತ್ತಿದೆ' ಎಂದು ಅವರು ಹೇಳಿದರು.

'ಯಲಹಂಕದಲ್ಲಿ ಬಿಬಿಎಂಪಿ ತನ್ನ ಸ್ವಂತ ಡಾಂಬರು ಘಟಕವನ್ನು ಹೊಂದಿದೆ. ಇದಲ್ಲದೆ, ಯಲಹಂಕ, ದಕ್ಷಿಣ, ಪಶ್ಚಿಮ, ಪೂರ್ವ ವಲಯದಲ್ಲಿ ಖಾಸಗಿಯವರಿಂದ ತಲಾ ಒಂದು ಘಟಕವನ್ನು ಬಾಡಿಗೆ ಆಧಾರದಲ್ಲಿ ಪಡೆದುಕೊಳ್ಳಲಾಗಿದೆ. ಈ ಐದು ಘಟಕಗಳಿಂದ ಮಿಶ್ರಣವನ್ನು ರವಾನಿಸಿ ರಸ್ತೆ ಗುಂಡಿಗಳನ್ನು ಮುಚ್ಚುವ ಕಾರ್ಯ ಮಾಡಲಾಗುತ್ತಿದೆ. ಸಾಧ್ಯವಾದಷ್ಟು ಬೇಗ ಗುಂಡಿಗಳನ್ನು ಮುಚ್ಚಲಾಗುತ್ತದೆ. ಹಬ್ಬದ ಸಂದರ್ಭದಲ್ಲಿ ರಜೆ ಇದ್ದರೂ ಸಿಬ್ಬಂದಿಗೆ ಕಾರ್ಯನಿರ್ವಹಿಸಲು ಸೂಚಿಸಲಾಗಿದೆ' ಎಂದು ಮಾಹಿತಿ ನೀಡಿದರು.



ರಾಜಾಜಿನಗರ ಪ್ರವೇಶ ದ್ವಾರದ ಸಮೀಪ ಸುಜಾತಾ ಟಾಕೀಸ್ ರಸ್ತೆಯಲ್ಲಿ ಬಿಬಿಎಂಪಿ ದುರಸ್ತಿ ಕಾರ್ಯ ನಡೆಸಿತು



ನಗರದಲ್ಲಿ ನಡೆದ ಕೈಗಾರಿಕಾ ವಸ್ತು ಪ್ರದರ್ಶನ ಸಮಾರೋಪ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಎಂ.ಟಿ.ಬಿ. ನಾಗರಾಜ್ ಭಾಗವಹಿಸಿ ಮಾಹಿತಿ ಪಡೆದುಕೊಂಡರು

ರೋಗಗ್ರಸ್ತ ಕೈಗಾರಿಕಾ ಘಟಕಗಳ ಪುನಶ್ಚೇತನಕ್ಕೆ ಕ್ರಮ: ಸಚಿವ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕೋವಿಡ್‌ನಿಂದ ಬಹಳಷ್ಟು ಕೈಗಾರಿಕಾ ಘಟಕಗಳು ತಮ್ಮ ಕಾರ್ಯಾಚರಣೆಯನ್ನು ಸ್ಥಗಿತಗೊಳಿಸಿರುವ ಅಂಶ ಸರ್ಕಾರದ ಗಮನಕ್ಕೆ ಬಂದಿದೆ. ಅವುಗಳ ಪುನಶ್ಚೇತನಕ್ಕೆ ಕ್ರಮ ಕೈಗೊಳ್ಳಲಾಗುವುದು' ಎಂದು ಸಣ್ಣ ಕೈಗಾರಿಕೆ ಸಚಿವ ಎಂ.ಟಿ.ಬಿ. ನಾಗರಾಜ್ ಭರವಸೆ ನೀಡಿದರು.

ಕಾಸಿಯಾ ಮತ್ತು ಎಂ.ಎಸ್.ಎಂ.ಇ ಅಭಿವೃದ್ಧಿ ಸಂಸ್ಥೆಗಳ ಸಹಯೋಗದಲ್ಲಿ ಶನಿವಾರ ಆಯೋಜಿಸಿದ್ದ ವಿ.ಡಿ.ಪಿ ಮತ್ತು ಕೈಗಾರಿಕಾ ವಸ್ತು ಪ್ರದರ್ಶನ ಸಮಾರೋಪ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು. 'ಯಾವ ಕಾರಣಕ್ಕಾಗಿ ಕೈಗಾರಿಕಾ ಘಟಕಗಳು ಮುಚಲ್ಪಟ್ಟಿವೆ ಎಂಬುದನ್ನು ಸಮೀಕ್ಷೆ ನಡೆಸಿ ವರದಿ ಸಲ್ಲಿಸುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ. ಸಣ್ಣ ಕೈಗಾರಿಕೆಗಳ ಸ್ಥಾಪನೆಗಾಗಿ ತಾಲ್ಲೂಕು ಮಟ್ಟದಲ್ಲಿ ಭೂಸ್ವಾಧೀನ ಪ್ರಕ್ರಿಯೆ ತ್ವರಿತಗೊಳಿಸಲಾಗುತ್ತಿದೆ' ಎಂದು ಮಾಹಿತಿ ನೀಡಿದರು.

'ಕಾಸಿಯಾ ಸೆಂಟರ್ ಆಫ್ ಎಕ್ಸಲೆನ್ಸ್ ಆ್ಯಂಡ್ ಇನ್ನೋವೇಶನ್ ಯೋಜನೆಗೆ ಬರಬೇಕಾಗಿದ್ದ ₹2.65 ಕೋಟಿ ಅನುದಾನ ಶೀಘ್ರ ಬಿಡುಗಡೆ ಮಾಡಲು ಕ್ರಮ ಕೈಗೊಳ್ಳಲಾಗುವುದು. ನೆಲಮಂಗಲ ಕೈಗಾರಿಕಾ ವಸಾಹತುವಿಗೆ ಸಂಬಂಧಿಸಿದ ಸಮಸ್ಯೆಗಳು, ಕೈಗಾರಿಕಾ ಘಟಕಗಳಿಗೆ ವಿಧಿಸುತ್ತಿರುವ ಆಸ್ತಿ ತೆರಿಗೆ ಸಂಬಂಧಿಸಿದ ಬೇಡಿಕೆಗಳ ಕುರಿತು ಅಧಿಕಾರಿಗಳ ಮಟ್ಟದಲ್ಲಿ ಸಭೆ ಆಯೋಜಿಸಿ ಬಗೆಹರಿಸಲಾಗುವುದು' ಎಂದು ಹೇಳಿದರು.

ಅಕ್ರಮ ಸಾಗಣೆ: 23 ಐ–ಫೋನ್ ವಶ

ಬೆಂಗಳೂರು: ಬೆಂಗಳೂರು ಅಂತರರಾಷ್ಟ್ರೀಯ ವಿಮಾನ ನಿಲ್ದಾಣದಲ್ಲಿ ಅಕ್ರಮವಾಗಿ ಸಾಗಣೆ ಮಾಡುತ್ತಿದ್ದ 23 ಐ–ಫೋನ್‌ಗಳನ್ನು ಕಸ್ಟಮ್ಸ್ ಅಧಿಕಾರಿಗಳು ವಶಪಡಿಸಿಕೊಂಡಿದ್ದಾರೆ.

ಬಂಧಿತ ಆರೋಪಿಯಿಂದ ₹ 34.47 ಲಕ್ಷ ಮೌಲ್ಯದ 23 ಐ–ಫೋನ್‌ಗಳನ್ನು ಅಧಿಕಾರಿಗಳು ವಶಕ್ಕೆ ಪಡೆದಿದ್ದಾರೆ.

ಶನಿವಾರ ಬ್ಯಾಂಕಾಕ್‌ನಿಂದ ನಗರಕ್ಕೆ ಪ್ರಯಾಣಿಕರೊಬ್ಬರು ತಮ್ಮ ಲಗೇಜ್‌ನಲ್ಲಿ ಐ–ಫೋನ್ ಸಾಗಾಟ ಮಾಡುತ್ತಿದ್ದ ಬಗ್ಗೆ ಗುಪ್ತಚರ ಇಲಾಖೆಯಿಂದ ಮಾಹಿತಿ ಸಿಕ್ಕಿತ್ತು. ಬಂದಿಳಿಯುತ್ತಿದ್ದಂತೆ ಆರೋಪಿಯನ್ನು ವಶಕ್ಕೆ ಪಡೆದು, ಪರಿಶೀಲನೆ ನಡೆಸಲಾಯಿತು ಎಂದು ಕಸ್ಟಮ್ಸ್ ಅಧಿಕಾರಿಗಳು ತಿಳಿಸಿದ್ದಾರೆ.

ಬಿಎಂಟಿಸಿ ಬಸ್ ಡಿಕ್ಕಿಯಿಂದ ಚೇತರಿಸಿಕೊಳ್ಳಲು ಹೋರಾಟ ನಡೆಸುತ್ತಿದ್ದ ವಿದ್ಯಾರ್ಥಿನಿ

ಫಲಿಸದ ವೈದ್ಯರ ಯತ್ನ: ಶಿಲ್ಪಶ್ರೀ ಸಾವು

ಪ್ರಜಾವಾಣಿ ವಾರ್ತೆ



ಶಿಲ್ಪಶ್ರೀ

ಬೆಂಗಳೂರು: ಬೆಂಗಳೂರು ವಿಶ್ವವಿದ್ಯಾಲಯದ ಜ್ಞಾನಭಾರತಿ ಆವರಣದಲ್ಲಿ ಅ.10ರಂದು ಬಿಎಂಟಿಸಿ ಬಸ್ ಮೈಮೇಲೆ ಹರಿದು ಗಂಭೀರವಾಗಿ ಗಾಯಗೊಂಡಿದ್ದ ಎಂ.ಎಸ್ಸಿ ವಿದ್ಯಾರ್ಥಿನಿ ಆರ್. ಶಿಲ್ಪಶ್ರೀ (22) ಬದುಕುಳಿಯಲಿಲ್ಲ. ಶಿಲ್ಪಶ್ರೀ ಗುಣವಾಗಲೆಂದು ಸಹಪಾಠಿಗಳು ಹಾಗೂ ಉಪನ್ಯಾಸಕರು ಮಾಡಿದ್ದ ಪ್ರಾರ್ಥನೆ ಫಲಿಸಲಿಲ್ಲ. ಕಳೆದ 13 ದಿನಗಳಿಂದ ಫೋರ್ಟಿಸ್ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದ ಶಿಲ್ಪಶ್ರೀ ಭಾನುವಾರ ಬೆಳಿಗ್ಗೆ ಮೃತಪಟ್ಟಿದ್ದಾರೆ.

ಆಸ್ಪತ್ರೆಯ ತೀವ್ರ ನಿಗಾ ಘಟಕ(ಐಸಿಯು)ದಲ್ಲಿ ಚಿಕಿತ್ಸೆ ನೀಡಲಾಗುತ್ತಿತ್ತು. ಅವರಿಗೆ ಏಳು ಸರ್ಜರಿ ಮಾಡಲಾಗಿತ್ತು ಎಂದು ವೈದ್ಯರು ತಿಳಿಸಿದ್ದಾರೆ.

ಕೋಲಾರ ಜಿಲ್ಲೆ ಬಂಗಾರಪೇಟೆಯ ಡಿ.ಕೆ.ಹಳ್ಳಿ ಬಳಿಯ ದಾಸರಹಳ್ಳಿ ನಿವಾಸಿ ಶಿಲ್ಪಶ್ರೀ, ಬೆಂಗಳೂರು ವಿಶ್ವವಿದ್ಯಾಲಯದ ಗಣಿತ ವಿಭಾಗದಲ್ಲಿ ಎಂ.ಎಸ್ಸಿ ವ್ಯಾಸಂಗ ಮಾಡುತ್ತಿದ್ದರು. ವಿಶ್ವವಿದ್ಯಾಲಯದ ಹಾಸ್ಟೆಲ್‌ನಲ್ಲಿ ಉಳಿದು ವಿದ್ಯಾಭ್ಯಾಸ ನಡೆಸುತ್ತಿದ್ದರು.

ಚಾಲಕನ ನಿರ್ಲಕ್ಷ್ಯವೇ ಕಾರಣ: ಅ.10ರಂದು ಬೆಳಿಗ್ಗೆ ಕಾಲೇಜಿಗೆ ತೆರಳಲು ಹಾಸ್ಟೆಲ್‌ನಿಂದ ಶಿಲ್ಪಶ್ರೀ ಹೊರಟಿದ್ದರು. ತಂಗುದಾಣಕ್ಕೆ ಬಂದಿದ್ದ ಬಸ್ (ಕೆಎ 57 ಎಫ್‌ಒ 961) ಹತ್ತಲು ಮುಂದಾಗಿದ್ದರು. ಬಸ್ ಹತ್ತುವುದಕ್ಕೂ ಮುನ್ನವೇ ಚಾಲಕ ನಿರ್ಲಕ್ಷ್ಯದಿಂದ ಬಸ್ ಮುಂದಕ್ಕೆ ಚಲಾಯಿಸಿದ್ದ. ಬಸ್ಸಿನಿಂದ ಕೆಳಗೆ ಬಿದ್ದಿದ್ದ ವಿದ್ಯಾರ್ಥಿನಿಯ ಮೇಲೆ ಬಸ್ಸಿನ ಚಕ್ರ ಹರಿದಿತ್ತು. ಅವರ ಎಡ ತೊಡೆ ಹಾಗೂ ಕಾಲಿಗೆ ಬಲವಾದ ಪೆಟ್ಟು ಬಿದ್ದಿತ್ತು. ಸ್ಥಳದಲ್ಲಿದ್ದ ಸಹಪಾಠಿಗಳೇ ವಿದ್ಯಾರ್ಥಿನಿಯನ್ನು ಆಸ್ಪತ್ರೆಗೆ ದಾಖಲಿಸಿದ್ದರು. ನಿರ್ಲಕ್ಷ್ಯ ವಹಿಸಿದ್ದ ಕಾರಣಕ್ಕೆ ಬಿಎಂಟಿಸಿ ಚಾಲಕನ್ನು ಪೊಲೀಸರು ಬಂಧಿಸಿದ್ದರು.

ಅಪಘಾತ ನಡೆದ ಮೇಲೆ ಜ್ಞಾನ ಭಾರತಿ ಕ್ಯಾಂಪಸ್‌ನ ಎಲ್ಲ ವಿಭಾಗದ ವಿದ್ಯಾರ್ಥಿಗಳು ಪ್ರತಿಭಟನೆ ನಡೆಸಿದ್ದರು.

'ಆವರಣದಲ್ಲಿ ಪದೇ ಪದೇ ಅಪಘಾತಗಳು ಸಂಭವಿಸುತ್ತಿವೆ. ವಿದ್ಯಾರ್ಥಿಗಳು ಗಾಯಗೊಂಡು ಆಸ್ಪತ್ರೆ ಸೇರುತ್ತಿದ್ದಾರೆ. ಇದಕ್ಕೆಲ್ಲ ಕಾರಣವಾಗುತ್ತಿರುವ ಖಾಸಗಿ ವಾಹನಗಳ ಸಂಚಾರ ಆವರಣದಲ್ಲಿ ನಿಷೇಧಿಸಬೇಕು' ಎಂದು ವಿದ್ಯಾರ್ಥಿಗಳು ಆಗ್ರಹಿಸಿದ್ದಾರೆ.

ಪ್ರಧಾನಿ ನರೇಂದ್ರ ಮೋದಿ ಅವರ ಇತ್ತೀಚಿನ ಬೆಂಗಳೂರು ಭೇಟಿ ವೇಳೆ ಕ್ಯಾಂಪಸ್‌ನಲ್ಲೂ ಕಾರ್ಯಕ್ರಮ ಆಯೋಜಿಸಲಾಗಿತ್ತು. ಗಣ್ಯರ ವಾಹನಗಳ ಸುಗಮ ಓಡಾಟಕ್ಕೆ ಕ್ಯಾಂಪಸ್‌ನಲ್ಲಿದ್ದ ರಸ್ತೆಯ ಹಂಪ್ಸ್ ತೆರವು ಮಾಡಲಾಗಿತ್ತು. ಬಳಿಕ ಹಂಪ್ಸ್ ಹಾಕಿರಲಿಲ್ಲ. ಇದರಿಂದ ಕ್ಯಾಂಪಸ್‌ನಲ್ಲಿ ಖಾಸಗಿ ಬಸ್ ಹಾಗೂ ವಾಹನಗಳು ಅತ್ಯಂತ ವೇಗವಾಗಿ ಚಲಿಸುತ್ತಿವೆ ಎಂದು ಕ್ಯಾಂಪಸ್‌ನ ವಿದ್ಯಾರ್ಥಿಗಳು ತಿಳಿಸಿದ್ದಾರೆ.

ಕುಟುಂಬಸ್ಥರ ಕಣ್ಣೀರು: ಪರಿಹಾರಕ್ಕೆ ಆಗ್ರಹ

'ಮಕ್ಕಳಿಗೆ ಉತ್ತಮ ಶಿಕ್ಷಣ ಕೊಡಿಸಬೇಕು ಎಂದು ತಂದೆ ನಿತ್ಯ ಕಷ್ಟಪಡುತ್ತಿದ್ದರು. ಕೂಲಿ ಮಾಡಿ ಅದರಿಂದ ಬಂದ ಹಣದಲ್ಲಿ ಶುಲ್ಕ ಪಾವತಿಸುತ್ತಿದ್ದರು. ಈ ರೀತಿಯ ಕಷ್ಟ ಯಾವ ಕುಟುಂಬಕ್ಕೂ ಬಾರದಿರಲಿ. ನಾವು ಮೂವರು ಹೆಣ್ಣು ಮಕ್ಕಳಿದ್ದೆವು. ಶಿಲ್ಪಶ್ರೀ ಸರ್ಕಾರಿ ಉದ್ಯೋಗ ಪಡೆಯಬೇಕೆಂಬ ಕನಸು ಕಂಡಿದ್ದಳು. ಸೂಕ್ತ ಪರಿಹಾರ ನೀಡಬೇಕು' ಎಂದು ಶಿಲ್ಪಶ್ರೀ ಸಹೋದರಿ ನಂದಿತಾ ಕಣ್ಣೀರು ಹಾಕಿದರು.

ಸುದ್ದಿ 2 ನಿಮಿಷ

ಸಾಹಿತಿ ನಾ.ಡಿಸೋಜಗೆ ಬೆದರಿಕೆ ಪತ್ರ

ಸಾಗರ (ಶಿವಮೊಗ್ಗ): 'ನಿಮ್ಮ ಧೋರಣೆ ಬದಲಿಸಿಕೊಳ್ಳದಿದ್ದರೆ ಜೀವಕ್ಕೆ ಅಪಾಯ ಕಾದಿದೆ' ಎಂದು ಸಾಹಿತಿ ನಾ.ಡಿಸೋಜ ಅವರನ್ನು ಬೆದರಿಸಿ ಅನಾಮಿಕರು ಎರಡು ಪತ್ರಗಳನ್ನು ಬರೆದಿರುವ ವಿಷಯ ಗೊತ್ತಾಗಿದೆ.



ಪಟ್ಟಣದಲ್ಲಿ ಶನಿವಾರ ಸಂಜೆ ನಡೆದ ಕನ್ನಡ ಸಾಹಿತ್ಯ ಪರಿಷತ್‌ನ ತಾಲ್ಲೂಕು ಘಟಕದ ಸಭೆಯಲ್ಲಿ ಪಾಲ್ಗೊಂಡಿದ್ದ ನಾ.ಡಿಸೋಜ ಅವರೇ ತಮಗೆ ಬೆದರಿಕೆ ಪತ್ರಗಳು ಬಂದಿರುವುದನ್ನು ಬಹಿರಂಗಪಡಿಸಿದ್ದಾರೆ.

ಈ ಬಗ್ಗೆ 'ಪ್ರಜಾವಾಣಿ'ಗೆ ಪ್ರತಿಕ್ರಿಯಿಸಿದ ಅವರು, 'ಪಠ್ಯ ಪುಸ್ತಕ ಪರಿಷ್ಕರಣೆ ಸಂಬಂಧ ವಿವಾದ ಸೃಷ್ಟಿಯಾದ ಸಂದರ್ಭದಲ್ಲಿ ವ್ಯಕ್ತಪಡಿಸಿದ್ದ ಅಭಿಪ್ರಾಯದ ಹಿನ್ನೆಲೆಯಲ್ಲಿ 2 ತಿಂಗಳ ಹಿಂದೆ ದಾವಣಗೆರೆಯಿಂದ ನನಗೆ ಎರಡು ಪತ್ರಗಳು ಬಂದಿವೆ. ಅದರಲ್ಲಿ ನಿಮ್ಮ ಧೋರಣೆ ಬದಲಿಸಿಕೊಳ್ಳದಿದ್ದರೆ ಜೀವಕ್ಕೆ ಅಪಾಯ ಕಾದಿದೆ ಎಂದು ಹೆದರಿಸಿದ್ದಾರೆ. ಆ ಪತ್ರಗಳನ್ನು ತೆಗೆದಿಟ್ಟಿದ್ದೇನೆ' ಎಂದರು.

ನವ ವಿವಾಹಿತೆ ಆತ್ಮಹತ್ಯೆ: ಪತಿ ಬಂಧನ

ಬೆಂಗಳೂರು: ನವ ವಿವಾಹಿತೆಯೊಬ್ಬರು ಆತ್ಮಹತ್ಯೆ ಮಾಡಿಕೊಂಡ ಘಟನೆ ಪುಟ್ಟೇನಹಳ್ಳಿ ಪೊಲೀಸ್ ಠಾಣಾ ವ್ಯಾಪ್ತಿಯಲ್ಲಿ ನಡೆದಿದೆ. ಮೈಸೂರಿನ ನಿಹಾರಿಕಾ ಆತ್ಮಹತ್ಯೆ ಮಾಡಿಕೊಂಡವರು.

ಇವರ ತಂದೆ ನೀಡಿದ ದೂರಿನ ಮೇರೆಗೆ ಪ್ರಕರಣ ದಾಖಲಿಸಿಕೊಳ್ಳಲಾಗಿದೆ. ಪತಿ ಕಾರ್ತಿಕ್‌ನನ್ನು ಬಂಧಿಸಲಾಗಿದೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ. ನಗರದ ಖಾಸಗಿ ಶಾಲೆಯಲ್ಲಿ ನಿಹಾರಿಕಾ ಇಂಗ್ಲಿಷ್ ಶಿಕ್ಷಕಿ ಆಗಿದ್ದರು.

'ನಾಲ್ಕು ತಿಂಗಳ ಹಿಂದೆ ಕಾರ್ತಿಕ್ ಎಂಬ ಹುಡುಗನಿಗೆ ಮದುವೆ ಮಾಡಿಕೊಡಲಾಗಿತ್ತು. ಕಾರ್ತಿಕ್ ಖಾಸಗಿ ಕಂಪನಿ ಉದ್ಯೋಗಿ ಆಗಿದ್ದಾರೆ. ಅವರ ಮನೆಯವರು ನೀಡುತ್ತಿದ್ದ ಮಾನಸಿಕ ಕಿರುಕುಳದಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ' ಎಂದು ತಂದೆ ದೂರಿನಲ್ಲಿ ಉಲ್ಲೇಖಿಸಿದ್ದಾರೆ.

'ಪತಿ ಹಾಗೂ ಅವರ ಮನೆಯವರು ಪದೇ ಪದೇ ಗಲಾಟೆ ಮಾಡುತ್ತಿದ್ದರು. ಇದರಿಂದ ಬೇಸತ್ತಿದ್ದ ನಿಹಾರಿಕಾ ತವರು ಮನೆಗೆ ತೆರಳಿದ್ದರು. ಹಿರಿಯರ ಸಮ್ಮುಖದಲ್ಲಿ ಸಂಧಾನ ನಡೆದು ನಿಹಾರಿಕಾ ಪತಿಯ ಮನೆಗೆ ಮರಳಿದ್ದರು. ಬಳಿಕ ಮತ್ತೆ ಗಲಾಟೆ ನಡೆದಿದೆ. ಇದರಿಂದ ಆತ್ಮಹತ್ಯೆ ಮಾಡಿಕೊಂಡಿದ್ದಾಳೆ' ಎಂದು ಪೋಷಕರು ತಿಳಿಸಿದ್ದಾರೆ.

ಪ್ರಯಾಣ ದರ ಏರಿಕೆ: ಒಂದು ಸಾವಿರ ಪ್ರಕರಣ ದಾಖಲು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಸ್ ಪ್ರಯಾಣ ದರ ದುಬಾರಿ ಆಗಿರುವುದರಿಂದ ಕಾರ್ಯಾಚರಣೆ ನಡೆಸಿರುವ ಸಾರಿಗೆ ಇಲಾಖೆ ಅಧಿಕಾರಿಗಳು, ರಾಜ್ಯದಲ್ಲಿ ಒಂದು ಸಾವಿರಕ್ಕೂ ಹೆಚ್ಚು ಪ್ರಕರಣಗಳನ್ನು ದಾಖಲಿಸಿದ್ದಾರೆ.

ದೀಪಾವಳಿ ಹಬ್ಬದ ಸಂದರ್ಭದಲ್ಲಿ ಸಾಲು ಸಾಲು ರಜೆಗಳಿರುವುದರಿಂದ ಖಾಸಗಿ ಬಸ್‌ನಲ್ಲಿ ಪ್ರಯಾಣ ಮಾಡುವ ಜನರಿಂದ ಮೂರರಿಂದ ನಾಲ್ಕು ಪಟ್ಟು ಪ್ರಯಾಣ ದರ ವಸೂಲಿ ಮಾಡುತ್ತಿರುವ ದೂರುಗಳನ್ನು ಆಧರಿಸಿ ಸಾರಿಗೆ ಇಲಾಖೆ ಅಧಿಕಾರಿಗಳು ಮೂರು ದಿನಗಳಿಂದ ಕಾರ್ಯಾಚರಣೆ ನಡೆಸುತ್ತಿದ್ದಾರೆ.

'ಬೆಂಗಳೂರಿನಲ್ಲೇ 450 ಪ್ರಕರಣಗಳನ್ನು ದಾಖಲಿಸಲಾಗಿದ್ದು, ರಾಜ್ಯದ ವಿವಿಧೆಡೆಯೂ ಅಧಿಕಾರಿಗಳು ಕಾರ್ಯಾಚರಣೆ ನಡೆಸಿ ಒಟ್ಟಾರೆ ಒಂದು ಸಾವಿರಕ್ಕೂ ಹೆಚ್ಚು ಪ್ರಕರಣ ದಾಖಲಿಸಿದ್ದಾರೆ. ಪ್ರಯಾಣ ದರ ಹೆಚ್ಚಳವಷ್ಟೇ ಅಲ್ಲದೇ, ದಾಖಲೆಗಳು ಸಮರ್ಪಕವಾಗಿ ಇಲ್ಲದ ಪ್ರಕರಣಗಳೂ ಇದರಲ್ಲಿ ಸೇರಿವೆ' ಎಂದು ಸಾರಿಗೆ ಇಲಾಖೆ ಅಧಿಕಾರಿಯೊಬ್ಬರು ವಿವರಿಸಿದರು.

'ದಸರಾ ಹಬ್ಬದ ಸಂದರ್ಭದಲ್ಲಿ ₹60 ಲಕ್ಷದಿಂದ ₹70 ಲಕ್ಷದ ತನಕ ದಂಡ ವಸೂಲಿಯಾಗಿತ್ತು. ದೀಪಾವಳಿ ಸಂದರ್ಭದಲ್ಲಿ ಎಷ್ಟು ದಂಡ ವಸೂಲಿಯಾಗಿದೆ ಎಂಬ ಮಾಹಿತಿ ಎರಡು ದಿನಗಳ ಬಳಿಕ ಲಭ್ಯವಾಗಲಿದೆ' ಎಂದು ಅವರು ತಿಳಿಸಿದರು.

'ದಂಡ ಹಾಕಿದರೆ ಸಾಲದು'

ಪ್ರಯಾಣ ದರ ಏರಿಕೆ ಮಾಡಿದ ಸಂದರ್ಭದಲ್ಲಿ ಸಾರಿಗೆ ಅಧಿಕಾರಿಗಳು ದಂಡ ವಿಧಿಸುತ್ತಿದ್ದರೂ, ಪ್ರತಿ ಹಬ್ಬದ ಸಂದರ್ಭದಲ್ಲೂ ಖಾಸಗಿ ಬಸ್ ಪ್ರಯಾಣ ದರ ಅನಿಯಂತ್ರಿತವಾಗಿ ಏರಿಕೆ ಆಗುವುದು ನಿಂತಿಲ್ಲ.

'ದಂಡವನ್ನಷ್ಟೇ ವಿಧಿಸಿ ಸುಮ್ಮನಾದರೆ ಪ್ರಯೋಜನ ಇಲ್ಲ. ಪದೇ ಪದೇ ಕಾನೂನು ಉಲ್ಲಂಘಿಸುವ ಖಾಸಗಿ ಬಸ್ ಮಾಲೀಕರ ವಿರುದ್ಧ ಕ್ರಮ ಕೈಗೊಳ್ಳಲು ಮೋಟಾರು ಕಾಯ್ದೆಯಲ್ಲಿ ಅವಕಾಶ ಇದೆ. ಪರವಾನಗಿ ಅಮಾನತಿನಲ್ಲಿಡಲು ಮತ್ತು ಪರವಾನಗಿ ರದ್ದುಪಡಿಸಲು ಸಾಧ್ಯವಿದೆ. ಅದನ್ನು ಅಧಿಕಾರಿಗಳು ಮಾಡಬೇಕು' ಎಂಬುದು ಪ್ರಯಾಣಿಕರ ಒತ್ತಾಯ.

'ಹಬ್ಬದ ಸಂದರ್ಭದಲ್ಲಿ ಒಂದೆರಡು ದಿನ ನೆಪಮಾತ್ರಕ್ಕೆ ಸಾರಿಗೆ ಅಧಿಕಾರಿಗಳು ಕಾರ್ಯಾಚರಣೆ ನಡೆಸುತ್ತಾರೆ. ಪ್ರತಿ ಹಬ್ಬದಲ್ಲೂ ದುಬಾರಿ ದರದಲ್ಲಿ ಟಿಕೆಟ್ ಖರೀದಿಸಿ ಪ್ರಯಾಣಿಸಬೇಕಾಗಿದೆ' ಎಂದು ಪ್ರಯಾಣಿಕ ವಿನಯ್ ಬೇಸರ ವ್ಯಕ್ತಪಡಿಸಿದರು.

ರಸ್ತೆ ಗುಂಡಿ ಮುಚ್ಚಲು ಆಗ್ರಹ

ಪ್ರಜಾವಾಣಿ ವಾರ್ತೆ

ಕೆ.ಆರ್.ಪುರ: ರಾಷ್ಟ್ರೀಯ ಹೆದ್ದಾರಿ 75ರಲ್ಲಿ ವಾಹನ ಸವಾರರಿಗೆ ಮೃತ್ಯುಕೂಪವಾಗಿರುವ ರಸ್ತೆಯ ಗುಂಡಿಗಳನ್ನು ಮುಚ್ಚುವಂತೆ ಆಗ್ರಹಿಸಿ ಆಮ್ ಆದ್ಮಿ ಪಕ್ಷದಿಂದ ಪ್ರತಿಭಟನೆ ನಡೆಯಿತು.

ಪದೇ ಪದೇ ಅಪಘಾತಗಳು ನಡೆದರೂ ಬಿಬಿಎಂಪಿ ಮತ್ತು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ ಎಚ್ಚೆತ್ತುಕೊಂಡಿಲ್ಲ. ಅಧಿಕಾರಿಗಳ ನಿರ್ಲಕ್ಷ್ಯದಿಂದ ಇನ್ನೆಷ್ಟು ಜೀವ ಬಲಿಯಾಗಬೇಕಿದೆ ಎಂದು ಆಮ್ ಆದ್ಮಿ ಪಕ್ಷದ ಮುಖಂಡ ದಿಲೀಪ್ ಕುಮಾರ್ ಆಕ್ರೋಶ ವ್ಯಕ್ತಪಡಿಸಿದರು.

ಕೆ.ಆರ್.ಪುರ ಬಿಬಿಎಂಪಿ ಬಳಿಯ ರಾಷ್ಟ್ರೀಯ ಹೆದ್ದಾರಿಯಿಂದ ಭಟ್ಟರಹಳ್ಳಿ ತನಕ ರಾಷ್ಟ್ರೀಯ ಹೆದ್ದಾರಿಯಲ್ಲಿ ಗುಂಡಿಗಳು ಬಿದ್ದು ಸಂಪೂರ್ಣ ಹದಗೆಟ್ಟಿದೆ. ರಾಷ್ಟ್ರೀಯ ಹೆದ್ದಾರಿಯು ನಗರದಿಂದ ತಮಿಳುನಾಡು, ಆಂಧ್ರಪ್ರದೇಶ, ರಾಜ್ಯದ ಕೋಲಾರ, ಚಿಕ್ಕಬಳ್ಳಾಪುರ ಸಂಪರ್ಕ ಕಲ್ಪಿಸುವ ರಾಷ್ಟ್ರೀಯ ಹೆದ್ದಾರಿಯಾಗಿದೆ. ದಿನಕ್ಕೆ ಎರಡು ಲಕ್ಷಕ್ಕೂ ಅಧಿಕ ವಾಹನಗಳು ಈ ರಸ್ತೆಯ ಮೂಲಕ ಸಂಚಾರ ನಡೆಸುತ್ತವೆ. ಇಂತಹ ಗುಂಡಿಗಳು ಬಿದ್ದಿದ್ದು, ಗುಂಡಿಗಳು ತಪ್ಪಿಸಲು ಹೋಗಿ ಅಪಘಾತಗಳು ಸಂಭವಿಸಿ, ಕೆಲವರು ಪ್ರಾಣ ಕಳೆದುಕೊಂಡಿದ್ದಾರೆ. ಇಷ್ಟಾದರೂ ಅಧಿಕಾರಿಗಳು ಗಂಭೀರವಾಗಿ ಪರಿಗಣಿಸದೇ ನಿರ್ಲಕ್ಷ್ಯ ತೋರಿದ್ದಾರೆ ಎಂದು ಅವರು ಆರೋಪಿಸಿದರು.



ಆಮ್ ಆದ್ಮಿ ಪಕ್ಷದ ಮುಖಂಡ ದಿಲೀಪ್ ಕುಮಾರ್ ರಸ್ತೆ ಮಧ್ಯೆ ಗುಂಡಿ ಪಕ್ಕದಲ್ಲಿ ಕುಳಿತು ವಿನೂತನವಾಗಿ ಪ್ರತಿಭಟಿಸಿದರು

ಮುಖ್ಯಾಂಶಗಳು

- ಆಮ್ ಆದ್ಮಿ ಪಕ್ಷದಿಂದ ಪ್ರತಿಭಟನೆ
- ಬಿಬಿಎಂಪಿ ಮತ್ತು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ವಿರುದ್ಧ ಆಕ್ರೋಶ

ಕಿತ್ತುಹೋದ ರಸ್ತೆಯಲ್ಲಿ ನಿತ್ಯ ಸಂಚಾರ!

ಪ್ರಜಾವಾಣಿ ವಾರ್ತೆ

ದಾಬಸ್ ಪೇಟೆ: ನೆಲಮಂಗಲ ತಾಲ್ಲೂಕು, ತ್ಯಾಮಗೊಂಡ್ಲು ಹೋಬಳಿ, ಕಳಲುಘಟ್ಟ ಗ್ರಾಮ ಪಂಚಾಯಿತಿಗೆ ಒಳಪಡುವ ಕೋಡಿಪಾಳ್ಯ ಗ್ರಾಮದ ರಸ್ತೆ ಅಧ್ವಾನವಾಗಿದ್ದು, ಸಂಚಾರಕ್ಕೆ ತೊಂದರೆಯಾಗುತ್ತಿದೆ ಎಂದು ಗ್ರಾಮಸ್ಥರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಹನುಮಂತಪುರದಿಂದ ಕೋಡಿಪಾಳ್ಯ ಸಂಪರ್ಕಿಸುವ 2 ಕಿ. ಮೀ ಉದ್ದದ ರಸ್ತೆಯಲ್ಲಿ ಮೊಣಕಾಲುದ್ದದ ಗುಂಡಿಗಳು ಬಿದ್ದಿವೆ. ಇದರಿಂದ, ಸಾರ್ವಜನಿಕರಿಗೆ ತೊಂದರೆಯಾಗಿ ಹಿಡಿಶಾಪ ಹಾಕುತ್ತಿದ್ದಾರೆ.

ಗುಂಡಿಗಳಲ್ಲಿ ನೀರು ನಿಂತಿದ್ದು, ರಸ್ತೆ ಯಾವುದು ಎನ್ನುವುದು ತಿಳಿಯದೆ ವಾಹನ ಸಂಚಾರರು ಬಿದ್ದು ಗಾಯಗೊಂಡಿದ್ದಾರೆ. ಪ್ರತಿನಿತ್ಯ ಅಪಘಾತಗಳು ಸಂಭವಿಸುತ್ತಿದ್ದರೂ ಸರ್ಕಾರ ಕ್ರಮಕೈಗೊಳ್ಳುತ್ತಿಲ್ಲ ಎಂದು ಯುವಕರು ದೂರಿದ್ದಾರೆ.



ಹಳ್ಳ ಗುಂಡಿಗಳಿಂದ ತುಂಬಿರುವ ಕೋಡಿ ಪಾಳ್ಯ ರಸ್ತೆ

ರಸ್ತೆಯಲ್ಲಿ ಗುಂಡಿ ಬಿದ್ದು ತಿಂಗಳುಗಳೇ ಕಳೆದಿವೆ. ದುರಸ್ತಿ ಮಾಡಿಸಲು ಕಳಲು ಘಟ್ಟ ಗ್ರಾಮ ಪಂಚಾಯಿತಿ ಆಡಳಿತ ಪ್ರಯತ್ನವನ್ನೇ ಮಾಡಿಲ್ಲ ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇದೇ ರಸ್ತೆಯಲ್ಲಿ ದಿನನಿತ್ಯ ನೂರಾರು ಮಕ್ಕಳು ಶಾಲೆಗೆ, ಉದ್ಯೋಗಸ್ಥರು ಕೆಲಸಕ್ಕೆ ಹೋಗುತ್ತಾರೆ. ಅವರೆಲ್ಲ ಜೀವ ಕೈಯಲ್ಲಿ ಹಿಡಿದುಕೊಂಡು ಹೋಗಬೇಕು. ರಸ್ತೆಯಲ್ಲಿ ಬಿದ್ದ ಗುಂಡಿಯಲ್ಲಿ ನಿಂತ ನೀರಿನಿಂದ ಪಾದಚಾರಿಗಳ ಮೇಲೆ ನೀರು ಸಿಡಿದು ಬಟ್ಟೆಯೆಲ್ಲಾ ಒದ್ದೆಯಾಗುತ್ತಿದೆ ಎಂದು ಸ್ಥಳೀಯರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಅಪರಾಧ ಸುದ್ದಿ

ಅಪಘಾತ: ಹಿಂಬದಿ ಸವಾರ ಸಾವು

ಬೆಂಗಳೂರು: ನಿಯಂತ್ರಣ ತಪ್ಪಿ ಬೈಕ್ ವಿದ್ಯುತ್ ಕಂಬಕ್ಕೆ ಡಿಕ್ಕಿಯಾದ್ದರಿಂದ ಹಿಂಬದಿಯ ಸವಾರ ಧ್ರುವ (34) ಎಂಬುವವರು ಮೃತಪಟ್ಟಿದ್ದಾರೆ. ಬೈಕ್ ಸವಾರ ದೇವೇಂದ್ರ ರೆಡ್ಡಿ ಗಾಯಗೊಂಡಿದ್ದಾರೆ. ಆರ್‌ಟಿ ನಗರ ಸಂಚಾರ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಬೈಕ್‌ನಲ್ಲಿ ಭಾನುವಾರ ನಸುಕಿನ ವೇಳೆ ಬರುವಾಗ ಟೊಯೊಟಾ ಷೋರೂಂ ಬಳಿ ಸವಾರನ ನಿಯಂತ್ರಣ ತಪ್ಪಿದೆ. ಧ್ರುವ ಸ್ಥಳದಲ್ಲೇ ಮೃತಪಟ್ಟಿದ್ದಾರೆ. ದೇವೇಂದ್ರರೆಡ್ಡಿ ಅವರು ಚಿಕಿತ್ಸೆ ಪಡೆಯುತ್ತಿದ್ದಾರೆ ಎಂದು ಪೊಲೀಸ್ ಮೂಲಗಳು ತಿಳಿಸಿವೆ.

ವಾಹನ ಕಳವು ಇಬ್ಬರ ಬಂಧನ

ಬೆಂಗಳೂರು: ನಗರದಲ್ಲಿ ದ್ವಿಚಕ್ರ ವಾಹನ ಕಳವು ಮಾಡಿ ಮಾರಾಟ ಮಾಡುತ್ತಿದ್ದ ಇಬ್ಬರು ಆರೋಪಿಗಳನ್ನು ವಿಲ್ಸನ್ ಗಾರ್ಡನ್ ಪೊಲೀಸರು ಬಂಧಿಸಿದ್ದಾರೆ.

ಭುವನೇಶ್ವರಿ ನಗರದ 2ನೇ ಕ್ರಾಸ್‌ನ ನಿವಾಸಿ ಮಹಮ್ಮದ್ ಮಹರಾಜ್ (21) ಹಾಗೂ ಆರ್.ಟಿ.ನಗರದ ಮನೋಹರಪಾಳ್ಯದ ದಶರಥಪ್ಪ ಹೌಸ್‌ನ ನಿವಾಸಿ ಶೇಖ್ ಅರ್ಜಾನ್ (19) ಬಂಧಿತರು.

ರಸ್ತೆ ಬದಿ ಹಾಗೂ ಮನೆಯ ಎದುರು ನಿಲುಗಡೆ ಮಾಡಲಾಗಿದ್ದ ಬೈಕ್‌ಗಳನ್ನು ಇಬ್ಬರೂ ಕಳವು ಮಾಡುತ್ತಿದ್ದರು. ಬಂಧಿತರಿಂದ ₹ 5.50 ಲಕ್ಷ ಮೌಲ್ಯದ ವಿವಿಧ ಕಂಪನಿಯ 10 ಬೈಕ್ ಜಪ್ತಿ ಮಾಡಲಾಗಿದೆ.

‘ತಪ್ಪು ಮರೆಮಾಚಲು ರಾಹುಲ್ ಆರೋಪ’

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: ‘ಕಾಂಗ್ರೆಸ್ ಆಡಳಿತಾವಧಿಯಲ್ಲಿ ನಡೆದ ಭಯೋತ್ಪಾದನೆ ಚಟುವಟಿಕೆ ಹಾಗೂ ತುಷ್ಟೀಕರಣದ ರಾಜಕಾರಣ ಮುಚ್ಚಿಕೊಳ್ಳಲು ರಾಹುಲ್ ಗಾಂಧಿ ಅವರು, ಆರ್‌ಎಸ್‌ಎಸ್ ಮತ್ತು ಬಿಜೆಪಿ ವಿರುದ್ಧ ಸಲ್ಲದ ಆರೋಪ ಮಾಡುತ್ತಿದ್ದಾರೆ’ ಎಂದು ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಟೀಕಿಸಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಕಾಂಗ್ರೆಸ್ ಆಡಳಿತಾವಧಿಯಲ್ಲಿ ಎಲ್ಲೆಲ್ಲಿ ಭಯೋತ್ಪಾದನೆ ಕೃತ್ಯಗಳು ನಡೆದಿವೆ ಎಂದು ರಾಹುಲ್ ಗಾಂಧಿ ಒಮ್ಮೆ ತಿರುಗಿ ನೋಡಲಿ. ನರೇಂದ್ರ ಮೋದಿ ಪ್ರಧಾನಿಯಾದ ಮೇಲೆ ದೇಶದ ಆಂತರಿಕ ಮತ್ತು ಬಾಹ್ಯ ರಕ್ಷಣೆಯಲ್ಲಿ ಸಾಕಷ್ಟು ಬದಲಾವಣೆಯಾಗಿದೆ’ ಎಂದರು.

‘ರಾಜ್ಯವನ್ನು ಕೋಮು ಗಲಭೆಗಳ ಪ್ರಯೋಗಾಲಯವನ್ನಾಗಿ ಮಾಡಲಾಗುತ್ತಿದೆ’ ಎನ್ನುವ ರಾಹುಲ್ ಗಾಂಧಿ ಹೇಳಿಕೆಗೆ ಪ್ರತಿಕ್ರಿಯಿಸಿದ ಮುಖ್ಯಮಂತ್ರಿ, ‘ಕಾಂಗ್ರೆಸ್‌ಗೆ ಎಲ್ಲವನ್ನೂ ಕಾಮಾಲೆ ಕಣ್ಣಿನಿಂದ ನೋಡುವ ಚಟವಿದೆ. ಅವರೇ ದೇಶ ಒಡೆಯುವ ಕೆಲಸ ಮಾಡುತ್ತಿದ್ದಾರೆ’ ಎಂದು ಹೇಳಿದರು.

ಖಾಸಗಿ ಸಂಸ್ಥೆ ಜೊತೆ ಕೈಗಾರಿಕಾ ಇಲಾಖೆ ಒಪ್ಪಂದ: ಸಚಿವ ಮುರುಗೇಶ ನಿರಾಣಿ ತಡೆ

5 ನಿಮಿಷದ ಕಿರುಚಿತ್ರಕ್ಕೆ ₹ 4.5 ಕೋಟಿ!

ಪ್ರಜಾವಾಣಿ ವಾರ್ತೆ

ಬೆಂಗಳೂರು: ನವೆಂಬರ್ 2ರಿಂದ 4ರವರೆಗೆ ನಡೆಯುವ ಜಾಗತಿಕ ಹೂಡಿಕೆದಾರರ ಸಮಾವೇಶದಲ್ಲಿ (ಜಿಮ್) ಪ್ರದರ್ಶಿಸಲು ₹ 4.5 ಕೋಟಿ ವೆಚ್ಚದಲ್ಲಿ ಕಿರುಚಿತ್ರವೊಂದನ್ನು ನಿರ್ಮಿಸುವ ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಪ್ರಯತ್ನಕ್ಕೆ ಕೈಗಾರಿಕಾ ಸಚಿವ ಮುರುಗೇಶ ನಿರಾಣಿ ತಡೆಯೊಡ್ಡಿದ್ದಾರೆ.

ರಾಜ್ಯದಲ್ಲಿ ಹೂಡಿಕೆಗೆ ಇರುವ ಅವಕಾಶಗಳು, ಕೈಗಾರಿಕಾ ಮೂಲ ಸೌಕರ್ಯದ ಲಭ್ಯತೆ ಮತ್ತಿತರ ಅಂಶಗಳನ್ನು ವಿವರಿಸುವ ಐದು ನಿಮಿಷಗಳ ಕಿರುಚಿತ್ರ ನಿರ್ಮಿಸಿ, ಜಿಮ್‌ನಲ್ಲಿ ಪ್ರದರ್ಶಿಸಲು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ನಿರ್ಧರಿಸಿತ್ತು. ₹ 4.5 ಕೋಟಿ ವೆಚ್ಚದಲ್ಲಿ ಕಿರುಚಿತ್ರ ನಿರ್ಮಾಣಕ್ಕೆ ಖಾಸಗಿ ಸಂಸ್ಥೆಯೊಂದರ ಜತೆ ಇಲಾಖೆ ಒಪ್ಪಂದವನ್ನೂ ಮಾಡಿಕೊಂಡಿತ್ತು. ತ್ರಿ-ಡಿ ತಂತ್ರಜ್ಞಾನವನ್ನು ಬಳಸಿಕೊಂಡು ಕಿರುಚಿತ್ರ ನಿರ್ಮಾಣಕ್ಕೆ ಸಿದ್ಧತೆ ನಡೆದಿತ್ತು.

ದುಬಾರಿ ವೆಚ್ಚದಲ್ಲಿ ಕಿರುಚಿತ್ರ ನಿರ್ಮಿಸುವ ಪ್ರಸ್ತಾವದ ಕುರಿತು ಕೈಗಾರಿಕಾ ಸಚಿವರಿಗೆ ಅಧಿಕಾರಿಗಳು ಮಾಹಿತಿಯನ್ನೇ ನೀಡಿರಲಿಲ್ಲ. ತಮ್ಮ ಹಂತದಲ್ಲೇ ನಿರ್ಧಾರ ಕೈಗೊಂಡಿರುವ ಅಧಿಕಾರಿಗಳು, ಚಿತ್ರ ನಿರ್ಮಾಣ ಸಂಸ್ಥೆಯೊಂದನ್ನು ಆಯ್ಕೆಮಾಡಿ, ಒಪ್ಪಂದ ಮಾಡಿಕೊಂಡಿದ್ದರು. ಗೋಪ್ಯವಾಗಿ ಈ ಪ್ರಯತ್ನ ನಡೆಯುತ್ತಿರುವುದು ಗಮನಕ್ಕೆ ಬರುತ್ತಿದ್ದಂತೆಯೇ ಇದೇ 21ರಂದು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಇ.ವಿ. ರಮಣ ರೆಡ್ಡಿ ಅವರಿಗೆ ಪತ್ರ ಬರೆದಿರುವ ಸಚಿವರು, ಕಿರುಚಿತ್ರ ನಿರ್ಮಾಣ ರದ್ದು ಮಾಡುವಂತೆ ಸೂಚಿಸಿದ್ದಾರೆ.

‘₹ 4.5 ಕೋಟಿ ವೆಚ್ಚದಲ್ಲಿ 5 ನಿಮಿಷಗಳ ಕಿರುಚಿತ್ರ ನಿರ್ಮಾಣಕ್ಕೆ ಚಿತ್ರ ನಿರ್ಮಾಣ ಸಂಸ್ಥೆಯೊಂದರ ಜತೆ ಕೈಗಾರಿಕಾ ಇಲಾಖೆಯು ಒಪ್ಪಂದ ಮಾಡಿಕೊಂಡಿರುವುದಾಗಿ ತಿಳಿದುಬಂದಿರುತ್ತದೆ. ಕಿರುಚಿತ್ರ ನಿರ್ಮಾಣಕ್ಕೆ ನಿಗದಿಪಡಿಸಿರುವ ಈ ಮೊತ್ತವು ತುಂಬಾ ಹೆಚ್ಚಾಗಿದೆ. ಇಂದಿನ ಪರಿಸ್ಥಿತಿಯಲ್ಲಿ ಇದು ಅನಗತ್ಯ ಮತ್ತು ಸೂಕ್ತವಾಗಿರುವುದಿಲ್ಲ. ಇಲಾಖೆಯು ಇಂತಹ ಒಪ್ಪಂದ ಮಾಡಿಕೊಂಡಿದ್ದಲ್ಲಿ ಕಾರ್ಯಾದೇಶವನ್ನು ವಜಾ ಮಾಡಲು ಸೂಚಿಸಿದೆ’ ಎಂದು ನಿರಾಣಿ ಪತ್ರದಲ್ಲಿ ನಿರ್ದೇಶನ ನೀಡಿದ್ದಾರೆ. ಮುಂದೆ ಇಂತಹ ಪ್ರಕರಣಗಳಲ್ಲಿ ಇಲಾಖಾ ಸಚಿವರು ಹಾಗೂ ಅನುಭವಿಗಳ ಜತೆಗೆ ಸಮಾಲೋಚನೆ, ಚರ್ಚೆ ನಡೆಸಿ ತೀರ್ಮಾನ ಕೈಗೊಳ್ಳಬೇಕು ಎಂದು ಸೂಚಿಸಿದ್ದಾರೆ.

ಆಯುಕ್ತರ ಹಂತದಲ್ಲೇ ತೀರ್ಮಾನ?: ಕಿರುಚಿತ್ರ ನಿರ್ಮಾಣಕ್ಕೆ ಸಂಬಂಧಿಸಿದ ಪ್ರಸ್ತಾವವನ್ನು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆಯ ಆಯುಕ್ತರ ಹಂತದಲ್ಲೇ ಅಂತಿಮಗೊಳಿಸಲಾಗಿತ್ತು. ಇಲಾಖೆಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಯವರ ಗಮನಕ್ಕೂ ತಂದಿರಲಿಲ್ಲ ಎಂದು ಉನ್ನತ ಮೂಲಗಳು ತಿಳಿಸಿವೆ.

ಇಲಾಖೆಯ ಆಯುಕ್ತೆ ಗುಂಜನ್ ಕೃಷ್ಣ ಅವರಿಂದ ಈ ಕುರಿತು ಪ್ರತಿಕ್ರಿಯೆಗೆ ಪ್ರಯತ್ನಿಸಲಾಯಿತು. ಆದರೆ, ಮೊಬೈಲ್ ಕರೆ, ಎಸ್‌ಎಂಎಸ್, ವಾಟ್ಸ್ ಆ್ಯಪ್ ಸಂದೇಶಗಳಿಗೆ ಅವರಿಂದ ಯಾವುದೇ ಪ್ರತಿಕ್ರಿಯೆ ಬರಲಿಲ್ಲ.

‘ಯೋಜನೆ ರದ್ದತಿಗೆ ಕ್ರಮ’

‘₹ 4.5 ಕೋಟಿ ವೆಚ್ಚದಲ್ಲಿ ಕಿರುಚಿತ್ರ ನಿರ್ಮಿಸುವ ಯೋಜನೆ ಕೈಬಿಡುವಂತೆ ಕೈಗಾರಿಕಾ ಸಚಿವರು ಬರೆದ ಪತ್ರ ಶುಕ್ರವಾರ ಸಂಜೆ ನನಗೆ ತಲುಪಿದೆ. ಶನಿವಾರದಿಂದ ಮೂರು ದಿನಗಳ ಕಾಲ ಸರ್ಕಾರಿ ರಜೆಗಳಿವೆ. ಕಿರುಚಿತ್ರ ನಿರ್ಮಾಣ ಯೋಜನೆ ರದ್ದುಗೊಳಿಸಿ ಮಂಗಳವಾರವೇ ಆದೇಶ ಹೊರಡಿಸಲಾಗುವುದು’ ಎಂದು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಹೆಚ್ಚುವರಿ ಮುಖ್ಯ ಕಾರ್ಯದರ್ಶಿ ಇ.ವಿ. ರಮಣ ರೆಡ್ಡಿ ‘ಪ್ರಜಾವಾಣಿ’ಗೆ ತಿಳಿಸಿದರು.

ನ್ಯಾಯಾಂಗ ತನಿಖೆಗೆ ಆಗ್ರಹ

‘ಐದು ನಿಮಿಷಗಳ ಕಿರುಚಿತ್ರ ನಿರ್ಮಾಣಕ್ಕೆ ₹ 4.5 ಕೋಟಿ ವೆಚ್ಚ ಮಾಡಲು ವಾಣಿಜ್ಯ ಮತ್ತು ಕೈಗಾರಿಕಾ ಇಲಾಖೆ ಮುಂದಾಗಿದೆ. ಸಚಿವರ ಗಮನಕ್ಕೂ ತಾರದೆ ಕೈಗೊಂಡಿರುವ ನಿರ್ಧಾರದ ಹಿಂದೆ ಹಣ ಲೂಟಿಯ ಹುನ್ನಾರವಿದೆ’ ಎಂದು ಕರ್ನಾಟಕ ರಾಷ್ಟ್ರ ಸಮಿತಿ (ಕೆಆರ್‌ಎಸ್) ಪಕ್ಷದ ಪ್ರಧಾನ ಕಾರ್ಯದರ್ಶಿ ಸಿ.ಎನ್. ದೀಪಕ್ ಆರೋಪಿಸಿದ್ದಾರೆ.

‘ಲೂಟಿ ಮಾಡುವುದಕ್ಕಾಗಿಯೇ ಜಿಮ್ ನಡೆಸಲಾಗುತ್ತಿದೆ. ಕಿರುಚಿತ್ರ ನಿರ್ಮಾಣದ ಕುರಿತು ಸಮಗ್ರವಾಗಿ ನ್ಯಾಯಾಂಗ ತನಿಖೆ ನಡೆಸಬೇಕು. ಈವರೆಗೆ ನಡೆಸಿರುವ ಜಿಮ್‌ಗಳ ಬಗ್ಗೆಯೂ ತನಿಖೆ ನಡೆಸಬೇಕು’ ಎಂದು ಆಗ್ರಹಿಸಿದ್ದಾರೆ.

ಸುದ್ದಿ 2 ನಿಮಿಷ

‘ಅಂತರರಾಜ್ಯ ಜಲವಿವಾದ ಕಾಯ್ದೆಗೆ ತಿದ್ದುಪಡಿ ತನ್ನಿ’

ದಾವಣಗೆರೆ: ‘ಅಂತರರಾಜ್ಯ ಜಲವಿವಾದ ಕಾಯ್ದೆ ಅಪ್ರಸ್ತುತವಾಗಿದ್ದರೆ ನಿಮ್ಮದೇ ಪಕ್ಷದ ನೇತೃತ್ವದ ಕೇಂದ್ರ ಸರ್ಕಾರಕ್ಕೆ ತಿಳಿಸಿ, ತಿದ್ದುಪಡಿ ತರುವ ಮೂಲಕ ರಾಜ್ಯಗಳಿಗೆ ಅನುಕೂಲ ಮಾಡಿಕೊಡಬೇಕು’ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅವರು ಹೇಳಿದರು.



ಈ ಸಂಬಂಧ ಮುಖ್ಯಮಂತ್ರಿಯವರ ಹೇಳಿಕೆಗೆ ಭಾನುವಾರ ದಾವಣಗೆರೆಯಲ್ಲಿ ತಿರುಗೇಟು ನೀಡಿದ ಅವರು, ‘ನರೇಂದ್ರ ಮೋದಿ ನೇತೃತ್ವದ ಕೇಂದ್ರ ಸರ್ಕಾರದ ಗಮನ ಸೆಳೆದು ಕಾಯ್ದೆಗೆ ಸೂಕ್ತ ತಿದ್ದುಪಡಿ ತರಬಹುದಲ್ಲವೇ’ ಎಂದು ಪ್ರಶ್ನಿಸಿದರು.

‘ಜಲ ವಿವಾದ ಕಾಯ್ದೆಯು ಸಮಸ್ಯೆ ಇತ್ಯರ್ಥಪಡಿಸುವ ಬದಲು ಹಲವು ಪ್ರಕರಣಗಳಿಗೆ ಕಾರಣವಾಗಿದೆ. ಕಾಲ ಬದಲಾದಂತೆ ಹಲವು ಕಾನೂನುಗಳು ಅಪ್ರಸ್ತುತವಾಗುತ್ತವೆ’ ಎಂದು ಮುಖ್ಯಮಂತ್ರಿ ಬೊಮ್ಮಾಯಿ ಅವರು ಶನಿವಾರ ಹೊಸದುರ್ಗದಲ್ಲಿ ಹೇಳಿಕೆ ನೀಡಿದ್ದರು.

ಬಿಜೆಪಿ ಅವಧಿಯಲ್ಲಿ 371 (ಜೆ) ಅನುಷ್ಠಾನ: ಸಚಿವ ಜೋಶಿ

ಹುಬ್ಬಳ್ಳಿ: ‘371 (ಜೆ) ಕಲಂ ಸಂವಿಧಾನ ತಿದ್ದುಪಡಿಯಾದ ನಂತರ, ಕೇಂದ್ರ ಮತ್ತು ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರಗಳೇ ಇದ್ದರೂ ಅನುಷ್ಠಾನಗೊಳಿಸಲಿಲ್ಲ. ನಮ್ಮ ಸರ್ಕಾರದ ಅವಧಿಯಲ್ಲಿ ಅನುಷ್ಠಾನಕ್ಕೆ ಬಂದಿದೆ’ ಎಂದು ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಹೇಳಿದರು.

‘ಸಂವಿಧಾನ ತಿದ್ದುಪಡಿಗೆ ಅಟಲ್‌ಬಿಹಾರಿ ವಾಜಪೇಯಿ, ಎಲ್.ಕೆ. ಅಡ್ವಾಣಿ ಅವರು ಒಪ್ಪಿರಲಿಲ್ಲ’ ಎಂಬ ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಹೇಳಿಕೆಗೆ ನಗರದಲ್ಲಿ ಭಾನುವಾರ ಅವರು ಸುದ್ದಿಗಾರರಿಗೆ ಪ್ರತಿಕ್ರಿಯಿಸಿದರು.

‘ಬರೆದು ಕೊಟ್ಟಿದ್ದನ್ನು ರಾಹುಲ್ ಹೇಳುತ್ತಾರೆ. ಬಾಯಿಪಾಠ ಮಾಡಿಸಿದ್ದು ಬಿಟ್ಟು ಬೇರೆ ಪ್ರಶ್ನೆಗಳನ್ನು ಕೇಳಿದರೆ, ಅವರಿಗೆ ಉತ್ತರಿಸಲು ಬರುವುದಿಲ್ಲ. ಅವರನ್ನು ಗಂಭೀರವಾಗಿ ತೆಗೆದುಕೊಳ್ಳುವ ಅಗತ್ಯವಿಲ್ಲ’ ಎಂದರು.

‘ದೇಶದಲ್ಲಿ ಕಾಂಗ್ರೆಸ್ ಇಬ್ಭಾಗವಾಗುತ್ತಿದೆ. ಹಲವರು ಪಕ್ಷ ಬಿಡುತ್ತಿದ್ದಾರೆ. ನರೇಂದ್ರ ಮೋದಿ ನೇತೃತ್ವದಲ್ಲಿ ಈ ದೇಶ ಅಚ್ಚುಕಟ್ಟಾಗಿ ಜೋಡೊ ಆಗಿದೆ’ ಎಂದು ಹೇಳಿದರು.

ಜಲಾಶಯದ ನೀರಿನ ಮಟ್ಟ (ಸಮುದ್ರ ಮಟ್ಟದಿಂದ)

ಜಲಾಶಯ	ಗರಿಷ್ಠ ಮಟ್ಟ (ಅಡಿಗಳಲ್ಲಿ)	ಇಂದಿನ ಮಟ್ಟ	ಒಳಹರಿವು (ಕ್ಯುಸೆಕ್‌ಗಳಲ್ಲಿ)	ಹೊರಹರಿವು (ಕ್ಯುಸೆಕ್‌ಗಳಲ್ಲಿ)
ಕೆಆರ್‌ಎಸ್*	124.80	124.80	33,890	33,890
ಹಾರಂಗಿ	2,859	2,856.17	1,470	341
ಕಬಿನಿ	2,284	2,283.40	1,290	1,500
ಹೇಮಾವತಿ	2,922	2,921.50	2,605	2,542
ಲಿಂಗನಮಕ್ಕಿ	1,819	1,813	2,260	5,591
ಸೂಪಾ (ಮೀ)	564	553.87	1,412	143
ಮಾಣಿ	595	589	68	444
ತುಂಗಭದ್ರಾ	1,633	1632.99	28,209	37,108
ಮಲಪ್ರಭಾ	2079.50	2,079.50	2,394	2,394
ಘಟಪ್ರಭಾ	2,175	2,175	1,517	1,517
ಭದ್ರಾ	186	185	3,671	2,456
ಆಲಮಟ್ಟಿ (ಮೀ)	519.60	519.54	56,466	66,166
ನಾರಾಯಣಪುರ (ಮೀ)	492.25	491.98	1,10,000	1,34,800

* ನೆಲಮಟ್ಟದಿಂದ

ಮಹಿಳೆ ಕೆನ್ನೆಗೆ ಹೊಡೆದ ಸೋಮಣ್ಣ

ಒಂದನೇ ಪುಟದಿಂದ

‘ನಾನು ಬಡವಿ, ಸಹಾಯ ಮಾಡಿ ಎಂದು ಸಚಿವರ ಕಾಲಿಗೆ ಬಿದ್ದು ಕೇಳಿದೆ. ಅವರು ಮೇಲೆತ್ತಿ ಸಮಾಧಾನಪಡಿಸಿದರು. ನನಗೆ ಹೊಡೆದರು ಎಂದು ಸಚಿವರ ವಿರುದ್ಧ ತಪ್ಪಾಗಿ ಆರೋಪಿಸಲಾಗಿದೆ. ಅಂಥದ್ದು ಏನಿಲ್ಲ. ಜಾಗ ಕೊಡಿಸಿದ್ದಾರೆ. ಮಕ್ಕಳಿಗೆ ದಾರಿ ಮಾಡಿಕೊಟ್ಟಿದ್ದಾರೆ. ಅವರಿಗೆ ಪುಣ್ಯ ಬರಲಿ’ ಎಂದು ಕೆಂಪಮ್ಮ ವಿಡಿಯೊದಲ್ಲಿ ಹೇಳಿದ್ದಾರೆ.

ಒತ್ತಡ ಹೇರಿಲ್ಲ: ಮಹಿಳೆ ಮೇಲೆ ಒತ್ತಡ ಹೇರಿ ಹೇಳಿಕೆ ಕೊಡಿಸಲಾಗಿದೆ ಎಂಬ ಆರೋಪದ ಬಗ್ಗೆ ಪ್ರತಿಕ್ರಿಯಿಸಿದ ಸೋಮಣ್ಣ, ‘ಆ ಅವಶ್ಯಕತೆ ನನಗಿಲ್ಲ. ಸಂಸ್ಕಾರಯುತವಾಗಿ ಜೀವನ ಮಾಡಿದ್ದೇನೆ. ಕೆಲವರು ನನ್ನ ವಿರುದ್ಧ ವಿವೇಚನಾರಹಿತವಾಗಿ ಮಾತನಾಡುತ್ತಿದ್ದಾರೆ’ ಎಂದರು.

ಸಚಿವ ಸೋಮಣ್ಣ ವಜಾಕ್ಕೆ ಕಾಂಗ್ರೆಸ್ ಆಗ್ರಹ: ‘ಸಮಸ್ಯೆ ಹೇಳಲು ಬಂದ ಮಹಿಳೆಯ ಮೇಲೆ ಸಚಿವ ವಿ. ಸೋಮಣ್ಣ ಹಲ್ಲೆ ನಡೆಸಿ ರಾಜ್ಯ ಬಿಜೆಪಿಯ ಸ್ತ್ರೀಪೀಡಕ ಸಂಸ್ಕೃತಿಯನ್ನು ಅನಾವರಣಗೊಳಿಸಿದ್ದಾರೆ’ ಎಂದು ರಾಜ್ಯ ಕಾಂಗ್ರೆಸ್ ಘಟಕ ದೂರಿದೆ.

ಟ್ವೀಟ್ ಮಾಡಿರುವ ಕಾಂಗ್ರೆಸ್, ‘ಮೋದಿಯವರ 'ಬೇಟಿ ಬಚಾವೋ'



ವಸತಿ ಸಚಿವ ಸೋಮಣ್ಣ ಅವರು ಮಹಿಳೆಯ ಕೆನ್ನೆಗೆ ಹೊಡೆದ ದೃಶ್ಯ (ವಿಡಿಯೊ ಚಿತ್ರ)

ಎಂಬ ಘೋಷಣೆಯನ್ನು ಗೌರವಿಸುವುದಾದರೆ ಕೂಡಲೇ ಸಚಿವರನ್ನು ವಜಾಗೊಳಿಸಿ’ ಎಂದೂ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರನ್ನು ಆಗ್ರಹಿಸಿದೆ.

‘ಇದು ಬಿಜೆಪಿಯ ಇನ್ನಿಲ್ಲದ ದುರಹಂಕಾರ. ಸಚಿವ ವಿ.ಸೋಮಣ್ಣ ಅವರನ್ನು ವಜಾಗೊಳಿಸಿ’ ಎಂದು ಕಾಂಗ್ರೆಸ್ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಟ್ವೀಟ್ ಮಾಡಿದ್ದಾರೆ.

‘ಸಚಿವರಾಗಿರಲು ಸೋಮಣ್ಣ ನಾಲಾಯಕ್’

ದಾವಣಗೆರೆ: ಅಧಿಕಾರದಲ್ಲಿ ಇರುವವರಿಗೆ ತಾಳ್ಮೆ, ಸಹನೆ, ಜನರ ಸಂಕಷ್ಟಗಳನ್ನು ಪರಿಹರಿಸುವ ಮನಸ್ಸು ಇರಬೇಕು. ಸಮಸ್ಯೆ ಹೇಳಿಕೊಳ್ಳಲು ಬಂದ ಮಹಿಳೆ ಮೇಲೆ ಕೈ ಮಾಡಿದ ಸಚಿವ ವಿ.ಸೋಮಣ್ಣ ಆ ಸ್ಥಾನದಲ್ಲಿ ಮುಂದುವರಿಯಲು ನಾಲಾಯಕ್ ಎಂದು ವಿಧಾನಸಭೆ ವಿರೋಧ ಪಕ್ಷದ ನಾಯಕ ಸಿದ್ದರಾಮಯ್ಯ ಅಭಿಪ್ರಾಯಪಟ್ಟರು.

‘ಮಹಿಳೆ ಮೇಲೆ ಕೈ ಮಾಡಿರುವುದು ಅವರ ಸಂಸ್ಕೃತಿಯನ್ನು ತೋರಿಸುತ್ತದೆ. ಮನುಷ್ಯನಾದವನಿಗೆ ಮಾನವೀಯತೆ ಇರಬೇಕು. ಮಾನವೀಯತೆ ಇರುವವರಿಗೆ ಸಂಸ್ಕೃತಿ ಇರುತ್ತದೆ. ಬಿಜೆಪಿಗೆ ಮಾನವೀಯತೆಯೇ ಇಲ್ಲ. ಇನ್ನು ಸಂಸ್ಕೃತಿ ಎಲ್ಲಿಂದ ಬರುತ್ತದೆ’ ಎಂದು ವ್ಯಂಗ್ಯವಾಡಿದರು.

‘ಕಾವ್ಯದ ಮೂಲಕವಾದರೂ ಸತ್ಯ ಹೇಳಲಿ’

ಸಂಸದ ಎಲ್‌.ಹನುಮಂತಯ್ಯ ಆಶಯ ● ಸಂಗಂ ವಿಶ್ವಕವಿ ಸಮ್ಮೇಳನ ಸಂಪನ್ನ

ಪ್ರಜಾವಾಣಿ ವಾರ್ತೆ

ಬಳ್ಳಾರಿ (ಡಾ. ಜೋಳದರಾಶಿ ದೊಡ್ಡನಗೌಡರ ವೇದಿಕೆ): ವಿಶ್ವಕವಿ ಸಮ್ಮೇಳನದ ಕವಿತೆಗಳಲ್ಲಿ ಸಹಾನುಭೂತಿ, ಮಾನವೀಯತೆಗಾಗಿ ಶೋಧ ಕಂಡುಬಂದಿರುವುದು, ಈ ಸಮಯದ ತುರ್ತು ಏನು ಎಂಬುದನ್ನು ಬಿಡಿಸಿ ಹೇಳಿದೆ ಎಂದು ಸಂಸದ ಎಲ್. ಹನುಮಂತಯ್ಯ ಹೇಳಿದರು.

ಬಳ್ಳಾರಿಯ ‘ಅರಿವು’ ಸಂಸ್ಥೆ ಹಾಗೂ ‘ಸಂಗಂ’ ಜಂಟಿ ಆಯೋಗದಲ್ಲಿ, ‘ಡೆಕ್ಕನ್ ಹೆರಾಲ್ಡ್’ ಹಾಗೂ ‘ಪ್ರಜಾವಾಣಿ’ ಬಳಗದ ಸಹಭಾಗಿತ್ವದಲ್ಲಿ ಆಯೋಜಿಸಲಾಗಿದ್ದ ಸಂಗಂ ವಿಶ್ವಕವಿ ಸಮ್ಮೇಳನ ಭಾನುವಾರ ಸಮಾರೋಪ ಸಮಾರಂಭದಲ್ಲಿ ಮಾತನಾಡಿದರು.

ಈ ದುರಿತ ಕಾಲದಲ್ಲಿ ಕವಿಗಳು, ನಾವಿದನ್ನು ಬರೆಯಬಹುದೆ, ಬರೆಯಬಾರದೆ, ಬರೆದರೆ.. ಬರೆಯದಿದ್ದರೆ ಎಂಬ ವೈರುಧ್ಯಗಳಲ್ಲಿ ಜೀಕುತ್ತಿದ್ದಾರೆ. ಸೃಜನಶೀಲ ಬರಹಗಾರರ ಮೇಲೆ ಅದೃಶ್ಯವಾದ ಅಧಿಕಾರ ದಮನಿಸುವ ಒತ್ತಡ ತರುತ್ತಿದೆ ಎಂದರು.

ಹಿಂದುಳಿದವರ, ದಮನಿತರ, ದುರ್ಬಲರ ಧ್ವನಿಯಾಗುತ್ತಿಲ್ಲ, ಗಡಿ ಹಂಚಿಕೊಂಡ ದೇಶಗಳ ಕುರಿತು ಪ್ರೀತಿಯ, ಸಹಾನುಭೂತಿಯ ಪದಗಳು ಮೂಡುತ್ತಿಲ್ಲ. ಅಂಥ ಒತ್ತಡವನ್ನು ಮೀರಿಯೂ ತನ್ನ ಸದಾಶಯಗಳನ್ನು ಅಭಿವ್ಯಕ್ತಿಗೊಳಿಸುತ್ತಿದ್ದಾನೆ ಎಂದರು.

ಭಿನ್ನಾಭಿಪ್ರಾಯಗಳು ಬಂದರೆ ದೇಶದ್ರೋಹಿ ಪಟ್ಟ ಕಟ್ಟಲಾಗುತ್ತಿದೆ. ಜೈಲಿಗೆ ಅಟ್ಟಲಾಗುತ್ತಿದೆ. ಸತ್ಯದ ಮಾತು ಆಚೆ ಬರುವುದಾದರೆ ದಮನಗೊಳಿಸುವ ಭೀತಿಯ ವಾತಾವರಣ ಮೂಡಿಸಿದ್ದಾರೆ ಎಂದು ಟೀಕಿಸಿದರು.

ಸತ್ಯವನ್ನು ನೇರವಾಗಿ ಹೇಳಲಾಗದೇ ಇದ್ದಲ್ಲಿ, ಸತ್ಯವನ್ನು ಕಾವ್ಯದ ಮೂಲಕವಾಗಿಯಾದರೂ ಹೇಳುವಂತಾಗಲಿ. ಆ ಕಾರಣಕ್ಕಾಗಿಯಾದರೂ ಇಂಥ ಕವಿ ಸಮ್ಮೇಳನಗಳು, ಗೋಷ್ಠಿಗಳು ನಿರಂತರವಾಗಲಿ ಎಂದು ಆಶಿಸಿದರು.

21 ಕವಿಗೋಷ್ಠಿಗಳ ನಂತರ ಸಮಾರೋಪ ಸಮಾರಂಭವನ್ನು ಕಲಾವಿದೆ ಮಾತಾ ಮಂಜಮ್ಮ ಜೋಗತಿ ಉದ್ಘಾಟಿಸಿದರು.

ಕವಿ ಎಚ್.ಎಸ್. ಶಿವಪ್ರಕಾಶ್, ಲೋಹಿಯಾ ಪ್ರಕಾಶನದ ಚೆನ್ನಬಸಣ್ಣ, ಸಂಗಂ ಸಮ್ಮೇಳನದ ಸಂಘಟನಾಕಾರರಾದ ಡಾ. ಅರವಿಂದ ಪಟೇಲ್, ಎಸ್. ಪನ್ನರಾಜ್, ಆರಿಫ್ ರಾಜಾ, ಅಜಯ್ ಬಣಕಾರ್, ಡಾ. ವೈ.ಸಿ. ಯೋಗಾನಂದ ರೆಡ್ಡಿ, ಕೆ. ಶಿವಲಿಂಗಪ್ಪ ಹಂದ್ಯಾಳ್, ವೀರೇಂದ್ರ ರವಿಹಾಳ್, ಮಧುಸೂದನ್ ಕಾರಿಗನೂರು, ಡಾ. ಗಡ್ಡಿ ದಿವಾಕರ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ನಿರ್ದೇಶಕ ಸಿದ್ದಲಿಂಗೇಶ್ ರಂಗಣ್ಣನವರ, ಸಾಹಿತಿ ಕಮಲಾಕರ ಭಟ್, ಬಿಐಟಿಎಂ ಕಾಲೇಜಿನ ಅಧ್ಯಕ್ಷ ಮಹಿಪಾಲ್ ಇದ್ದರು.

ಹದಿನೆಂಟು ದೇಶಗಳಿಂದ ವಿವಿಧ ಭಾಷೆಯ ಕವಿಗಳು, ಮಣಿಪುರ, ಮಹಾರಾಷ್ಟ್ರ, ಕೇರಳ, ಬಿಹಾರ, ರಾಜಸ್ಥಾನ, ಗುಜರಾತ್, ಮಧ್ಯಪ್ರದೇಶ, ದೆಹಲಿ, ತೆಲಂಗಾಣ, ಅಸ್ಸಾಂ ರಾಜ್ಯಗಳ ಕವಿಗಳು ಭಾಗವಹಿಸಿದ್ದರು.



‘ಸಂಗಂ’ ವಿಶ್ವಕವಿ ಸಮ್ಮೇಳನದ ಸಮಾರೋಪ ಸಮಾರಂಭವನ್ನು ಕಲಾವಿದೆ ಮಾತಾ ಮಂಜಮ್ಮ ಜೋಗತಿ, ಸಂಸದ ಎಲ್. ಹನುಮಂತಯ್ಯ, ಲೋಹಿಯಾ ಪ್ರಕಾಶನದ ಚೆನ್ನಬಸವಣ್ಣ ಅವರು ಸಸಿಗೆ ನೀರೆರೆದು ಉದ್ಘಾಟಿಸಿದರು. –ಪ್ರಜಾವಾಣಿ ಚಿತ್ರ: ಲವ

> **ದೇಶಭಕ್ತರು ದೇಶದ್ರೋಹಿಗಳಾಗಿದ್ದಾರೆ, ದೇಶದ್ರೋಹಿಗಳು ದೇಶಭಕ್ತರಾಗಿದ್ದಾರೆ. ದೇಶದ ಪರ ಧ್ವನಿ ಎತ್ತುವವರಿಗೆ ಜೈಲು, ಭೋಪರಾಕು ಹೇಳುವವರಿಗೆ ಪ್ರಶಸ್ತಿ ಸಾಮಾನ್ಯವಾಗಿದೆ**
> **ಎಲ್. ಹನುಮಂತಯ್ಯ,** ಸಂಸದ

> **ನೆಲದ ಹಾಡು ಎನಿಸಿಕೊಳ್ಳುವ ಬುಡಕಟ್ಟು ಕಾವ್ಯಕ್ಕೆ ಪ್ರಾತಿನಿಧ್ಯ ನೀಡಲಾಗಲಿಲ್ಲ. ಕಾಶ್ಮೀರಿ, ಕೊಂಕಣಿ, ಚೀನಿ ಭಾಷಿಗರು ಆಚೆ ಉಳಿದರು. ಮುಂದಿನ ಸಲ ಈ ದೋಷಗಳನ್ನು ಸರಿಪಡಿಸಲಾಗುವುದು**
> **ಎಚ್.ಎಸ್.ಶಿವಪ್ರಕಾಶ,** ಸಾಹಿತಿ

> **ರೋಗಗಳಿಗೆ ಸಂಗೀತದ ಚಿಕಿತ್ಸೆ ಇದೆಯೆಂದು ಗೊತ್ತಿತ್ತು, ಬಳ್ಳಾರಿಯ ವೈದ್ಯ ಸಮೂಹ ಸಾಮಾಜಿಕ ಸ್ವಾಸ್ಥ್ಯಕ್ಕೆಂದೇ ಕಾವ್ಯ ಚಿಕಿತ್ಸೆ ಕಂಡುಕೊಂಡಂತಿದೆ**
> **ಚೆನ್ನಬಸವಣ್ಣ,** ಲೋಹಿಯಾ ಪ್ರಕಾಶನ



ಆನಂದ ಮಾಮನಿ ಅವರ ಪಾರ್ಥಿವ ಶರೀರದ ಮೆರವಣಿಗೆ ಸವದತ್ತಿಯಲ್ಲಿ ಭಾನುವಾರ ನಡೆಯಿತು

ಜನಸಾಗರದ ಮಧ್ಯೆ ಶಾಸಕ ಮಾಮನಿ ಅಂತ್ಯಕ್ರಿಯೆ

ಪ್ರಜಾವಾಣಿ ವಾರ್ತೆ

ಸವದತ್ತಿ (ಬೆಳಗಾವಿ ಜಿಲ್ಲೆ): ಅನಾರೋಗ್ಯದಿಂದಾಗಿ ಶನಿವಾರ ರಾತ್ರಿ ನಿಧನರಾಗಿದ್ದ ವಿಧಾನಸಭೆಯ ಉಪ ಸಭಾಧ್ಯಕ್ಷ ಆನಂದ ಮಾಮನಿ (56) ಅವರ ಅಂತ್ಯಕ್ರಿಯೆ, ಇಲ್ಲಿನ ಯಡ್ರಾಂವಿ ರಸ್ತೆಯಲ್ಲಿರುವ ಅವರ ತೋಟದಲ್ಲಿ ಭಾನುವಾರ ಸಂಜೆ ನಡೆಯಿತು.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಸೇರಿದಂತೆ ರಾಜ್ಯದ ಹಲವು ಸಚಿವರು, ಶಾಸಕರು, ಮಠಾಧೀಶರು ಅಂತಿಮ ದರ್ಶನ ಪಡೆದರು. ಅಪಾರ ಸಂಖ್ಯೆಯಲ್ಲಿ ಅಭಿಮಾನಿಗಳು ಸೇರಿದ್ದರು.

ಪೊಲೀಸರು ಗಾಳಿಯಲ್ಲಿ ಮೂರು ಸುತ್ತು ಗುಂಡು ಹಾರಿಸಿ ಸರ್ಕಾರಿ ಗೌರವ ಸಲ್ಲಿಸಿದರು. ಪಾರ್ಥಿವ ಶರೀರಕ್ಕೆ ಹೊದಿಸಿದ್ದ ರಾಷ್ಟ್ರಧ್ವಜವನ್ನು ಮುಖ್ಯಮಂತ್ರಿ ಅವರು ಆನಂದ ಅವರ ಪತ್ನಿ ರತ್ನಾ ಅವರಿಗೆ ಹಸ್ತಾಂತರಿಸಿದರು. ಇದಕ್ಕೂ ಮೊದಲು ಪಾರ್ಥಿವ ಶರೀರವನ್ನು ಮೆರವಣಿಗೆಯಲ್ಲಿ ತರಲಾಯಿತು.

ಆನಂದ ಅವರ ತಂದೆ ಚಂದ್ರಶೇಖರ ಮತ್ತು ಸಹೋದರ ಬಾಪು ಅವರ ಸಮಾಧಿಗಳು ಇದೇ ತೋಟದಲ್ಲಿವೆ. ತಂದೆ ಸಮಾಧಿಯ ಪಕ್ಕದಲ್ಲೇ ಆನಂದ ಅವರನ್ನೂ ಸಮಾಧಿ ಮಾಡಲಾಯಿತು. ವಿವಿಧ ಮಠಾಧೀಶರು ಲಿಂಗಾಯತ–ಪಂಚಮಸಾಲಿ ವಿಧಾನಗಳನ್ನು ಅನುಸರಿಸಿದರು. ಆನಂದ ಅವರ ತಾಯಿ ಗಂಗಮ್ಮ, ಪತ್ನಿ ರತ್ನಾ, 15 ವರ್ಷದ ಪುತ್ರಿ ಚೇತನಾ, 13 ವರ್ಷದ ಪುತ್ರ ಚಿನ್ಮಯ ಅವರನ್ನು ಜನ ಸಂತೈಸಿದರು.

ಅಕಾಲಿಕ ಅಗಲಿಕೆ: ಚಂದ್ರಶೇಖರ ಮತ್ತು ಗಂಗಮ್ಮ ದಂಪತಿ ಪುತ್ರನಾಗಿ 1966ರ ಜನವರಿ 18ರಂದು ಜನಿಸಿದ್ದರು. 2008ರಲ್ಲಿ ಮೊದಲು ವಿಧಾನಸಭೆಗೆ ಆಯ್ಕೆಯಾಗಿದ್ದರು. 2013, 2018ರಲ್ಲಿಯೂ ಪುನರಾಯ್ಕೆಯಾಗಿ ಹ್ಯಾಟ್ರಿಕ್ ಸಾಧನೆ ಮಾಡಿದ್ದರು.

ತಂದೆ ಹಾದಿ ಹಿಡಿದ ಮಗ


ದಿವಂಗತ ಚಂದ್ರಶೇಖರ ಎಂ.ಮಾಮನಿ ಅವರು 1995-1999 ಅವಧಿಯಲ್ಲಿ ಉಪ ಸಭಾಧ್ಯಕ್ಷರಾಗಿದ್ದರು. ಆ ಸ್ಥಾನವನ್ನೇ ಆನಂದ ಮಾಮನಿ ಕೂಡ ಈಗ ಪಡೆದಿದ್ದರು. ತಂದೆಯ ಗತ್ತಿನಲ್ಲೇ ಹುದ್ದೆ ನಿಭಾಯಿಸಿದ್ದರು. ಉಪಸಭಾಧ್ಯಕ್ಷ ಆಗಿದ್ದಾಗಲೇ ಚಂದ್ರಶೇಖರ ಮಾಮನಿ ಅವರೂ ನಿಧನರಾಗಿದ್ದರು. ಕಾಕತಾಳೀಯ ಎಂಬಂತೆ ಆನಂದ ಮಾಮನಿ ಅವರು ಸಾವಿನಲ್ಲೂ ತಂದೆಯ ಹೆಜ್ಜೆ ಅನುಸರಿಸಿದರು.

ಪ್ರಜಾವಾಣಿ@75 ಅಮೃತ ಮಹೋತ್ಸವ

ಓದುಗರ ಪ್ರತಿಕ್ರಿಯೆಗಳು

ನಿಮ್ಮ ಅನಿಸಿಕೆಗಳನ್ನು pvat75@prajavani.co.in ಗೆ ಕಳುಹಿಸಿ. ಇನ್ನಷ್ಟು ಪ್ರತಿಕ್ರಿಯೆಗಳನ್ನು prajavani.net ನಲ್ಲಿ ಓದಬಹುದು...

‘ನನ್ನನ್ನು ಬೆಳಿಸಿದ್ದೇ ಪ್ರಜಾವಾಣಿ’



‘ಪ್ರಜಾವಾಣಿ’ ಯಾವತ್ತಿಗೂ ಜನರ ದನಿಯಾದ ಏಕೈಕ ದೈನಿಕ. ಒಂದು ಪ್ರಸಂಗ ನೆನಪಾಗುತ್ತದೆ. ಎಸ್.ಎಂ.ಕೃಷ್ಣ ಅವರ ಆಡಳಿತವಿತ್ತು. ಆಗ ಸರ್ಕಾರ ಖಾಸಗಿ ಅನುದಾನಿತ ಕಾಲೇಜುಗಳ ಅನುದಾನವನ್ನು ಶೇಕಡ 15ರಷ್ಟು ಕಡಿತಗೊಳಿಸಲು ಹೊರಟಿತ್ತು. ಅಂದು ಆ ಅವೈಜ್ಞಾನಿಕ ನೀತಿಯನ್ನು ಖಂಡಿಸಿದ್ದೇ ನಮ್ಮ ಹೆಮ್ಮೆಯ ಪ್ರಜಾವಾಣಿ! ಈ ನೀತಿ ಮಾನವ ವಿರೋಧಿ ಹಾಗೂ ಕಾಲೇಜು ಮತ್ತು ಇತರ ಅನುದಾನಿತ ಶಾಲೆಗಳ ಶಿಕ್ಷಕರ, ಸಿಬ್ಬಂದಿಯ ಅನ್ನ ಕಸಿಯುವ ಅನಿಷ್ಟ ತಂತ್ರವೆಂದು ಸರ್ಕಾರಕ್ಕೆ ಚಾಟಿ ಬೀಸಿತು. ಅಭಿಯಾನ ಸ್ವರೂಪದಲ್ಲಿ ಅನುದಾನಿತ ಶಿಕ್ಷಕರ ಬೆನ್ನಿಗೆ ನಿಂತು ಅದರಲ್ಲಿ ಯಶಸ್ಸು ಕಂಡಿತು. ಶಿಕ್ಷಕರ ಸಂಬಳಕ್ಕೆ ಬೀಳಲಿದ್ದ ಕತ್ತರಿ ತಪ್ಪಿಸಿತು. ವರ್ತಮಾನದ ದುರಿತ ಕಾಲದಲ್ಲೂ ಜನರ ವಾಣಿಯಾಗಿ ಪ್ರಭುತ್ವಗಳ ದುರಾಡಳಿತ, ಜನವಿರೋಧಿ ನೀತಿಯನ್ನು ಕಟುವಾಗಿ ಟೀಕಿಸಿ, ವಿಮರ್ಶಿಸುತ್ತ ಬಂದಿದೆ. ಇದಷ್ಟೇ ಅಲ್ಲ, ನನ್ನನ್ನು ಬೆಳೆಸಿದ್ದೆ ಪ್ರಜಾವಾಣಿ. ಸಾಹಿತ್ಯ, ಚಿತ್ರಕಲೆ, ರಂಗಭೂಮಿ ಕುರಿತ ಬರಹಗಳನ್ನು ಎರಡು ದಶಕಗಳಿಗೂ ಮಿಕ್ಕಿದ ಅವಧಿಯಲ್ಲಿ ಪ್ರಕಟಿಸುತ್ತ ಬಂದಿದೆ. ಆ ನಿಟ್ಟಿನಲ್ಲಿ ನನ್ನೊಳಗೆ ಆತ್ಮವಿಶ್ವಾಸ ಹೆಚ್ಚಿಸಿದ್ದೂ ನಮ್ಮ ಪ್ರಜಾವಾಣಿಯೇ!

ಡಾ.ಡಿ.ಎಸ್.ಚೌಗಲೆ, ನಾಟಕಕಾರ, ಚಿತ್ರ ಕಲಾವಿದ, ಬೆಳಗಾವಿ

‘ಪ್ರತಿಭೆಗಳಿಗೆ ಸದಾ ಪ್ರೋತ್ಸಾಹ’



‘ಪ್ರಜಾವಾಣಿ’ ಪತ್ರಿಕೆಯನ್ನು ಓದುವುದೇ ಖುಷಿ ನೀಡುವ ವಿಚಾರ. ಒಬ್ಬಳು ಅಥ್ಲೀಟ್ ಆಗಿ ನನ್ನ ಯಶಸ್ಸಿನಲ್ಲಿ ಪತ್ರಿಕೆಯ ಕೊಡುಗೆಯೂ ಇದೆ. ಯುವ ಕ್ರೀಡಾ ಪ್ರತಿಭೆಗಳಿಗೆ ಸದಾ ಪ್ರೋತ್ಸಾಹ ನೀಡಿದೆ. ಸುದ್ದಿಯನ್ನು ನಿಷ್ಪಕ್ಷಪಾತವಾಗಿ ಓದುಗರಿಗೆ ತಲುಪಿಸುವ ಕೆಲಸವನ್ನು ಹಲವು ದಶಕಗಳಿಂದ ಮಾಡಿಕೊಂಡು ಬರುತ್ತಿದೆ. ಅತ್ಯಂತ ವಿಶ್ವಾಸಾರ್ಹ ಪತ್ರಿಕೆ ಎನಿಸಿದೆ. ಈ ಪತ್ರಿಕೆ ಭವಿಷ್ಯದಲ್ಲಿ ಇನ್ನಷ್ಟು ಎತ್ತರಕ್ಕೆ ಬೆಳೆಯಲಿ.

ಅಶ್ವಿನಿ ನಾಚಪ್ಪ, ಅಂತರರಾಷ್ಟ್ರೀಯ ಅಥ್ಲೀಟ್

‘ಸುದ್ದಿ ಬರೆಯಲು ಕಲಿತೆ’

‘ಪ್ರಜಾವಾಣಿ’ ಅಮೃತ ಮಹೋತ್ಸವ ವರ್ಷಕ್ಕೆ ಕಾಲಿಟ್ಟಿರುವುದು ಸಂತೋಷ ತಂದಿದೆ. ‘ಪ್ರಜಾವಾಣಿ’ಯನ್ನು ನಾನು ಐವತ್ತು ವರ್ಷಗಳಿಂದ ಓದುತ್ತಿದ್ದೇನೆ. ನನ್ನ ಊರು ರಾಮದುರ್ಗದಿಂದ ಮೂರು ಕಿಲೋಮೀಟರ್ ಇದ್ದರೂ ಕೂಡ ಪತ್ರಿಕೆಯನ್ನು ತಂದು ಓದುತ್ತಿದ್ದೇನೆ. ನನಗೀಗ 78 ವರ್ಷ. ಪ್ರಜಾವಾಣಿ ಓದಿದರೆ ಮನಸ್ಸಿಗೆ ಸಮಾಧಾನ. ಓದದಿದ್ದರೆ ಏನೋ ಕಳೆದುಕೊಂಡಂತಾಗುತ್ತದೆ. ನಾನು ಹೆಚ್ಚು ಕಲಿತವನಲ್ಲ. ಪತ್ರಿಕೆ ಓದುತ್ತಾ ಚಿಕ್ಕ ಚಿಕ್ಕ ಸುದ್ದಿಗಳನ್ನು ಬರೆಯಲು ಕಲಿತುಕೊಂಡಿದ್ದೇನೆ. ಪ್ರಜಾವಾಣಿಯು ಓದುಗರಿಂದ ಸಂಗ್ರಹಿಸಿದ ಹಣವನ್ನು ಕೂಡಿಸಿ ಮೊದಲ ವರ್ಷದ ಪಿಯುಸಿ ಓದುವ ಬಡ ಮಕ್ಕಳಿಗೆ ಪ್ರತಿ ವರ್ಷ ವಿದ್ಯಾರ್ಥಿ ವೇತನ ನೀಡುವ ಮೂಲಕ ಸಹಾಯ ಮಾಡುತ್ತಿದೆ. ಪ್ರಜಾವಾಣಿ ಪತ್ರಿಕೆ ಸದಾಕಾಲ ಸಮಾಜದ ಕಣ್ಣು ತೆರೆಸುವ ಕೆಲಸ ಮಾಡುತ್ತಾ ಹೋಗಲಿ. ಇನ್ನಷ್ಟು ಯಶಸ್ಸು ಸಾಧಿಸಲಿ ಎಂದು ಶುಭ ಕೋರುತ್ತೇನೆ.



ಬಸಪ್ಪ ಎಸ್.ಮುಳ್ಳೂರ, ಹಲಗತ್ತಿ, ರಾಮದುರ್ಗ ತಾ.

‘ವಕೀಲನಾಗಲು ಪ್ರೇರೇಪಣೆ ನೀಡಿದ ಪ್ರಜಾವಾಣಿ’


1955ಲ್ಲಿ ನಾನು ಐದನೇ ತರಗತಿಯಲ್ಲಿದ್ದಾಗ ದಿ.ಕೆಂಗಲ್ ಹನುಮಂತಯ್ಯನವರು ಮೈಸೂರು ರಾಜ್ಯದ ಮುಖ್ಯಮಂತ್ರಿ ಆಗಿದ್ದರು. ಬೆಂಗಳೂರಿನ ಗಾಂಧಿನಗರದಲ್ಲಿ ಕ್ರಿಮಿನಲ್ ಲಾಯರ್ ಬೇಲೂರು ಶ್ರೀನಿವಾಸ ಅಯ್ಯಂಗಾರ್ ಮತ್ತು ಅವರ ಕುಟುಂಬದ ಇತರೆ ಆರು ಮಂದಿ ಒಂದು ರಾತ್ರಿ ಕೊಲೆಯಾಗಿದ್ದರು. ಮರುದಿನ ಬೆಳಿಗ್ಗೆ ಕೆಂಗಲ್ ಹನುಮಂತಯ್ಯನವರು, ಗೃಹ ಸಚಿವರು ಮತ್ತು ಐಜಿಪಿಗಳು ಸ್ಥಳಕ್ಕೆ ಭೇಟಿ ಕೊಟ್ಟ ಕುರಿತು ‘ಪ್ರಜಾವಾಣಿ’ ಮುಖಪುಟದಲ್ಲಿ ದೊಡ್ಡ ಸುದ್ದಿಯಾಯಿತು. ಮರುವರ್ಷ ಈ ಕೊಲೆ ಪ್ರಕರಣದ ವಿಚಾರಣೆ ಆರಂಭವಾಯಿತು. ಮೂರು ತಿಂಗಳ ಕಾಲ ಎಡೆಬಿಡದೇ ನಡೆಯಿತು. ವಿಚಾರಣೆಯ ವಿವರಗಳು ಪ್ರಜಾವಾಣಿ ಮುಖಪುಟದಿಂದಲೇ ಪ್ರಕಟವಾಗುತಿತ್ತು. ಜನರು ಪತ್ರಿಕೆಗಾಗಿ ಊರುಗಳಲ್ಲಿ, ಬಸ್‌ಗಳು ನಿಲ್ಲುತ್ತಿದ್ದ ಜಾಗದಲ್ಲಿ ನಿಂತು ಪತ್ರಿಕೆ ಪಡೆದು ಓದುತ್ತಿದ್ದರು.



ನಾನು 13 ಜನರಿದ್ದ ಅವಿಭಕ್ತ ಕುಟುಂಬದಲ್ಲಿ ಒಬ್ಬ. ಅಕ್ಷರಾಭ್ಯಾಸ ಮಾಡುತ್ತಿದ್ದವನು ನಾನೊಬ್ಬನೇ. ಪ್ರತಿ ಸಂಜೆ 7.30ಕ್ಕೆ ನನ್ನ ದೊಡ್ಡಪ್ಪಂದಿರು ನನ್ನಿಂದ ಪ್ರಜಾವಾಣಿ ಓದಿಸುತ್ತಿದ್ದರು. ಅಷ್ಟರಲ್ಲಿ ನೆರೆಹೊರೆಯುವರು ಬಂದು ಸೇರುತ್ತಿದ್ದರು. ಅಲ್ಲಿ, ಎರಡು ಗುಂಪಾಗುತ್ತಿದ್ದು ಒಂದು ಪೊಲೀಸರ ಪರ, ಮತ್ತೊಂದು ಆರೋಪಿ ಪರ. ಆಗ ಆರೋಪಿ ಪರ ವಕೀಲರು ಭಾಷ್ಯಮ್ ಮತ್ತು ಮಹೇಶಚಂದ್ರ ಗುರು. ಭಾಷ್ಯಮ್ ಕ್ರಿಮಿನಲ್ ವಕೀಲ ಮತ್ತು ಕಾಂಗ್ರೆಸ್ ಧುರೀಣ. ಅವರ ಹೆಸರಿನಲ್ಲಿ ನಗರದಲ್ಲಿ ಎರಡು ವೃತ್ತಗಳಿವೆ. ಒಂದು ಗುಂಪು ಪಬ್ಲಿಕ್ ಪ್ರಾಸಿಕ್ಯೂಟರ್ ಕಾರ್ಯವೈಖರಿ ಪ್ರದರ್ಶಿಸಿದರೆ, ಇನ್ನೊಂದು ಗುಂಪು ಆರೋಪಿ ಪರ ವಕೀಲರ ಪಾಟಿ ಸವಾಲು ಮತ್ತು ಮಾತಿನ ಕೌಶಲ ಪ್ರಶಂಸಿಸುತಿತ್ತು. ಆಗಲೇ ನನಗೆ ಅನಿಸತೊಡಗಿತು. ನಾನು ಮುಂದೆ ಆಗುವುದಾದರೆ, ಜೀವನ್ಮರಣಗಳ ಮಧ್ಯೆ ಸೆಣಸುವ ವಕೀಲನಾಗಬೇಕೆಂದು. ಅಂದು ‘ಪ್ರಜಾವಾಣಿ’ ಉಂಟು ಮಾಡಿದ ಪ್ರೇರಣೆಯಿಂದ ವಕೀಲನಾಗಿ ವೃತ್ತಿಯನ್ನು 50 ವರ್ಷಗಳಿಂದ ಮುಂದುವರಿಸುತ್ತಿದ್ದೇನೆ.

ಸಿ.ಎಚ್.ಹನುಮಂತರಾಯ, ವಕೀಲರು

‘ಪತ್ರಿಕಾಧರ್ಮ ಮೀರದ ಪ್ರಜಾವಾಣಿ’



ಬಾಲ್ಯದ ದಿನಗಳಲ್ಲಿ ಅಂಚೆಯ ಮೂಲಕ ಪತ್ರಿಕೆಯನ್ನು ಪಡೆಯುತ್ತಿದ್ದೆ. ನಿರಂತರವಾಗಿ 60 ವರ್ಷ ‘ಪ್ರಜಾವಾಣಿ’ಯ ಓದುಗನಾಗಿದ್ದು, ಬೇರೆ ಪತ್ರಿಕೆಗಳನ್ನು ಓದುವುದಕ್ಕೆ ಏನೋ ತೊಡಕಾಗುತ್ತದೆ. ಸಿನಿಮಾ, ಕ್ರೀಡೆ, ಅಭಿಮತ, ವಾಚಕರವಾಣಿ ನೋಡಿದಾಗ ಎಲ್ಲೂ ಕೂಡ ಪತ್ರಿಕಾಧರ್ಮಕ್ಕೆ ವಿರುದ್ಧವಾಗಿ ಪತ್ರಿಕೆಯು ನಡೆದುಕೊಂಡಿಲ್ಲ. ಕುವೆಂಪು ಅವರ ಚಿತ್ರ ಸಂಪುಟ ಮಾಡಿದಾಗ ‘ಪ್ರಜಾವಾಣಿ’ ಗ್ರಂಥಾಲಯದಿಂದ ಸಾಕಷ್ಟು ಫೋಟೊಗಳನ್ನು ಪಡೆದಿದ್ದೇವೆ. ಕುವೆಂಪು ವಿಚಾರಧಾರೆಯನ್ನು ಇಟ್ಟುಕೊಂಡು ಪತ್ರಿಕೆಯಲ್ಲಿ ಬಂದ ವಿಚಾರಗಳದ್ದೇ ದೊಡ್ಡ ಸಂಚಿಕೆಯನ್ನು ತರಬಹುದಾಗಿದೆ.

ಕಡಿದಾಳು ಪ್ರಕಾಶ್, ಸಮಕಾರ್ಯದರ್ಶಿ, ರಾಷ್ಟ್ರಕವಿ ಕುವೆಂಪು ಪ್ರತಿಷ್ಠಾನ, ಕುಪ್ಪಳ್ಳಿ

ಪ್ರಜಾವಾಣಿ ಸೋಮವಾರ, 24 ಅಕ್ಟೋಬರ್ 2022

ಶಿಕ್ಷಣ



‘ಪ್ರಾಜೆಕ್ಟ್ ವರ್ಕ್’ ಯೋಚಿಸಿ ಮಾಡಿ

> ಶಾಲೆಗಳಲ್ಲಿ ಮಕ್ಕಳಿಗೆ ನೀಡುವ ಯೋಜನೆ (ಪ್ರಾಜೆಕ್ಟ್ ವರ್ಕ್) ಎಂಬುದು ಇಂಟರ್‌ನೆಟ್‌ನಿಂದ ನಕಲು ಮಾಡುವ ಸಂಗತಿಯಾಗದೇ ಮಕ್ಕಳಲ್ಲಿ ಸೃಜನಶೀಲತೆಯನ್ನು ಅರಳಿಸುವ ಚಟುವಟಿಕೆಯಾಗಬೇಕು

ಸದಾಶಿವ್ ಸೊರಟೂರು



ಮೊನ್ನೆಯಷ್ಟೆ ಮೂರು ಅವಧಿಗಳಲ್ಲಿ ಹತ್ತನೇ ತರಗತಿಗೆ ಒಂದು ಪದ್ಯ ಬೋಧಿಸಿದೆ. ಅವರ ಪ್ರಶ್ನೆಗಳಿಗೆ ಸಾದ್ಯಂತವಾಗಿ ಉತ್ತರಿಸಿದೆ. ಪದ್ಯದ ಕುರಿತು ಒಂದು ಚಿಕ್ಕ ಯೋಜನೆ (project work) ನೀಡಿದೆ. ಪದ್ಯದ ಆಯ್ದ ಎರಡು ಚರಣಗಳಿಗೆ ನಿಮ್ಮದೇ ಸಾಲುಗಳಲ್ಲಿ ಅದರ ಭಾವ ಬರೆದುಕೊಂಡು ಬನ್ನಿ ಎಂದೆ. ಮರುದಿನ ಬಹುತೇಕ ವಿದ್ಯಾರ್ಥಿಗಳು ಅದ್ಭುತ ಸಾಲುಗಳೊಂದಿಗೆ ಬಂದಿದ್ದರು. ನನಗೆ ಖುಷಿಯಾಗುವ ಬದಲು ಅನುಮಾನವಾಯಿತು. ಆ ಪದಗಳು ಅವರ ಮಟ್ಟ ಮೀರಿದ್ದವು. ಅದರ ಬಗ್ಗೆ ವಿಚಾರಿಸಿದಾಗ ‘ಸರ್ ಗೂಗಲ್ ನಲ್ಲಿ ಸರ್ಚ್ ಮಾಡಿದ್ವಿ. ಸಿಕ್ತು ಬರೆದುಕೊಂಡು ಬಂದ್ವಿ’ ಅಂದರು. ನಾನು ಮಕ್ಕಳಿಂದ ಏನನ್ನು ನಿರೀಕ್ಷೆ ಮಾಡಿದ್ದೇನೊ ಅದು ಹುಸಿಯಾಯಿತು.

ಯೋಜನೆ ಚಟುವಟಿಕೆಯು ಮಕ್ಕಳಲ್ಲಿ ಸೃಜನಶೀಲತೆ ರೂಪುಗೊಳ್ಳಲು ಒಂದು ಉತ್ತಮ ಮಾರ್ಗ. ಒಂದು ನಿರ್ದಿಷ್ಟ ವಿಷಯದ ಬಗೆಗಿನ ಪ್ರಾಜೆಕ್ಟ್ ವರ್ಕ್ ಮಗುವಿನಲ್ಲಿರುವ ವಿವಿಧ ಕೌಶಲ, ಜ್ಞಾನ, ತಿಳಿವಳಿಕೆಯನ್ನು ಹೊರಗೆಳೆಯುತ್ತದೆ. ಇತ್ತೀಚಿಗಂತೂ ಎಲ್ಲಾ ಶಾಲೆಗಳಲ್ಲಿ, ಎಲ್ಲಾ ತರಗತಿಗಳಲ್ಲಿ ಇದನ್ನು ನಿರ್ವಹಿಸಲಾಗುತ್ತದೆ. ಇದನ್ನು ಆಧರಿಸಿಯೇ ಆಂತರಿಕ ಅಂಕ ನೀಡುವ ಪರಿಪಾಠವಿದೆ. ಈ ವರ್ಷ ಜಾರಿಯಾಗಿರುವ ಕಲಿಕಾ ಚೇತರಿಕೆ ಉಪಕ್ರಮದಲ್ಲಿ ಯೋಜನಾ ಕಾರ್ಯವು ಕಡ್ಡಾಯವಾದ ಒಂದು ಕಲಿಕಾ ಮಾರ್ಗವಾಗಿ ಜಾರಿಯಲ್ಲಿದೆ.

ಆದರೆ ಈಗ ನೀಡಲಾಗುತ್ತಿರುವ ಯೋಜನೆಗಳು ತಮ್ಮ ಉದ್ದೇಶವನ್ನು ಸಾಧಿಸುತ್ತಿದ್ದಾವೆಯೇ ಎಂಬ ಪ್ರಶ್ನೆಯನ್ನು ಎಲ್ಲರೂ ಕೇಳಿಕೊಳ್ಳಬೇಕಾದ ಅನಿವಾರ್ಯತೆಯೊಂದಿದೆ. ಯಾವುದೇ ವಿಷಯ ಕೊಡಲಿ ಮಕ್ಕಳು ಹತ್ತು ನಿಮಿಷಕ್ಕೆ ಯೋಜನೆ ಸಿದ್ಧಗೊಳಿಸುತ್ತಾರೆ. ಗೂಗಲ್‌ನಲ್ಲಿ ಹೋಗಿ ಚಿತ್ರ ಮುದ್ರಿಸಿಕೊಂಡು, ಅಲ್ಲಿರುವ ಮಾಹಿತಿಯನ್ನೆ ನಕಲಿಸಿ ಬರೆದು, ಬರೆದ ಪುಟಕ್ಕೆ ರಂಗಿನ ಅಂಚು ಎಳೆದರೆ ಮುಗಿದು ಹೋಯಿತು. ಅಲ್ಲಿ ಮಗು ಕಲಿಯಲಿಲ್ಲ. ಕಂಪ್ಯೂಟರ್‌ನೊಳಗಿನ ಇಂಟರ್‌ನೆಟ್ ಮಾಹಿತಿ ಮತ್ತೊಮ್ಮೆ ಅಚ್ಚಾಯಿತು ಅಷ್ಟೆ. ಇವು ಬರೀ ದಾಖಲೆಗಳಾಗಿ ಶಾಲೆಯ ಅಲಮಾರುಗಳಲ್ಲಿ ಉಳಿಯುತ್ತವೆ. ಕಲಿಕೆ ಮಾತ್ರ ಸೊನ್ನೆ.

ನನಗಿನ್ನೂ ಚೆನ್ನಾಗಿ ನೆನಪಿದೆ. ನಾವು ಹತ್ತನೇ ತರಗತಿಯಲ್ಲಿ ಇರುವಾಗ ರಾಧಾಕೃಷ್ಣನ್ ಅವರ ಜನ್ಮದಿನ ಇಸವಿಗಾಗಿ ಇಡೀ ಗ್ರಂಥಾಲಯದ ಪುಸ್ತಕ ತಡಕಾಡಿದ್ದೆವು. ಆಗ ನಮಗೆ ಇಸವಿ ಅಷ್ಟೆ ಸಿಗಲಿಲ್ಲ, ಹುಡುಕುತ್ತಾ ಹೋದಂತೆ ಬೇರೆ ಬೇರೆ ವಿಚಾರಗಳ ದೊಡ್ಡ ರಾಶಿಯೇ ಸಿಕ್ಕಿತ್ತು. ಈಗಿನ ತಂತ್ರಜ್ಞಾನ ಅದನ್ನು ಕೊಂದು ಹಾಕಿದೆ. ಮಕ್ಕಳು ಗೂಗಲ್‌ನಲ್ಲಿ ಹುಡುಕುವುದನ್ನು ಕರಗತಮಾಡಿಕೊಂಡಿದ್ದಾರೆ. ಮೊಬೈಲ್ ತುಂಬಿದೆ. ತಲೆ ಖಾಲಿ ಇದೆ. ಮಗುಗೆ ಒಂದು ಯೋಜನೆ ನೀಡುವುದರ ಹಿಂದೆ ಹತ್ತೆಂಟು ಉದ್ದೇಶಗಳಿರುತ್ತವೆ. ಸೃಜನಾತ್ಮಕತೆ, ಅಭಿವ್ಯಕ್ತಿ, ವಿಷಯ ಜ್ಞಾನ, ತಿಳಿವಳಿಕೆ, ಭಿನ್ನತೆ, ಕಲಿಕಾಮಟ್ಟ ಇಂತಹ ಅನೇಕ ವಿಚಾರಗಳನ್ನು ಅಳೆಯಬೇಕಾಗಿರುತ್ತದೆ. ಎಲ್ಲವೂ ಸಿದ್ಧ ಮಾದರಿಯಲ್ಲಿ ಸಿಕ್ಕುವುದರಿಂದ ಮಗು ತನ್ನ ತಲೆಗೆ ಕೆಲಸ ಕೊಡುವುದಿಲ್ಲ. ಇದಂತೂ ಶಿಕ್ಷಕರಿಗೆ ಸವಾಲಾಗಿದೆ. ಈಗಿನ ‘ಕಲಿಕಾ ಚೇತರಿಕೆ’ ಎಂಬ ಉಪಕ್ರಮದಲ್ಲಿ ಮಗುವಿಗೆ ಏನೇ ಕೆಲಸ ನೀಡಿದರೂ ಮಗು ಯೂಟ್ಯೂಬ್ ನೋಡಿ ಬರೆದುಕೊಂಡು ಬರುತ್ತಿದೆ. ಯೋಜನೆಯನ್ನು ಕೊಡುವ ಮತ್ತು ಅವುಗಳನ್ನು ಮಕ್ಕಳಿಂದ ಮಾಡಿಸುವ ವಿಚಾರದಲ್ಲಿ ಒಂದಷ್ಟು ಬದಲಾವಣೆ ಮಾಡಿಕೊಳ್ಳುವ ಅವಶ್ಯಕತೆ ತುಂಬಾ ಇದೆ. ಇಲ್ಲದಿದ್ದರೆ ಸಮಯ, ಶ್ರಮ, ಹಣ ಎಲ್ಲವೂ ವ್ಯರ್ಥ ಮತ್ತು ಕಲಿಕೆ ಕೂಡ ಸಾಧ್ಯವಾಗುವುದಿಲ್ಲ. ಕೆಳಗಿನ ವಿಚಾರಗಳನ್ನು ಗಮನದಲ್ಲಿ ಇಟ್ಟುಕೊಂಡು ಯೋಜನೆಗಳನ್ನು ರೂಪಿಸಬಹುದು.

1. ಮಾದರಿ ಕೊಡುವುದನ್ನು ನಿಲ್ಲಿಸಿ

ಇದು ನಾವು ಪ್ರತಿ ಬಾರಿ ಮಾಡುವ ತಪ್ಪು. ಮಕ್ಕಳಿಗೆ ಒಂದು ಯೋಜನೆ ಮಾದರಿಯನ್ನು ನೀಡಿ ಇದರಂತೆ ಮಾಡಿ ಎನ್ನುತ್ತೇವೆ. ಅಲ್ಲಿಗೆ ನಾವು ಅವರ ಸೃಜನಶೀಲತೆಯನ್ನು ಕೊಂದಂತೆ. ಅವರಿಗೆ ಕೇವಲ ವಿಚಾರ ನೀಡಿ. ಮಗು ತನ್ನದೇ ಮಾದರಿ ರೂಪಿಸಿಕೊಳ್ಳಲು ಅವಕಾಶ ನೀಡಿ. ಎಲ್ಲರನ್ನೂ ಒಂದೇ ಮಾದರಿಯಲ್ಲಿ ಬಂಧಿಸುವ ಪ್ರಯತ್ನ ಬೇಡ..

2.ಸೃಜನಶೀಲತೆಗೆ ಇರಲಿ ಅವಕಾಶ

ನಾವು ಯೋಜನೆ ತಯಾರಿಸಲು ಮಕ್ಕಳಿಗೆ ಕೊಡುವ ವಿಷಯಗಳು ಮಕ್ಕಳ ಸೃಜನಶೀಲತೆಗೆ ಅನುವು ಮಾಡಿಕೊಡುವಂತಿರಬೇಕು. ಸೃಜನಶೀಲತೆ ಎಂದರೆ ಹೊಸದನ್ನು ಸೃಷ್ಟಿಸುವುದು. ಸಂಬಂಧಗಳ ಬಗ್ಗೆ ಒಂದು ಪಾಠವಿದೆಯೆಂದರೆ ಅಲ್ಲಿ ನೀವು ‘ನಮ್ಮಮ್ಮ ಯಾಕೆ ನನಗಿಷ್ಟ..’ ಅನ್ನುವ ವಿಷಯ ನೀಡಬಹುದು. ಆಗ ಮಗು ತನ್ನ ಸ್ವಂತ ವಿಚಾರವನ್ನು ಬರೆಯುವ ಪ್ರಯತ್ನ ಮಾಡುತ್ತದೆ.

3. ಮಾರ್ಗದರ್ಶನವಿರಲಿ, ಸಹಾಯಬೇಡ

ಪೋಷಕರು ಮತ್ತು ಶಿಕ್ಷಕರು ಮಕ್ಕಳಿಗೆ ಕೊಡಲಾದ ಯೋಜನೆಗಳಿಗೆ ಸಂಬಂಧಿಸಿದಂತೆ ಸಿದ್ಧ ಮಾಹಿತಿ ಕೊಟ್ಟು ಬಿಡುತ್ತಾರೆ. ಮಗು ನೋಡಿ ಬರೆದರೆ ಮುಗಿಯಿತು ಅನ್ನುವಂತಿರುತ್ತದೆ. ಪೋಷಕರೇ ಮಕ್ಕಳಿಗೆ ಗೂಗಲ್‌ನಲ್ಲಿ ಮಾಹಿತಿ ಹುಡುಕಿಕೊಡುತ್ತಾರೆ. ಶಿಕ್ಷಕರು ಈ ವಿಚಾರ ಎಲ್ಲಿ ಸಿಗುತ್ತದೆ ಎಂದು ಮೊದಲೇ ತಿಳಿಸಿ ಬಿಡುತ್ತಾರೆ. ಇದು ಆಗಬಾರದು. ಮಾರ್ಗದರ್ಶನ ಮಾಡಿ. ಆದರೆ, ನೀವೇ ಪೂರ್ತಿ ಸಹಾಯಕ್ಕೆ ನಿಂತು ಬಿಡಬೇಡಿ.

4. ಪಠ್ಯದಿಂದ ಆಚೆ ಬನ್ನಿ

ನೀಡಲಾಗುವ ಎಷ್ಟೊ ಯೋಜನಾ ಕಾರ್ಯಗಳು ಮಗು ಓದುವ ಪಾಠದ್ದೆ ಆಗಿರುತ್ತವೆ. ಅದು ಸರಿಯಲ್ಲ. ಬೇಕಾದರೆ ಅದಕ್ಕೆ ಪೂರಕವಾಗಿರಲಿ. ಮಗುವಿನಲ್ಲಿ ಅಡಗಿರುವ ಪ್ರತಿಭೆ ಹೊರತೆಗೆಯುವ ವಿಚಾರ ಇರಲಿ. ಮಗು ಹೆಚ್ಚು ಖುಷಿಯಿಂದ ಅದರಲ್ಲಿ ತೊಡಗುತ್ತದೆ. ಬರೀ ಅದೇ ಅದೇ ವಿಚಾರಗಳು ಮಗುವಿನ ಕಲಿಕಾ ಆಸಕ್ತಿಯನ್ನು ಕುಂದಿಸಬಹುದು.

5. ಓದುವ ಅಭ್ಯಾಸ ಬೆಳೆಸಿ

ಮಗು ನಿತ್ಯ ಪತ್ರಿಕೆ ಓದಲಿ. ಪತ್ರಿಕೆಗಳು ಅದ್ಭುತ ಮಾಹಿತಿ ಭಂಡಾರಗಳಾಗಿವೆ. ಮಗು ತಾನು ಮಾಡಬೇಕಾದ ಯೋಜನೆಗಳಿಗೆ ಅಲ್ಲಿ ಭರಪೂರ ವಿಚಾರಗಳು ಸಿಗುತ್ತವೆ. ಮಗು ಅದನ್ನು ಸಂಗ್ರಹಿಸಲಿ. ಪುಸ್ತಕ ಓದುವ ಅಭ್ಯಾಸ ಬೆಳೆಸಿ. ಹೆಚ್ಚು ಓದಿದಷ್ಟು ಮಗು ಸತ್ವಯುತವಾಗಿ ಬರೆಯಬಲ್ಲದು. ಮಕ್ಕಳಿಗೆ ಮೊಬೈಲ್ ನೀಡಬೇಡಿ. ಅದನ್ನು ಅನಿವಾರ್ಯತೆಗೆ ಮಾತ್ರ ಬಳಸಿ. ಅಲ್ಲಿನ ವಿಚಾರಗಳನ್ನು ಮಗು ಬೇಕಾದರೆ ಮನನ ಮಾಡಿಕೊಂಡು ಸ್ವಂತವಾಗಿ ಬರೆಯುವುದನ್ನು ರೂಢಿಸಿಕೊಳ್ಳಲಿ.


ಒರೆಗೆ ಹಚ್ಚಿ ನೋಡುವ ಪ್ರವೃತ್ತಿ ಹೆಚ್ಚಲಿ

ಅಂತರ್ಜಾಲದಲ್ಲಿ ಮಾಹಿತಿ ಸಂಗ್ರಹಿಸುವುದು ತಪ್ಪಲ್ಲ. ಅದು ಬೃಹತ್ ಗ್ರಂಥಾಲಯ ಇದ್ದಂತೆ. ಆದರೆ, ವಿದ್ಯಾರ್ಥಿಗಳು ಈ ಮಾಹಿತಿಯನ್ನು ಒರೆಗೆ ಹಚ್ಚಿ ನೋಡುವ ಪ್ರವೃತ್ತಿ ಬೆಳೆಸಿಕೊಳ್ಳಬೇಕು. ಆಗಷ್ಟೆ ವಿದ್ಯಾರ್ಥಿಗಳು ಸೃಜನಶೀಲರಾಗಲು ಸಾಧ್ಯ. ಅಂತರ್ಜಾಲದ ಮಾಹಿತಿಯನ್ನು ನಕಲು ಮಾಡಿದರೆ ಕಲಿಕೆಯಾಗದು. ಈ ನಿಟ್ಟಿನಲ್ಲಿ ಶಿಕ್ಷಕರು ಹಾಗೂ ಪೋಷಕರು ಮಾರ್ಗದರ್ಶನ ಮಾಡಬೇಕು.

ಡಾ. ಎಚ್.ಬಿ.ಚಂದ್ರ ಶೇಖರ್, ಹಿರಿಯ ಉಪನ್ಯಾಸಕ, ಬೆಂಗಳೂರು ನಗರ ಡಯಟ್

ಸ್ಕಾಲರ್‌ಷಿಪ್ ಎಲ್ಲೆಲ್ಲಿ ಲಭ್ಯ ?

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ



ಪ್ರದೀಪ್ ಕುಮಾರ್ ವಿ.

1.ನಾನು ಪಿ.ಎಚ್‌ಡಿ ಸಂಶೋಧನೆ ಮಾಡುತ್ತಿರುವ ಒಬಿಸಿ ವರ್ಗದ ವಿದ್ಯಾರ್ಥಿನಿ. ಆದರೆ, 35 ವರ್ಷದ ನಂತರದವರಿಗೆ ಯಾವುದೇ ಸ್ಕಾಲರ್‌ಷಿಪ್ ಇಲ್ಲದೇ ಇರುವುದರಿಂದ, ಸಂಶೋಧನೆ ಕಷ್ಟವೆನಿಸುತ್ತಿದೆ. ಏನು ಮಾಡಬಹುದು ?

ಹೆಸರು, ಊರು ತಿಳಿಸಿಲ್ಲ.

ಕೇಂದ್ರ ಸರ್ಕಾರ ಮತ್ತು ಕರ್ನಾಟಕ ಸರ್ಕಾರದ ವಿವಿಧ ಕಾರ್ಯಕ್ರಮಗಳ ಅಡಿಯಲ್ಲಿ ವಿದ್ಯಾರ್ಥಿ ವೇತನಗಳು ಮತ್ತು ಸ್ಕಾಲರ್‌ಷಿಪ್ ಸೌಲಭ್ಯಗಳಿವೆ. ನಮಗಿರುವ ಮಾಹಿತಿಯಂತೆ, ಕೆಲವು ಸೌಲಭ್ಯಗಳು 35 ವರ್ಷದ ನಂತರವೂ ಲಭ್ಯ. ಇದರ ಜೊತೆಗೆ ಕೆಲವು ವಿದ್ಯಾಸಂಸ್ಥೆಗಳು, ಖಾಸಗಿ ಕಂಪನಿಗಳು, ಟ್ರಸ್ಟ್‌ಗಳು ಈ ನಿಟ್ಟಿನಲ್ಲಿ ಶಿಷ್ಯವೇತನ, ಅನುದಾನ, ಸ್ಕಾಲರ್‌ಷಿಪ್ ಸೌಲಭ್ಯಗಳನ್ನು ನೀಡುತ್ತಿವೆ. ಅಗತ್ಯವಿದ್ದಲ್ಲಿ, ಬ್ಯಾಂಕ್‌ನಲ್ಲಿ ಶೈಕ್ಷಣಿಕ ಸಾಲವನ್ನು ಕೂಡ ಪಡೆದುಕೊಳ್ಳಬಹುದು.

ಹೆಚ್ಚಿನ ವಿವರಗಳಿಗಾಗಿ ಈ ಎರಡು ಜಾಲತಾಣಗಳನ್ನು ಪರಾಮರ್ಶಿಸಿ:

https://scholarships.gov.in/

https://www.buddy4study.com/article/ugc-scholarship

2. ನಾನು ಒಂದೂವರೆ ವರ್ಷಗಳಿಂದ ಪೊಲೀಸ್ ಕಾನ್‌ಸ್ಟೆಬಲ್ ಅಗಿ ಕರ್ತವ್ಯ ನಿರ್ವಹಿಸುತ್ತಿದ್ದೇನೆ. ಎಂ.ಎಸ್ಸಿ ಪದವಿ ಮುಗಿಸಿ, ಕೆಸೆಟ್ (KSET) ಅರ್ಹತೆ ಕೂಡ ಹೊಂದಿರುತ್ತೇನೆ. ಇದೀಗ ಬಿ.ಇಡಿ ಮಾಡುವ ಮನಸ್ಸಾಗಿದ್ದು, ಸರ್ಕಾರಿ ನೌಕರನಾಗಿರುವುದರಿಂದ ಇಂದಿರಾ ಗಾಂಧಿ ಮುಕ್ತ ವಿಶ್ವವಿದ್ಯಾಲಯದಲ್ಲಿ ಓದಲು ಅವಕಾಶವಿದೆಯೇ? ಪಿ.ಎಚ್‌ಡಿಗೆ ಸೇರುವ ಮುಂಚೆಯೇ ಮೇಲಧಿಕಾರಿಗಳ ಪೂರ್ವಾನುಮತಿ ಇರಬೇಕೆ?

ಪ್ರಕಾಶ್ ಕರುನಾಡು, ಕುಣಿಗಲ್.

ಪೊಲೀಸ್ ನೌಕರಿಯಲ್ಲಿದ್ದು ಉನ್ನತ ಶಿಕ್ಷಣದ ಬಗ್ಗೆ ನಿಮಗಿರುವ ಆಸಕ್ತಿ ಶ್ಲಾಘನೀಯ. ನಿಮ್ಮ ಆಸಕ್ತಿಯ ಅನುಸಾರ ಇಂದಿರಾ ಗಾಂಧಿ ಮುಕ್ತ ವಿಶ್ವವಿದ್ಯಾಲಯದಲ್ಲಿ ಬಿ.ಇಡಿ ಅಥವಾ ಸೂಕ್ತ ವಿಶ್ವವಿದ್ಯಾಲಯದಲ್ಲಿ ಪಿ.ಎಚ್‌ಡಿ ಮಾಡಬಹುದು. ನಮಗಿರುವ ಮಾಹಿತಿಯಂತೆ, ಇಲಾಖೆಯ ಸೇವಾ ನಿಯಮಾವಳಿಗಳ ಪ್ರಕಾರ ಮೇಲಧಿಕಾರಿಗಳ ಪೂರ್ವಾನುಮತಿಯನ್ನು ಪಡೆಯಬೇಕು. ಖಚಿತವಾದ ಮಾಹಿತಿಗಾಗಿ ನಿಮ್ಮ ಇಲಾಖೆಯಲ್ಲಿ ವಿಚಾರಿಸಿ.

3. ಎಂ.ಎ ಮಾಡುವುದು ಹೇಗೆ ಮತ್ತು ಅರ್ಹತೆಗಳೇನು? ಯಾವ ವಿಶ್ವವಿದ್ಯಾಲಯ ಸೂಕ್ತ ಎಂದು ತಿಳಿಸಿ.

ಹೆಸರು, ಊರು ತಿಳಿಸಿಲ್ಲ.

ಸಾಮಾನ್ಯವಾಗಿ ಬಿಎ ಪದವಿಯ ನಂತರ ಪದವಿಯಲ್ಲಿ ಓದಿರುವ ವಿಷಯದಲ್ಲಿ ಎಂಎ ಮಾಡಬಹುದು. ಆದರೆ, ಕೆಲವು ವಿಶ್ವವಿದ್ಯಾಲಯಗಳಲ್ಲಿ, ನಿರ್ದಿಷ್ಟ ವಿಷಯಗಳಿಗೆ ಸಂಬಂಧಿಸಿದಂತೆ, ಇಂತಹ ನಿಬಂಧನೆಗಳಿಲ್ಲ. ಹಾಗಾಗಿ, ಎಂಎ ಮಾಡುವ ಉದ್ದೇಶ ಮತ್ತು ಯಾವ ವಿಷಯದಲ್ಲಿ ಮಾಡಬೇಕು ಎನ್ನುವುದರ ಬಗ್ಗೆ ಸ್ಪಷ್ಟತೆಯಿದ್ದಲ್ಲಿ, ಯಾವ ವಿಶ್ವವಿದ್ಯಾಲಯ ಸೂಕ್ತವೆಂದು ನಿರ್ಧರಿಸಬಹುದು. ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ: https://www.youtube.com/watch?v=DmaXk-MuoOI

4. ನಾನು ಪಿಯುಸಿ (ಕಲಾ ವಿಭಾಗ) ನಂತರ ಬಿಕಾಂ ಪದವಿ ಮಾಡಿದ್ದೇನೆ. ಮುಂದೆ ಬಿ.ಇಡಿ ಮಾಡಬೇಕು ಅಂದುಕೊಂಡಿದ್ದೇನೆ. ಬಿ.ಇಡಿ ಕೋರ್ಸ್‌ನಲ್ಲಿ ಭೂಗೋಳಶಾಸ್ತ್ರ ಮತ್ತು ಇತಿಹಾಸ ವಿಷಯವನ್ನು ತೆಗೆದುಕೊಳ್ಳಲು ಆಗುವುದೇ?

ಹೆಸರು, ಊರು ತಿಳಿಸಿಲ್ಲ.

ನಮಗಿರುವ ಮಾಹಿತಿಯಂತೆ ಬಿ.ಇಡಿ ಕೋರ್ಸ್‌ನಲ್ಲಿ ಆಯ್ಕೆ ಮಾಡಿಕೊಳ್ಳುವ ವಿಷಯಗಳನ್ನು ಪದವಿಯಲ್ಲಿ ಓದಿರಬೇಕು.

5. ಜೀವಶಾಸ್ತ್ರದಲ್ಲಿ ಎಂ.ಎಸ್ಸಿ ಮಾಡುತ್ತಿದ್ದೇನೆ. ಮುಂದಿನ ಭವಿಷ್ಯದ ಬಗ್ಗೆ ಏನು ಮಾಡಬೇಕು ತಿಳಿಸಿ.

ಹೆಸರು, ಊರು ತಿಳಿಸಿಲ್ಲ.

ಎಂ.ಎಸ್ಸಿ ನಂತರ ಸರ್ಕಾರಿ ಮತ್ತು ಖಾಸಗಿ ವಲಯದಲ್ಲಿ ವೈವಿಧ್ಯಮಯ ಉದ್ಯೋಗಾವಕಾಶಗಳಿವೆ. ಉದಾಹರಣೆಗೆ, ಕೃಷಿ ಸಂಶೋಧನಾ ಸಂಸ್ಥೆಗಳು, ಸಮೀಕ್ಷಾ ಸಂಸ್ಥೆಗಳು, ಆಸ್ಪತ್ರೆಗಳು, ವೈದ್ಯಕೀಯ ಸಂಶೋಧನೆ ಮತ್ತು ಪ್ರಯೋಗಾಲಯಗಳು, ಬೀಜ ಮತ್ತು ನರ್ಸರಿ ಸಂಸ್ಥೆಗಳು, ಆಹಾರ ಸಂಸ್ಥೆಗಳು, ವನ್ಯಜೀವಿ ಮತ್ತು ಮೀನುಗಾರಿಕೆ ಇತ್ಯಾದಿ ಸಂಸ್ಥೆಗಳಲ್ಲಿ ಉದ್ಯೋಗವನ್ನು ಅರಸಬಹುದು. ಪ್ರಮುಖವಾಗಿ, ಎಂ.ಎಸ್ಸಿ ಕೋರ್ಸ್‌ನಲ್ಲಿ ಯಾವ ವಿಷಯದಲ್ಲಿ ನಿಮಗೆ ಪರಿಣತಿಯಿದೆ ಎನ್ನುವುದರ ಜೊತೆಗೆ ನಿಮ್ಮ ಸ್ವಾಭಾವಿಕ ಪ್ರತಿಭೆ ಮತ್ತು ಅಭಿರುಚಿ, ವೃತ್ತಿಯ ಆಯ್ಕೆ ಮತ್ತು ಯಶಸ್ಸಿಗೆ ಕಾರಣವಾಗುತ್ತದೆ. ಹಾಗೂ, ಸರ್ಕಾರಿ ಇಲಾಖೆಗಳನ್ನು ಸೇರುವ ಆಸಕ್ತಿಯಿದ್ದಲ್ಲಿ ಸ್ಪರ್ಧಾತ್ಮಕ ಪರೀಕ್ಷೆಗಳಿಗೆ ಈಗಲೇ ತಯಾರಿಯನ್ನು ಶುರು ಮಾಡಿಕೊಳ್ಳಬಹುದು. ಇದಲ್ಲದೆ, ನೂತನ ರಾಷ್ಟ್ರೀಯ ಶಿಕ್ಷಣ ನೀತಿಯನ್ನು (ಎನ್‌ಇಪಿ) ಅನುಷ್ಠಾನಗೊಳಿಸುತ್ತಿರುವ ಈ ಕಾಲಘಟ್ಟದಲ್ಲಿ ಶಿಕ್ಷಕರ ಕೊರತೆಯೇ ಒಂದು ಸವಾಲಾಗಿದೆ. ಹಾಗಾಗಿ, ಈ ವೃತ್ತಿಯಲ್ಲಿ ಆಸಕ್ತಿಯಿದ್ದರೆ ಬಿ.ಇಡಿ ಮಾಡಿ ಈ ಕ್ಷೇತ್ರದಲ್ಲಿ ವೃತ್ತಿಜೀವನವನ್ನು ರೂಪಿಸಿಕೊಳ್ಳಬಹುದು. ಹೆಚ್ಚಿನ ಮಾರ್ಗದರ್ಶನಕ್ಕಾಗಿ ಈ ವಿಡಿಯೊ ವೀಕ್ಷಿಸಿ:https://www.youtube.com/c/EducationalExpertManagementCareerConsultan

ಹೆಚ್ಚಿನ ಪ್ರಶ್ನೆಗಳಿಗೆ prajavani.net ಓದಿ

ನಿಮ್ಮ ಪ್ರಶ್ನೆಗೆ ತಜ್ಞರ ಉತ್ತರ

ವಿದ್ಯಾರ್ಥಿಗಳೇ, ನಿಮ್ಮ ಮುಂದಿನ ಕೋರ್ಸ್ ಮತ್ತು ಸೂಕ್ತವಾದ ವೃತ್ತಿಯ ಆಯ್ಕೆ ಹಾಗೂ ಭವಿಷ್ಯವನ್ನು ರೂಪಿಸಿಕೊಳ್ಳುವ ಬಗ್ಗೆ ಗೊಂದಲಗಳಿವೆಯೇ? ಹಾಗಿದ್ದರೆ ನಮಗೆ ಬರೆಯಿರಿ. ನಿಮ್ಮ ಪ್ರಶ್ನೆಗಳಿಗೆ ಶಿಕ್ಷಣತಜ್ಞ ಮತ್ತು ವೃತ್ತಿ ಸಲಹೆಗಾರ ವಿ. ಪ್ರದೀಪ್ ಕುಮಾರ್ ಉತ್ತರಿಸಲಿದ್ದಾರೆ. ಪ್ರಶ್ನೆಗಳನ್ನು **shikshana@prajavani.co.in** ಗೆ ಕಳಿಸಬಹುದು.

ಲಿಂಗ ತಾರತಮ್ಯ ವಿರುದ್ಧ ದನಿಯಾಗುವ ಒಲವು

> ವಿಶ್ವಸಂಸ್ಥೆಯ ಮಾನವ ಹಕ್ಕು ಮಂಡಳಿಗೆ ಸ್ವತಂತ್ರ ತಜ್ಞೆಯಾಗಿ (Special rapporteur) ಕೋಲಾರ ಜಿಲ್ಲೆಯ ಕಸಬಾ ಕುರುಬರಹಳ್ಳಿ ಗ್ರಾಮದ ಕೆ.ಪಿ.ಅಶ್ವಿನಿ ನೇಮಕವಾಗಿದ್ದು, ಈ ಹುದ್ದೆಗೆ ನೇಮಕವಾದ ಭಾರತ ಮತ್ತು ಏಷ್ಯಾದ ಮೊದಲ ವ್ಯಕ್ತಿ ಅವರು. ಅವರೊಂದಿಗೆ ನಡೆಸಿದ ಮಾತುಕತೆ ಇಲ್ಲಿದೆ...

ಅಭಿಲಾಷ ಬಿ.ಸಿ.

ವಿಶ್ವಸಂಸ್ಥೆಯ ಮಾನವ ಹಕ್ಕು ಮಂಡಳಿಗೆ ಸ್ವತಂತ್ರ ತಜ್ಞೆಯಾಗಿ (Special rapporteur) ಕೋಲಾರ ಜಿಲ್ಲೆಯ ಕಸಬಾ ಕುರುಬರಹಳ್ಳಿ ಗ್ರಾಮದ ಡಾ.ಕೆ.ಪಿ.ಅಶ್ವಿನಿ ನೇಮಕವಾಗಿದ್ದಾರೆ.

ಜಿನೆವಾದಲ್ಲಿ ನವೆಂಬರ್ 1ರಂದು ಅವರು ಅಧಿಕಾರ ಸ್ವೀಕರಿಸಲಿದ್ದಾರೆ. ಈ ಹುದ್ದೆಗೆ ನೇಮಕವಾದ ಭಾರತ ಮತ್ತು ಏಷ್ಯಾದ ಮೊದಲ ವ್ಯಕ್ತಿಯಾಗಿದ್ದಾರೆ.

ಜಾಗತಿಕ ಮಟ್ಟದಲ್ಲಿ ವರ್ಣಭೇದ ನೀತಿ, ಜನಾಂಗೀಯ ತಾರತಮ್ಯ, ಅಸಹಿಷ್ಣುತೆಗೆ ಸಂಬಂಧಿಸಿದ ವಿಷಯಗಳನ್ನು ಇವರು ಸ್ವತಂತ್ರವಾಗಿ ನಿರ್ವಹಿಸಲಿದ್ದಾರೆ. ಮಂಡಳಿಗೆ ಕಾಲಕಾಲಕ್ಕೆ ವರದಿ, ಸಲಹೆ ನೀಡಲಿದ್ದಾರೆ.

● ನೇಮಕ ಸಾಧ್ಯವಾಗಿದ್ದು ಹೇಗೆ? ಕಾರ್ಯ ವ್ಯಾಪ್ತಿ, ಕೆಲಸದ ವಿಧಾನಗಳೇನು?

ನನ್ನ ಸಂಶೋಧನೆ, ಅಧ್ಯಯನ ಕೂಡ ಜಾತಿ, ವರ್ಣ, ಜನಾಂಗೀಯ ತಾರತಮ್ಯಗಳ ಕುರಿತೇ ಇತ್ತು. ಈ ಹುದ್ದೆಗಾಗಿ ಅರ್ಜಿ ಸಲ್ಲಿಸಿದ್ದೆ. ಅದರಲ್ಲಿ 12 ಜನರಿಗೆ ಸಂದರ್ಶನ ನಡೆಯಿತು. ಅನುಭವ, ಅಧ್ಯಯನ, ಲಿಂಗ, ಪ್ರಾತಿನಿಧ್ಯವನ್ನು ಗಮನದಲ್ಲಿಟ್ಟುಕೊಂಡು ಮೂವರನ್ನು ಆಯ್ಕೆ ಮಾಡಿದ್ದರು. ನಂತರ ಮಾನವ ಹಕ್ಕುಗಳ ಆಯೋಗದ ಅಧ್ಯಕ್ಷರು ನನ್ನ ಆಯ್ಕೆಯನ್ನು ಘೋಷಿಸಿದರು.



ಡಾ.ಕೆ.ಪಿ.ಅಶ್ವಿನಿ

ವರ್ಣಭೇದ, ಜನಾಂಗೀಯ ಭೇದಕ್ಕೆ ಸಂಬಂಧಿತ ವಿಷಯಗಳಿಗೆ ಆದ್ಯತೆ ನೀಡಬೇಕಾಗುತ್ತದೆ. ಈ ಬಗ್ಗೆ ವಿಶ್ವದಲ್ಲಿ ಯಾವುದೇ ರೀತಿಯ ಘಟನೆ ನಡೆದರೆ ವರದಿ ನೀಡಬಹುದು. ಅಂಥ ರಾಷ್ಟ್ರಗಳಿಗೆ ಭೇಟಿ ನೀಡಿ ಅಲ್ಲಿನ ಪರಿಸ್ಥಿತಿಯನ್ನು ವಿಶ್ಲೇಷಿಸುವ ಅವಕಾಶಗಳಿವೆ.

● ಇದಕ್ಕೆ ಸ್ಫೂರ್ತಿ ಏನು?

ನಾನು ದಲಿತ ಸಮುದಾಯದಿಂದ ಬಂದಿದ್ದರಿಂದ ಮನೆಯಲ್ಲಿ ಈ ಬಗ್ಗೆ ಶೈಕ್ಷಣಿಕ ಚರ್ಚೆ ನಡೆಯುತಿತ್ತು. ಚಿಕ್ಕಂದಿನಿಂದಲೇ ಜಾತಿ ವಿರೋಧಿ ಹಾಗೂ ಮಹಿಳಾಪರ ಚಳವಳಿಗಳಲ್ಲಿ ಹೆಚ್ಚು ತೊಡಗಿಸಿಕೊಂಡಿದ್ದರಿಂದ ಈ ಬಗ್ಗೆ ಆಸಕ್ತಿ ಮೂಡಲು ಕಾರಣವಾಯಿತು. ಎಸ್ಸೆಸ್ಸೆಲ್ಸಿ ನಂತರ ಕಲಾ ವಿಭಾಗ ಆಯ್ಕೆ ಮಾಡಿಕೊಂಡೆ. ಸಾಮಾಜಿಕ ಹಾಗೂ ರಾಜಕೀಯ ವಿಷಯಗಳಲ್ಲಿ ಹೆಚ್ಚು ಒಲವಿತ್ತು. ಪಿಎಚ್.ಡಿಯಲ್ಲಿಯೂ ಭಾರತ ಹಾಗೂ ನೇಪಾಳದ ಜಾತಿ ವ್ಯವಸ್ಥೆ ಕುರಿತೇ ಅಧ್ಯಯನ ಮಾಡಿದ್ದೆ. ಆಗಲೇ ವಿಶ್ವಸಂಸ್ಥೆ ಜಾತಿ ಮತ್ತು ವರ್ಣವನ್ನು ಹೇಗೆ ಗುರುತಿಸಿದೆ ಎಂಬುದನ್ನು ಅಭ್ಯಸಿಸಿದ್ದೆ. ಇದು ಈ ಬಗೆಯ ಆಸಕ್ತಿಗೆ ಹಾಗೂ ಈ ಹುದ್ದೆಗೇರಲು ನೆರವಾಯಿತು.

● ಬಾಲ್ಯ, ಓದು ಹೇಗಿತ್ತು...

ನನ್ನ ತಂದೆ ಸರ್ಕಾರಿ ಉದ್ಯೋಗಿಯಾಗಿದ್ದರಿಂದ ಶಾಲಾ ಶಿಕ್ಷಣ ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಆಗಿದೆ. ಹಾಸನ, ಮೈಸೂರು, ಮಂಗಳೂರು, ಕಲಬುರಗಿ ಹೀಗೆ ಹಲವೆಡೆ ಅಧ್ಯಯನ ಮಾಡಿದ್ದೇನೆ. ಪದವಿಯನ್ನು ಬೆಂಗಳೂರಿನ ಮೌಂಟ್ ಕಾರ್ಮೆಲ್ ಕಾಲೇಜಿನಲ್ಲಿ, ಸ್ನಾತಕೋತ್ತರ ಪದವಿಯನ್ನು ರಾಜ್ಯಶಾಸ್ತ್ರ ವಿಷಯದಲ್ಲಿ ಸೇಂಟ್ ಜೋಸೆಫ್ಸ್ ಕಾಲೇಜಿನಲ್ಲಿ ಮಾಡಿದ್ದೇನೆ. ನವದೆಹಲಿಯ ಜವಾಹರಲಾಲ್ ನೆಹರೂ ವಿಶ್ವವಿದ್ಯಾಲಯದಿಂದ ಎಂ.ಫಿಲ್., ಪಿಎಚ್.ಡಿ ಪದವಿ ಪಡೆದಿದ್ದೇನೆ. ಬೇರೆ ಬೇರೆ ಕಡೆ ಓದಿರುವುದರಿಂದ ವಿವಿಧ ಸಂಸ್ಕೃತಿ, ಭಾಷೆಗಳಿಗೆ ತೆರೆದುಕೊಳ್ಳಲು ಸಾಧ್ಯವಾಯಿತು. ಅದು ವೃತ್ತಿ ಜೀವನಕ್ಕೂ ನೆರವಾಗಿದೆ.

● ಆರು ವರ್ಷದ ಅಧಿಕಾರ ಅವಧಿಯಲ್ಲಿ ನಿಮ್ಮ ಆದ್ಯತೆ ಏನು?

ಜಾತಿ, ವರ್ಣ ವ್ಯವಸ್ಥೆಯೊಳಗಿನ ಲಿಂಗ ತಾರತಮ್ಯದ ವಿರುದ್ಧ ಗಟ್ಟಿ ಧ್ವನಿ ಎತ್ತುವ ಬಯಕೆ ಇದೆ. ಸಾಮಾಜಿಕ ಮಾಧ್ಯಮಗಳಲ್ಲಿ ವರ್ಣಭೇದ ನೀತಿಯನ್ನು ನಿರಂತರವಾಗಿ ಪ್ರತಿಪಾದಿಸುವ ಒಂದು ಸಮೂಹವೇ ಇದೆ. ಇದು ಈ ತಾರತಮ್ಯವನ್ನು ಮತ್ತಷ್ಟು ಬಲಗೊಳಿಸುತ್ತದೆ. ದ್ವೇಷ ಭಾಷಣಕ್ಕೂ ದಾರಿಯಾಗಬಲ್ಲದು. ಇದರ ಚರ್ಚೆ ಈ ಕಾಲದ ತುರ್ತು.

ಸರಣಿ 6

‘ನವೋದಯ’ ಪ್ರವೇಶ ಪರೀಕ್ಷೆ

ಗಣಿತದ ಸಮಸ್ಯೆ ಬಿಡಿಸಲು ಸರಳ ತಂತ್ರಗಳು



> ನವೋದಯ ವಿದ್ಯಾಲಯದ 6ನೇ ತರಗತಿ ಪ್ರವೇಶ ಪರೀಕ್ಷೆ ಪ್ರಶ್ನೆ ಪತ್ರಿಕೆಯಲ್ಲಿರುವ ‘ಮಾನಸಿಕ ಸಾಮರ್ಥ್ಯ‘ ವಿಷಯದ ಹತ್ತು ವಿಭಾಗಗಳ ಬಗ್ಗೆ ಕಳೆದ ಸಂಚಿಕೆಯವರೆಗೂ ಚರ್ಚಿಸಲಾಗಿತ್ತು. ಈ ಲೇಖನದಲ್ಲಿ, ಅಂಕಗಣಿತ ವಿಭಾಗದ ಪ್ರಶ್ನೆಗಳ ಸ್ವರೂಪ ತಿಳಿಯೋಣ..

ವೆಂಕಟಸುಬ್ಬರಾವ್

6ನೆಯ ತರಗತಿಯ ಪ್ರವೇಶ ಪರೀಕ್ಷೆಯ ಅಂಕಗಣಿತ ವಿಭಾಗದಲ್ಲಿ 20 ಪ್ರಶ್ನೆಗಳಿರುತ್ತವೆ. ಗರಿಷ್ಠ ಅಂಕಗಳು 25. ಈ ಅಂಕಗಣಿತ ವಿಭಾಗದಲ್ಲೂ ಎಲ್ಲ ಪ್ರಶ್ನೆಗಳೂ ವಸ್ತುನಿಷ್ಠ ಮಾದರಿ ಪ್ರಶ್ನೆಗಳೇ (Objective Type Questions) ಆಗಿರುತ್ತವೆ. ಪ್ರತಿ ಪ್ರಶ್ನೆಗೂ A,B,C,D ಎಂಬ ನಾಲ್ಕು ಆಯ್ಕೆಗಳಿರುತ್ತವೆ. ವಿದ್ಯಾರ್ಥಿಗಳು ಆ ನಾಲ್ಕು ಆಯ್ಕೆಗಳ ಸಂಭವನೀಯ ಉತ್ತರಗಳಲ್ಲಿ ಸರಿಯಾದ ಉತ್ತರವಿರುವ ಆಯ್ಕೆಯನ್ನು ಕಂಡುಹಿಡಿದು ಉತ್ತರಿಸಬೇಕು.

ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿನ ಪ್ರಶ್ನೆಗಳಿಗೆ ಸರಿಯಾಗಿ ಹಾಗೂ ವೇಗವಾಗಿ ಉತ್ತರಿಸಬೇಕು. ನಿಗದಿತ 0ಅವಧಿಯಲ್ಲಿ ಎಲ್ಲ ಪ್ರಶ್ನೆಗಳಿಗೂ ಉತ್ತರಿಸಲು ಅಭ್ಯಾಸ ಮಾಡಿಕೊಳ್ಳಬೇಕು. ಈ ವಿಭಾಗವನ್ನು ಗರಿಷ್ಠ 30 ನಿಮಿಷಗಳಲ್ಲಿ ಉತ್ತರಿಸಲು ಸಮರ್ಥವಾಗುವಂತೆ ತಯಾರಿ ನಡೆಸಿ. ಅದಕ್ಕಾಗಿ ಈ ಕೆಳಗಿನ ಕೆಲವು ಸಲಹೆಗಳು ಉಪಯುಕ್ತ.

- ಈ ಪರೀಕ್ಷೆ ತೆಗೆದುಕೊಳ್ಳಬೇಕೆಂದು ನಿರ್ಧರಿಸಿದ ಕ್ಷಣದಿಂದಲೇ ಸರಿಯಾದ ವೇಳಾಪಟ್ಟಿಯನ್ನು ಮಾಡಿ ಅದರಂತೆ ಓದಿ.
- ಅಂಕಗಣಿತದ ಪ್ರಶ್ನೆಗಳನ್ನು ಉತ್ತರಿಸುವಾಗ ಆತಂಕಮಾಡಿಕೊಳ್ಳಬೇಡಿ. ಪಾಠಗಳನ್ನು ಸರಿಯಾಗಿ ಅರ್ಥೈಸಿಕೊಳ್ಳಿ. ಪ್ರಶ್ನೆಗಳನ್ನು ಅರ್ಥ ಮಾಡಿಕೊಂಡೇ ಉತ್ತರಿಸಿ. ಗಣಿತದ ಪಾಠಗಳನ್ನು ಕಂಠಪಾಠ ಮಾಡಬೇಡಿ.
- ಕೇವಲ ಗಣಿತದ ಸಮಸ್ಯೆಗಳನ್ನು ಓದುವುದರಿಂದ ಹೆಚ್ಚಿನ ಪ್ರಯೋಜನವಾಗುವುದಿಲ್ಲ. ಸಮಸ್ಯೆಗಳನ್ನು ಬಿಡಿಸಿ ಅಭ್ಯಾಸ ಮಾಡಿ.
- ಹಿಂದಿನ ವರ್ಷಗಳ ಪ್ರಶ್ನೆ ಪತ್ರಿಕೆಗಳನ್ನು ಬಿಡಿಸಿ.
- ಅಂಕಗಣಿತದ ಸಮಸ್ಯೆಗಳನ್ನು ವೇಗವಾಗಿ ಬಿಡಿಸುವ (short-cut) ಹಲವಾರು ವಿಧಾನಗಳಿವೆ. ಕೆಲವು ವಿಧಾನಗಳನ್ನು ಈ ಸರಣಿಯ ಮುಂದಿನ ಲೇಖನಗಳಲ್ಲಿ ನೀಡುತ್ತಿದ್ದೇನೆ.
- ಅಂಕಗಣಿತದ ಸಮಸ್ಯೆಗಳ ಸರಿ ಉತ್ತರ ಅಂದಾಜಿಸುವುದನ್ನು ಅಭ್ಯಾಸ ಮಾಡಿಕೊಳ್ಳಿ. ಇದು ಬಹಳ ಉಪಯೋಗವಾಗುತ್ತದೆ.



ಉದಾಹರಣೆಗೆ, ಒಂದು ಸರಳ ಪ್ರಶ್ನೆ ಮತ್ತು ನಾಲ್ಕು ಆಯ್ಕೆಗಳನ್ನು ನೋಡೋಣ.

ಶಾಲೆಗಳಲ್ಲಿ, 5ನೆಯ ತರಗತಿಯ ಮಕ್ಕಳಿಗೆ ಗಣಿತದ ಸಮಸ್ಯೆಗಳನ್ನು ಬಿಡಿಸಲು ಹೇಳಿಕೊಡುವಾಗ, ಸಾಮಾನ್ಯ ವಾಗಿ, ಪೂರ್ಣ ವಾಕ್ಯಗಳನ್ನು ಬರೆದು ಉತ್ತರಿಸುವುದನ್ನು ಅಭ್ಯಾಸ ಮಾಡಿಸಿರುತ್ತೇವೆ. ಮೇಲಿನ ಉದಾಹರಣೆ ಯನ್ನು ಬಿಡಿಸುವಾಗ, ಈ ಕೆಳಗಿನಂತೆ ಬರೆಯುವುದನ್ನು ಕಲಿಸಿರುತ್ತೇವೆ;

ಒಂದು ಪೆನ್ನಿನ ಬೆಲೆ = ₹ 12

490 ಪೆನ್ನುಗಳ ಬೆಲೆ ?

₹12 x 490 ಪೆನ್ನುಗಳು = 5880 ಹೀಗೆ !

ಆದರೆ, ಸ್ಪರ್ಧಾತ್ಮಕ ಪರೀಕ್ಷೆಯಲ್ಲಿ ಹೀಗೆ ಬರೆದು, ಸಮಸ್ಯೆಯನ್ನು ಬಿಡಿಸುವಷ್ಟು ಸಮಯವಿರುವುದಿಲ್ಲ. ಆದ್ದರಿಂದ, ಎಷ್ಟು ಅವಶ್ಯಕವೊ ಅಷ್ಟನ್ನು ಮಾತ್ರಾ ಬರೆದು ಸಮಸ್ಯೆಯನ್ನು ಬಿಡಿಸುವುದನ್ನು ಕಲಿಯಬೇಕು. ಅದನ್ನು ಮುಂದಿನ ಸಂಚಿಕೆಯಲ್ಲಿ ಈ ತಂತ್ರದ ಬಗ್ಗೆ ವಿವರವಾಗಿ ತಿಳಿಸುವೆ.

- ಗಣಿತದ ಸಮಸ್ಯೆಗಳನ್ನು ಚಿತ್ರೀಕರಿಸಿಕೊಂಡು ಉತ್ತರಿಸುವುದನ್ನು ಅಭ್ಯಾಸಮಾಡಿಕೊಳ್ಳಿ. ಉದಾಹರಣೆಗೆ ಈ ಸಮಸ್ಯೆಯನ್ನು ನೋಡಿ;

ಒಂದು ಆಯತಾಕಾರದ ಮೈದಾನದ ಉದ್ದ 400 ಮೀ. ಮತ್ತು ಅಗಲ 300 ಮೀ. ಇದೆ. ಒಬ್ಬ ವ್ಯಕ್ತಿಯು ಆ ಮೈದಾನದ ಅಂಚಿನ ಒಂದು ನಿರ್ದಿಷ್ಟ ಬಿಂದುವಿನಿಂದ ನಡೆಯಲು ಪ್ರಾರಂಭಿಸಿ, ಮೈದಾನದ ಅಂಚಿನಲ್ಲೇ ನಡೆದು, ಪೂರ್ಣವಾಗಿ ಮೈದಾನವನ್ನು 5 ಬಾರಿ ಸುತ್ತಿ, ನಡಿಗೆಯನ್ನು ಪ್ರಾರಂಭಿಸಿದ ಬಿಂದುವನ್ನು ತಲುಪಿದರೆ, ಅವನು ಕ್ರಮಿಸಿದ ಒಟ್ಟು ದೂರ ಎಷ್ಟು?

ಈ ರೀತಿಯ ಸಮಸ್ಯೆಗಳನ್ನು ಚಿತ್ರೀಕರಿಸಿಕೊಂಡು ಅಥವಾ ದೃಶ್ಯೀಕರಣದಿಂದ (visualisation) ಸುಲಭವಾಗಿ ಉತ್ತರಿಸಬಹುದಲ್ಲವೇ?

ಮುಂದಿನ ಸಂಚಿಕೆಯಲ್ಲಿ ಅಂಕಗಣಿತದ ಸಮಸ್ಯೆಗಳನ್ನು ಸುಲಭವಾಗಿ ಹಾಗೂ ವೇಗವಾಗಿ ಬಿಡಿಸುವ ಕೆಲವು ಸರಳ ವಿಧಾನಗಳನ್ನು ನೋಡೋಣ.

(ಗಮನಿಸಿ : 2023ನೆಯ ಇಸವಿಯಲ್ಲಿನ 9 ನೆಯ ತರಗತಿಯ ಪ್ರವೇಶ ಪರೀಕ್ಷೆಗೆ ಆನ್-ಲೈನ್ ಅರ್ಜಿಹಾಕುವ ದಿನಾಂಕವನ್ನು 25/10/2022 ವರಗೂ ವಿಸ್ತರಿಸಲಾಗಿದೆ).

ಹೆಚ್ಚಿನ ವಿವರಗಳಿಗಾಗಿ ಕೆಳಗಿನ ಜಾಲತಾಣವನ್ನು ನೋಡಿ. https://navodaya.gov.in/nvs/en/Home1

(ಮುಂದುವರಿಯುವುದು . . .)

(ಲೇಖಕರು: ನಿರ್ದೇಶಕರು, ಸ್ಮಾರ್ಟ್ ಸೆರೆಬ್ರಮ್ ಪ್ರೈ.ಲಿ)



ಸುಭಾಷಿತ

ಎಂತಹ ಕಟು ಪ್ರಸಂಗ ಬಂದರೂ ಎದೆಗುಂದಬಾರದು. ಇದೇ ಸುಖಿಯಾಗಿರುವುದರ ರಹಸ್ಯ.

-ದ.ರಾ. ಬೇಂದ್ರೆ

ಬಿಲ್ಕಿಸ್ ಬಾನು ಪ್ರಕರಣ ಅಪರಾಧಿಗಳ ಬಿಡುಗಡೆ ಹೀನ ಕೃತ್ಯ

ಬಿಲ್ಕಿಸ್ ಬಾನು ಪ್ರಕರಣದ 11 ಅಪರಾಧಿಗಳನ್ನು ಸೆರೆಮನೆಯಿಂದ 'ಉತ್ತಮ ನಡತೆ'ಯ ಆಧಾರದಲ್ಲಿ ಬಿಡುಗಡೆ ಮಾಡಿದ ವಿಚಾರದಲ್ಲಿ ಗುಜರಾತ್ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಪ್ರಮಾಣಪತ್ರ ಸಲ್ಲಿಸಿದೆ; ಅಪರಾಧಿಗಳ ಬಿಡುಗಡೆಗೆ ಸಂಬಂಧಿಸಿದಂತೆ ಆಗಿರುವ ವಿವಾದ ಮತ್ತು ಅದಕ್ಕೆ ಬಂದಿರುವ ಟೀಕೆಗಳನ್ನು ಪುಷ್ಟೀಕರಿಸುವ ರೀತಿಯಲ್ಲಿಯೇ ಸರ್ಕಾರ ಸಲ್ಲಿಸಿರುವ ಪ್ರಮಾಣಪತ್ರದಲ್ಲಿರುವ ಅಂಶಗಳು. ಇದೇ ಆಗಸ್ಟ್ 15ರಂದು ಗೋಧ್ರಾ ಜೈಲಿನಿಂದ ಬಿಡುಗಡೆಯಾದ, ಅತ್ಯಾಚಾರ ಮತ್ತು ಹತ್ಯೆ ಮಾಡಿದಂತ ಈ 11 ಅಪರಾಧಿಗಳನ್ನು ಜೈಲಿನಲ್ಲಿ ಚೆನ್ನಾಗಿ ನೋಡಿಕೊಳ್ಳಲಾಗಿದೆ ಎಂಬ ವಿವರಗಳು ಆಘಾತಕಾರಿಯಾಗಿವೆ. 2002ರಲ್ಲಿ ಗೋಧ್ರೋತ್ತರದಲ್ಲಿ ನಡೆದ ಗಲಭೆಯ ಸಂದರ್ಭದಲ್ಲಿ ಈ 11 ಮಂದಿ, ಬಿಲ್ಕಿಸ್ ಬಾನು ಅವರ ಮೇಲೆ ಸಾಮೂಹಿಕ ಅತ್ಯಾಚಾರ ಎಸಗಿದ್ದರು ಮತ್ತು ಅವರ ಕುಟುಂಬದ ಏಳು ಮಂದಿಯನ್ನು ಹತ್ಯೆ ಮಾಡಿದ್ದರು. ಹತ್ಯೆಗೆ ಒಳಗಾದವರಲ್ಲಿ ಎರಡು ವರ್ಷದ ಹಸುಳೆಯೂ ಸೇರಿತ್ತು. ಸಿಬಿಐ ವಿಶೇಷ ನ್ಯಾಯಾಲಯವು ಎಲ್ಲ 11 ಅಪರಾಧಿಗಳಿಗೆ ಜೀವಾವಧಿ ಶಿಕ್ಷೆ ವಿಧಿಸಿತ್ತು. ಈ ಅಪರಾಧಿಗಳನ್ನು ಬಿಡುಗಡೆ ಮಾಡಿದ ಗುಜರಾತ್ ಸರ್ಕಾರದ ನಿರ್ಧಾರವನ್ನು ಆಡಳಿತಾರೂಢ ಬಿಜೆಪಿ ಮತ್ತು ಅದರ ಬೆಂಬಲಿಗರು ಸಮರ್ಥಿಸಿಕೊಳ್ಳುತ್ತಿರುವುದು ತಪ್ಪು ಮತ್ತು ನಿರ್ಲಜ್ಜ ನಡೆ. ಗುಜರಾತ್ ರಾಜ್ಯ ಸರ್ಕಾರದ ನಿರ್ಧಾರವನ್ನು ಕೇಂದ್ರ ಸರ್ಕಾರವು ಅನುಮೋದಿಸಿತ್ತು ಎಂಬ ವಿಚಾರ ಈಗ ಬಯಲಿಗೆ ಬಂದಿದೆ. ಆದರೆ, ಈವರೆಗೆ ಈ ವಿಚಾರದಲ್ಲಿ ಕೇಂದ್ರವು ಮೌನ ವಹಿಸಿತ್ತು. ಅತ್ಯಾಚಾರದಂತಹ ಹೀನ ಕೃತ್ಯ ಎಸಗಿ ಜೈಲಿಗೆ ಹೋದ ಕೈದಿಗಳನ್ನು ಸನ್ನಡತೆಯ ಆಧಾರದಲ್ಲಿ ಬಿಡುಗಡೆ ಮಾಡಬಾರದು ಎಂದು ಕೇಂದ್ರ ಸರ್ಕಾರವೇ ರೂಪಿಸಿರುವ ಮಾರ್ಗಸೂಚಿಯನ್ನು ಈ ಪ್ರಕರಣದಲ್ಲಿ ಉಲ್ಲಂಘಿಸಲು ಕಾರಣವೇನು ಎಂಬುದರ ಕುರಿತು ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರೇ ಸ್ಪಷ್ಟೀಕರಣ ನೀಡಬೇಕು. ಸಂತ್ರಸ್ತೆ, ಅವರ ಕುಟುಂಬದ ಸದಸ್ಯರು ಮುಸ್ಲಿಂ ಸಮುದಾಯಕ್ಕೆ ಸೇರಿದವರು ಮತ್ತು ಬಿಜೆಪಿಯ ಶಾಸಕರೊಬ್ಬರು ಹೇಳಿದಂತೆ ಅಪರಾಧಿಗಳು 'ಸಂಸ್ಕಾರವಂತ ಬ್ರಾಹ್ಮಣರು' ಎಂಬುದು ಈ ಪ್ರಕರಣದಲ್ಲಿ ಮಾರ್ಗಸೂಚಿಯ ಅನ್ವಯ ಆಗದಿರಲು ಕಾರಣವೇ?



ಗುಜರಾತ್ ಸರ್ಕಾರದ ಈ ತೀರ್ಮಾನವನ್ನು ಆಡಳಿತಾರೂಢ ಬಿಜೆಪಿ ಮತ್ತು ಅದರ ಬೆಂಬಲಿಗರು ಸಮರ್ಥಿಸಿಕೊಳ್ಳುತ್ತಿರುವುದು ನಿರ್ಲಜ್ಜ ನಡೆ

11 ಅಪರಾಧಿಗಳ ಬಿಡುಗಡೆಯ ಪ್ರಸ್ತಾವದ ಕುರಿತು ಸಂಬಂಧಪಟ್ಟ ಸಂಸ್ಥೆಗಳಿಂದ ರಾಜ್ಯ ಸರ್ಕಾರವು ಅಭಿಪ್ರಾಯ ಕೇಳಿತ್ತು. ಸಿಬಿಐ ಮತ್ತು ಸಿಬಿಐ ವಿಶೇಷ ನ್ಯಾಯಾಲಯದ ನ್ಯಾಯಾಧೀಶರು ಈ ಪ್ರಸ್ತಾವವನ್ನು ವಿರೋಧಿಸಿದ್ದರು. ಅಪರಾಧಿಗಳಲ್ಲಿ ಒಬ್ಬನಾದ ರಾಧೇಶ್ಯಾಮ್ ಶಾ ಎಂಬಾತನ ಬಿಡುಗಡೆಯ ಪ್ರಸ್ತಾವಕ್ಕೆ ಜಿಲ್ಲಾಧಿಕಾರಿ ಮತ್ತು ಜಿಲ್ಲಾ ನ್ಯಾಯಾಧೀಶರು ಆಕ್ಷೇಪ ವ್ಯಕ್ತಪಡಿಸಿದ್ದರು. ಆದರೆ, ಈ ಎಲ್ಲರನ್ನೂ ಬಿಡುಗಡೆ ಮಾಡಬೇಕು ಎಂಬ ನಿರ್ಧಾರಕ್ಕೆ ಸರ್ಕಾರ ಮೊದಲೇ ಬಂದಿತ್ತು ಎಂಬುದು ಸ್ಪಷ್ಟ. ಕಾಟಾಚಾರಕ್ಕಾಗಿ ಮಾತ್ರ ಪ್ರಕ್ರಿಯೆಯನ್ನು ಅನುಸರಿಸಿದ್ದು ಅಷ್ಟೇ. ತಪ್ಪಿತಸ್ಥರು ಶಿಕ್ಷೆ ಅವಧಿಯಲ್ಲಿ ಸಾವಿರಕ್ಕೂ ಹೆಚ್ಚು ದಿನಗಳನ್ನು ಪರೋಲ್ ಮತ್ತು ಫರ್ಲೋ ಮೂಲಕ ಜೈಲಿನಿಂದ ಹೊರಗೆ ಕಳೆದಿದ್ದಾರೆ. ತಪ್ಪಿತಸ್ಥ ರಮೇಶ್‌ಭಾಯ್ ಚಂದನ ಎಂಬಾತ ಐದಕ್ಕೂ ಹೆಚ್ಚು ವರ್ಷ ಸೆರೆಮನೆಯಿಂದ ಹೊರಗೆ ಇದ್ದ. ಅಪರಾಧಿಗಳಲ್ಲಿ ಕೆಲವರು ಪರೋಲ್ ಅವಧಿ ಮುಗಿದ ಬಳಿಕವೂ ಜೈಲಿಗೆ ಹಿಂದಿರುಗಲು ವಿಳಂಬ ಮಾಡಿದ ಆರೋಪ ಹೊತ್ತಿದ್ದಾರೆ. ಹಾಗಿದ್ದರೂ ಅವರಿಗೆ ಪದೇ ಪದೇ ಪರೋಲ್ ನೀಡಲಾಗಿದೆ. ಬಿಲ್ಕಿಸ್ ಬಾನು ಪ್ರಕರಣದ ಅಪರಾಧಿಗಳಿಗೆ ಸೆರೆಮನೆಯಲ್ಲಿ ವಿಶೇಷ ಸೌಲಭ್ಯವನ್ನು ರಾಜ್ಯ ಸರ್ಕಾರವು ನೀಡಿತ್ತು ಎಂಬುದನ್ನು ಇವೆಲ್ಲವೂ ಸಾಬೀತುಪಡಿಸುತ್ತವೆ.

ಅಪರಾಧಿಗಳಲ್ಲಿ ಕೆಲವರು ಪರೋಲ್‌ನಲ್ಲಿ ಜೈಲಿನಿಂದ ಹೊರಗೆ ಇದ್ದಾಗಲೂ ಅಪರಾಧ ಕೃತ್ಯ ಎಸಗಿದ್ದಾರೆ ಎಂಬುದೂ ಈಗ ತಿಳಿದುಬಂದಿದೆ. ಪರೋಲ್‌ನಲ್ಲಿ ಜೈಲಿನಿಂದ ಹೊರಗೆ ಬಂದಿದ್ದ ಮಿತೇಶ್ ಭಟ್ ಎಂಬಾತನ ಮೇಲೆ ಮಹಿಳೆಯೊಬ್ಬರ ಘನತೆಗೆ ಧಕ್ಕೆ ತಂದ ಪ್ರಕರಣದಲ್ಲಿ 2020ರ ಜೂನ್‌ನಲ್ಲಿ ಆರೋಪಪಟ್ಟಿ ದಾಖಲಾಗಿದೆ. ಹೀಗಿದ್ದರೂ ಈ ವ್ಯಕ್ತಿಯನ್ನು 'ಸನ್ನಡತೆ' ಆಧಾರದಲ್ಲಿ ಬಿಡುಗಡೆ ಮಾಡಲಾಗಿದೆ. ಗುಜರಾತ್ ಸರ್ಕಾರವು ಅದನ್ನು ಸಮರ್ಥನೆ ಕೂಡ ಮಾಡಿಕೊಳ್ಳುತ್ತಿದೆ. ಇತರರ ಮೇಲೆಯೂ ದೂರುಗಳು ಮತ್ತು ಪ್ರಕರಣಗಳು ಇವೆ. ಈ ಎಲ್ಲ ಗಂಭೀರ ಉಲ್ಲಂಘನೆಗಳನ್ನು ನಿರ್ಲಕ್ಷಿಸಿ, ಎಲ್ಲ ಆಕ್ಷೇಪಗಳನ್ನು ಬದಿಗೆ ಸರಿಸಿ ಅಪರಾಧಿಗಳನ್ನು ಬಿಡುಗಡೆ ಮಾಡಲಾಗಿದೆ. ಗುಜರಾತ್ ಸರ್ಕಾರದ ನಿರ್ಧಾರವು ಪೂರ್ವಗ್ರಹದಿಂದ ಕೂಡಿದ್ದಾಗಿದೆ, ನ್ಯಾಯ ಮತ್ತು ನೈತಿಕತೆಗೆ ವಿರುದ್ಧವಾದುದಾಗಿದೆ. ಸರ್ಕಾರವು ಮಾಡಿರುವುದು ಘೋರವಾದ ಮತ್ತು ಸರಿಪಡಿಸಿಕೊಳ್ಳಲೇಬೇಕಾದ ತಪ್ಪು.

ದಿನದ ಟ್ವೀಟ್

ಕಣ್ಣೀರು ಕಂಡಿರಲಿಲ್ಲ



ನಾನು ಹಲವು ವರ್ಷಗಳಿಂದ ವಿರಾಟ್ ಅವರನ್ನು ನೋಡಿದ್ದೇನೆ. ಅವರು ಕಣ್ಣೀರು ಹಾಕಿದ್ದನ್ನು ನಾನು ಯಾವತ್ತೂ ಕಂಡಿರಲಿಲ್ಲ. ಆದರೆ, ಅದನ್ನು ಇವತ್ತು ಕಂಡೆ. ಇದು ಎಂದಿಗೂ ಮರೆಯಲಾಗದ್ದು.

ಹರ್ಷ ಭೋಗ್ಲೆ, ಕ್ರಿಕೆಟ್ ವೀಕ್ಷಕ ವಿವರಣೆಗಾರ

ಕಿಡಿನುಡಿ



ಇದೇನಿದು ಗೂಂಡಾರಾಜ್ಯ... ಅಂದು ಅರವಿಂದ ಲಿಂಬಾವಳಿ, ಇಂದು ವಿ.ಸೋಮಣ್ಣ. ಸಾರ್ವಜನಿಕವಾಗಿ ಮಹಿಳೆ ಮೇಲೆ ಹಲ್ಲೆ ಮಾಡುವ ಮನಃಸ್ಥಿತಿ ಇದೆ ಎಂದಾದರೆ, ಎಲ್ಲಿದೆ ಪ್ರಜೆಗಳಿಂದ ಪ್ರಜೆಗಳಿಗಾಗಿ ಪ್ರಜೆಗಳಿಗೋಸ್ಕರ ಸರ್ಕಾರ? ಇದೇನಾ ಪ್ರಜಾಪ್ರಭುತ್ವ? ನಿಮ್ಮ ಮನೆಯ ಹೆಣ್ಣುಮಕ್ಕಳ ಮೇಲೂ ಹೀಗೆ ಹಲ್ಲೆ ಮಾಡ್ತೀರಾ...?

ಚೇತನ್ ಸೂರ್ಯ ಎಸ್., ಅಧ್ಯಕ್ಷ, ಕರ್ನಾಟಕ ರಾಜ್ಯ ಯುವ ಪರಿಷತ್ತು

25 ವರ್ಷಗಳ ಹಿಂದೆ

ಶುಕ್ರವಾರ, 24-10-1997

• ಚಿತ್ತಾಲ, ಕಮಲಾ ಹಂಪನಾ, ವಜ್ರಮುನಿ ಸೇರಿ 51 ಗಣ್ಯರಿಗೆ ರಾಜ್ಯೋತ್ಸವ ಪ್ರಶಸ್ತಿ

ಬೆಂಗಳೂರು, ಅಕ್ಟೋಬರ್ 23– ಸಾಹಿತಿಗಳಾದ ಯಶವಂತ ಚಿತ್ತಾಲ, ಕಮಲಾ ಹಂಪನಾ, ಎನ್. ನರಸಿಂಹಯ್ಯ, ನಟ ವಜ್ರಮುನಿ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಗಣನೀಯ ಸೇವೆ ಸಲ್ಲಿಸಿರುವ 51 ವ್ಯಕ್ತಿಗಳಿಗೆ ಈ ಬಾರಿಯ ರಾಜ್ಯೋತ್ಸವ ಪ್ರಶಸ್ತಿ.

ಕನ್ನಡ ಮತ್ತು ಸಂಸ್ಕೃತಿ ಸಚಿವೆ ಲೀಲಾದೇವಿ ಆರ್. ಪ್ರಸಾದ್ ಅವರು ಈ ಬಾರಿಯ ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆಯಾಗಿರುವವರ ಪಟ್ಟಿಯನ್ನು ಇಂದು ಇಲ್ಲಿ ಪತ್ರಿಕಾಗೋಷ್ಠಿಯಲ್ಲಿ ಪ್ರಕಟಿಸಿದರು. ಸುವರ್ಣ ಸ್ವಾತಂತ್ರ್ಯೋತ್ಸವದ ನೆನಪಿಗಾಗಿ ಈ ವರ್ಷ 51 ಗಣ್ಯರಿಗೆ ರಾಜ್ಯೋತ್ಸವ ಪ್ರಶಸ್ತಿ ನೀಡಲು ಸರ್ಕಾರ ತೀರ್ಮಾನಿಸಿದೆ ಎಂದು ಹೇಳಿದರು.

• ರಂಗ ಸರ್ಕಾರಕ್ಕೆ ಕಾಂಗ್ರೆಸ್ ಬೆಂಬಲ ವಾಪಸ್ ಇಲ್ಲ

ನವದೆಹಲಿ, ಅಕ್ಟೋಬರ್ 23– ಉತ್ತರ ಪ್ರದೇಶ ಸರ್ಕಾರವನ್ನು ವಜಾ ಮಾಡಿ ರಾಷ್ಟ್ರಪತಿ ಆಳ್ವಿಕೆ ಘೋಷಣೆಗೆ ಶಿಫಾರಸು ಮಾಡಿ ನಂತರ ಆ ಆಜ್ಞೆಯನ್ನು ಹಿಂತೆಗೆದುಕೊಂಡ ಪ್ರಕರಣದ ಬಗೆಗೆ ಸಂಯುಕ್ತ ರಂಗ ಸರ್ಕಾರದ ನಿಲುವಿನ ಬಗೆಗೆ ಸಹಮತ ಇಲ್ಲ. ಆದರೆ ಈ ಕಾರಣಕ್ಕಾಗಿ ತಾನು ನೀಡಿರುವ ಬೆಂಬಲವನ್ನು ಈಗ ಹಿಂತೆಗೆದುಕೊಳ್ಳುವುದಿಲ್ಲ ಎಂದು ಕಾಂಗ್ರೆಸ್ ಇಂದು ಮತ್ತೆ ತನ್ನ ನಿಲುವನ್ನು ಪುನರುಚ್ಚರಿಸಿತು.

ಈ ಸಂಬಂಧ ಇಂದು ನಡೆದ ಎಐಸಿಸಿ ಪದಾಧಿಕಾರಿಗಳ ಸಭೆಯ ನಂತರ ಪ್ರಣವ್ ಮುಖರ್ಜಿ ಪತ್ರಿಕಾಗೋಷ್ಠಿಯಲ್ಲಿ ತಮ್ಮ ಪಕ್ಷದ ನಿಲುವಿನ ಬಗೆಗೆ ವಿವರಿಸಿದರು.

50 ವರ್ಷಗಳ ಹಿಂದೆ

ಮಂಗಳವಾರ, 24-10-1972

• ಒಡೆತನ ನಿರ್ಧಾರದ ತನಕ ಉಭಯ ಕಾಂಗ್ರೆಸ್ ಸ್ವಾಧೀನಕ್ಕೆ ಅವಕಾಶ

ಬೆಂಗಳೂರು, ಅಕ್ಟೋಬರ್ 23– ವಿವಾದ ಗ್ರಸ್ತವಾದ ರೇಸ್‌ಕೋರ್ಸ್ ರಸ್ತೆಯ ಕಾಂಗ್ರೆಸ್ ಭವನದ ಸ್ವಾಧೀನದ ಹಕ್ಕು ಸಿವಿಲ್ ನ್ಯಾಯಾಲಯದಲ್ಲಿ ತೀರ್ಮಾನವಾಗುವವರೆಗೆ ಉಭಯ ಕಾಂಗ್ರೆಸ್ ಪಕ್ಷಗಳು ಭವನದ ಒಂದೊಂದು ಭಾಗವನ್ನು ಹಂಗಾಮಿಯಾಗಿ ಸ್ವಾಧೀನಕ್ಕೆ ಪಡೆಯುವಂತೆ ಸಬ್‌ಡಿವಿಜನಲ್ ಮ್ಯಾಜಿಸ್ಟ್ರೇಟ್ ನರೇಂದ್ರ ಸಿಂಗ್ ಅವರು ತೀರ್ಪು ನೀಡಿದ್ದಾರೆ.

ಅವರ ತೀರ್ಪಿನ ಪ್ರಕಾರ, ಆಡಳಿತ ಕಾಂಗ್ರೆಸ್‌ಗೆ ಪೀಠೋಪಕರಣಗಳು, ಭವನದ ಎಡಭಾಗ ಮತ್ತು ಸೆಂಟ್ರಲ್‌ಹಾಲ್ ದೊರೆತಿದ್ದರೆ, ಸಂಸ್ಥಾ ಕಾಂಗ್ರೆಸ್‌ಗೆ ನೆಲಮಟ್ಟದ ಕಟ್ಟಡದ ಬಲಬದಿ, ಪೂರ್ಣವಾಗಿ ಪ್ರಥಮ ಮಹಡಿ ಹಾಗೂ ಪಕ್ಕದ ಕಟ್ಟಡ ದೊರೆತಿದೆ.

• ಭುಟ್ಟೋ 'ಅಪನಂಬಿಕಸ್ಥ': ಗಡಿನಾಡ ಗಾಂಧಿ ಟೀಕೆ

ನವದೆಹಲಿ, ಅಕ್ಟೋಬರ್ 23– ಪಾಕಿಸ್ತಾನದ ಅಧ್ಯಕ್ಷ ಜಡ್.ಎ. ಭುಟ್ಟೋ ಅವರು ಅಪನಂಬಿಕೆಯುಳ್ಳ ವ್ಯಕ್ತಿ ಎಂದು ಖುದಾಯಿ ಖಿದ್ಮಗರ್ ನಾಯಕ ಖಾನ್ ಅಬ್ದುಲ್ ಗಫಾರ್ ಖಾನ್ ಅವರು ಆಪಾದಿಸಿದ್ದಾರೆ.

ಜನತೆಯ ಸಮಸ್ಯೆಗಳನ್ನು ಪರಿಷ್ಕರಿಸಲು ಎಲ್ಲ ಸಹಕಾರ ನೀಡುವುದಾಗಿ ತಾವು ಸದುದ್ದೇಶದಿಂದ ತಿಳಿಸಿದ್ದರೂ, ತಮ್ಮ ಸೂಚನೆಯನ್ನು ಭುಟ್ಟೋ ಅವರು 'ಲಂಡನ್ ಯೋಜನೆ' ಎಂದು ಶಂಕಿಸಿದ್ದಾರೆಂದೂ, ತಮ್ಮನ್ನು ಬಲೂಚಿಸ್ತಾನ ಜನತೆ ಆಹ್ವಾನಿಸಿದ್ದಾಗಲೂ ತಮ್ಮ ವಿರುದ್ಧ ದೋಷಾರೋಪಣೆ ಹೊರಿಸಲಾಯಿತೆಂದೂ ಖಾನ್ ತಿಳಿಸಿದ್ದಾರೆ.

ಅಪರಿಮಿತ ಕತ್ತಲೆಯೊಳಗೆ ಅಲೌಕಿಕ ಬೆಳಕಿನ ದರ್ಶನವಾಗಬೇಕೆಂದರೆ...

ನಮ್ಮ ಕಿರಣ ನಮಗೆ ಬೆಳಕು



ವಿಶ್ಲೇಷಣೆ

ಡಾ. ಟಿ.ಎನ್.ವಾಸುದೇವಮೂರ್ತಿ

ಬೆಳಕಿನ ಹುಡುಕಾಟ ಭಾರತೀಯ ಸಂಸ್ಕೃತಿಯ ಮೂಲ ಸ್ವಭಾವಗಳಲ್ಲೊಂದು. ಕತ್ತಲೆಯಿಂದ ಬೆಳಕಿನೆಡೆಗೆ ನಡೆಸು (ತಮಸೋ ಮಾ ಜ್ಯೋತಿರ್ಗಮಯ) ಎಂಬ ಪ್ರಾರ್ಥನೆ ಅಥವಾ ಸಂಕಲ್ಪವು ಭಾರತೀಯತೆಯ ಮೂಲಗುಣವಾಗಿದೆ. ಹೀಗಾಗಿ, ದೀಪಾವಳಿಯು ಹಿಂದೂ ಸಂಪ್ರದಾಯದ ಹಬ್ಬ ಮಾತ್ರವಲ್ಲ. ಅದನ್ನು ಜೈನರು, ಬೌದ್ಧರು, ಸಿಖ್ಖರು, ಅಲ್ಲದೆ ಜಾರ್ಖಂಡ್, ಒಡಿಶಾ, ಅಸ್ಸಾಂನ ಆದಿವಾಸಿಗಳೂ ಆಚರಿಸುತ್ತಾರೆ.

ದೀಪಾವಳಿ ಹಲವು ಅರ್ಥ-ಛಾಯೆಗಳನ್ನು ಹೊಂದಿರುವ ಒಂದು ರೂಪಕಾತ್ಮಕ ಕಲ್ಪನೆಯಾಗಿದೆ. ದೀಪಾವಳಿ (ದೀಪ + ಆವಳಿ) ಎಂಬ ಪದವೇ ಬೆಳಕಿನ ವೈವಿಧ್ಯವನ್ನು, ಬೆಳಕಿನ ಹಲವು ಛಾಯೆಗಳನ್ನು ಸೂಚಿಸುತ್ತದೆ. ಇಲ್ಲಿ ಬೆಳಕೆಂದರೆ ಬರೀ ಕರಣದ ಕಣ್ಣಿಗೆ ಕಾಣಿಸುವ ಬೆಳಕೇ ಆಗಬೇಕೆಂದಿಲ್ಲ. ನಮ್ಮ ಪರಂಪರೆಯು ಅಂತರಂಗದ ಅರಿವನ್ನೂ ಹಾಗೆಯೇ ಪರಮಾತ್ಮನನ್ನೂ ಬೆಳಕಿಗೇ ಹೋಲಿಸಿದೆ.

ಅಲ್ಲಮಪ್ರಭು ತನ್ನ ಒಂದು ವಚನದಲ್ಲಿ 'ನಿಮ್ಮ ತೇಜವ ನೋಡಲೆಂದು ಹೆರಸಾರಿ ನೋಡುತ್ತಿರಲು ಶತಕೋಟಿ ಸೂರ್ಯರು ಮೂಡಿದಂತೆ ಇರ್ದುದಯ್ಯಾ! ಮಿಂಚಿನಬಳ್ಳಿಯ ಸಂಚವ ಕಂಡಡೆ ಎನಗಿದು ಸೋಜಿಗವಾಯಿತ್ತು! ಗುಹೇಶ್ವರಾ ನೀನು ಜ್ಯೋತಿರ್ಲಿಂಗವಾದಡೆ ಉಪಮಿಸಿ ನೋಡಬಲ್ಲವರಿಲ್ಲಯ್ಯಾ' ಎಂದಿರುವುದು ಈ ಅಂತರಂಗದ ಬೆಳಕನ್ನು ಅಥವಾ ಜ್ಯೋತಿರ್ಲಿಂಗವನ್ನು ಕುರಿತೇ ಆಗಿದೆ.

ಕಾವ್ಯಗುರು ಕಿರಂ ನಾಗರಾಜ ಅವರು 'ಕನ್ನಡ ಅನುಭಾವ ಸಾಹಿತ್ಯದಲ್ಲಿ ಬೇಂದ್ರೆ ಮತ್ತು ಅಲ್ಲಮರ ನಡುವೆ ನಡೆದಿರುವ ಸಂವಾದವು (ಅದನ್ನು ಅವರು ಜುಗಲ್‌ಬಂದಿ ಎಂದು ಕರೆಯುತ್ತಿದ್ದರು) ತಾತ್ವಿಕವಾಗಿ ಅತ್ಯಂತ ಮಹತ್ವದ, ಸಾಹಿತ್ಯದ ವಿದ್ಯಾರ್ಥಿಗಳು ಗಮನಿಸಲೇಬೇಕಾದ ಅತಿಮುಖ್ಯ ಘಟ್ಟವಾಗಿದೆ ಎಂದು ಆಗಾಗ ಹೇಳುತ್ತಿದ್ದರು. ಬೇಂದ್ರೆ ತಮ್ಮ ಒಂದು ಪದ್ಯದಲ್ಲಿ ಅಲ್ಲಮನನ್ನು ಚಕೋರಪಕ್ಷಿಗೆ ಹೋಲಿಸುತ್ತಾರೆ. 'ಬೆಳುದಿಂಗಳವ ಕುಡಿದ ಮಧುಮತ್ತ ಚಿತ್ತ ಚಕೋರ ಹೇಳುತಿದೆ ಕೇಳುತಿದೆ ಬೇರೆ ದರುಶನವೇಕೆ? ಮಾತೇ ಜ್ಯೋತಿರ್ಲಿಂಗ!' (ಅಲ್ಲಮಪ್ರಭು, ಉಯ್ಯಾಲೆ) ಎಂದು ಅಲ್ಲಮನನ್ನು ವರ್ಣಿಸುತ್ತಾರೆ. ಚಕೋರಪಕ್ಷಿಗೆ ಚಂದಿರನ ಬೆಳಕು ಅಥವಾ ಚಂದಿರನ ಬೆಳದಿಂಗಳೇ ಆಹಾರವಾಗಿದೆ ಎಂಬುದು ಕವಿಸಮಯ. ಈ ಸಾಲಿನಲ್ಲಿ ಬೇಂದ್ರೆಯವರು ಅಲ್ಲಮನ ಚಿತ್ತವನ್ನು, ಅನುಭಾವದ ಬೆಳಕನ್ನು ಹೀರಿ ಅಮಲೇರಿಸಿಕೊಂಡಿರುವ ಒಂದು ಚಕೋರ ಪಕ್ಷಿಗೆ ಹೋಲಿಸಿದ್ದಾರೆ.

ಆದರೆ ಚಿತ್ತವಿರುವಷ್ಟೂ ಕಾಲ ಚಿತ್ತವೃತ್ತಿಯೂ ಚಿತ್ತವಿಕಲ್ಪವೂ ಇದ್ದೇ ಇರುತ್ತದೆ. ಅಲೌಕಿಕ ಬೆಳಕಿನ ದರ್ಶನವಾಗಬೇಕೆಂದರೆ ಚಿತ್ತಲಯವಾಗಬೇಕು, ಚಿತ್ತವೃತ್ತಿಯ ನಿರೋಧವಾಗಬೇಕು ಎಂದು ಯೋಗ ಶಾಸ್ತ್ರಗಳು ಹೇಳುತ್ತವೆ (ಯೋಗಶ್ಚಿತ್ತವೃತ್ತಿ ನಿರೋಧಃ- ಯೋ.ಸೂ. 1.2). ಬೆಳಕನ್ನು ಹಂಬಲಿಸುತ್ತಿರುವ ಅಲ್ಲಮನ ಚಿತ್ತವೆಲ್ಲೋ ಲಯಗೊಳ್ಳದೇ ವಿಕಲ್ಪಗೊಂಡಿರಬೇಕು, 'ಮಧುಮತ್ತ'ವಾಗಿರಬೇಕು ಎಂದು ಬೇಂದ್ರೆ ತಮ್ಮ ಪದ್ಯದಲ್ಲಿ ಅಲ್ಲಮನನ್ನು ವಿಡಂಬಿಸಿದ್ದಾರೆ. 'ಮಧುಮತ್ತ ಚಿತ್ತ ಚಕೋರ ಹೇಳುತಿದೆ ಕೇಳುತಿದೆ ಬೇರೆ ದರುಶನವೇಕೆ? ಮಾತೇ ಜ್ಯೋತಿರ್ಲಿಂಗ!' ಎಂಬ ಸಾಲುಗಳಲ್ಲಿ ಅಲ್ಲಮ ಲೋಕವನ್ನು ಪ್ರಶ್ನಿಸುತ್ತಿರುವನೋ ಅಥವಾ ಲೋಕಕ್ಕೆ ಆಜ್ಞಾಪಿಸುತ್ತಿರುವನೋ ಎಂಬ ಸಂಶಯವನ್ನು ವ್ಯಕ್ತಪಡಿಸಿದ್ದಾರೆ.

'ಅಪರಿಮಿತದ ಕತ್ತಲೆಯೊಳಗೆ ವಿಪರೀತದ ಬೆಳಕನಿಟ್ಟವರಾರೋ?' ಎಂಬ ಅಲ್ಲಮನ ಭವ್ಯ ಕಲ್ಪನೆಗೆ ಬೇಂದ್ರೆ 'ಎಷ್ಟೆ ಇರಲಿ ಅಷ್ಟೇ ಮಿಗಿಲು| ನಮ್ಮ ಕಿರಣ ನಮಗೆ ಹಗಲು| ಉಳಿದ ಬೆಳಕು ಕತ್ತಲು' ಎಂದು ತಣ್ಣಗೆ ಪ್ರತಿಕ್ರಿಯಿಸುತ್ತಾರೆ. ಅಲ್ಲಮನ ಮಹತ್ವಾಕಾಂಕ್ಷೆಯು ಕೈಗೆಟುಕದ ಶಾಶ್ವತ ಬೆಳಕನ್ನು ಸಂಪಾದಿಸುವುದಾದರೆ, ಬೇಂದ್ರೆಯ ಕಾಳಜಿಯು ಕೈಲಿರುವ ಸದ್ಯದ ಬೆಳಕನ್ನು ಜೋಪಾನ ಮಾಡಿಕೊಳ್ಳುವುದಾಗಿದೆ.

ಇದು ಬೇಂದ್ರೆ- ಅಲ್ಲಮರ ಬೆಳಕಿನ ಜಿಜ್ಞಾಸೆಯ ಒಂದು ಸಣ್ಣ ನಿದರ್ಶನವಾಗಿದೆ. ಇನ್ನು ಅನುಭಾವದ ಬವಣೆಯನ್ನು ಬದಿಗಿರಿಸಿ ಹೆಣ್ಣಿನ ಪ್ರೇಮ- ಪ್ರಣಯಗಳಿಗೆ ದೀಪಾವಳಿಯ ಬೆಳಕನ್ನು ಹಚ್ಚಿರುವ ಕವಿಗಳೂ ನಮ್ಮಲ್ಲುಂಟು. 'ಹಣತೆಯನು ಹಚ್ಚಿಬಿಡು, ಬಾಗಿಲಲಿ ಇಟ್ಟುಬಿಡು| ನಿನ್ನಿಂದ ದೀಪಾವಳಿ| ಬರುವ ಸಡಗರದಲ್ಲೆ ಮುತ್ತೊಂದ ಕೊಟ್ಟುಬಿಡು| ಕೊಡೆನೆಂದು ನಗುತ ಹೇಳಿ' (ದೀಪಾವಳಿ, ಕೆ.ಎಸ್. ನರಸಿಂಹ ಸ್ವಾಮಿ).

ಜಿ.ಎಸ್.ಶಿವರುದ್ರಪ್ಪನವರ ಪ್ರಕಾರ, ಈ ಕ್ಷಣಭಂಗುರವಾದ ಬದುಕಿನಲ್ಲಿ ಎದೆಯ ಬೆಳಕು ಉರಿಯುತ್ತಿರುವಷ್ಟು ಕಾಲ ಮಾತ್ರ ನಾವು ಮನುಷ್ಯರಾಗಿರುತ್ತೇವೆ, ಆ ಬೆಳಕು ಆರಿದೊಡನೆ ನಾವೂ ಅದರೊಂದಿಗೆ ಆರಿಹೋಗುತ್ತೇವೆ. ಆ ಕಾರಣಕ್ಕಾದರೂ ನಾವು ಹೃದಯದ ಬೆಳಕನ್ನು ಜೋಪಾನ ಮಾಡಿಕೊಳ್ಳಬೇಕಾಗಿದೆ: 'ಹಣತೆ ಹಚ್ಚುತ್ತೇನೆ ನಾನೂ| ಈ ಕತ್ತಲನು ಗೆದ್ದು ನಿಲ್ಲುತ್ತೇನೆಂಬ ಜಿದ್ದಿನಿಂದಲ್ಲ| ಲೆಕ್ಕವೇ ಇರದ ದೀಪಾವಳಿಯ ಹಡಗುಗಳೆ| ಇದರಲ್ಲಿ ಮುಳುಗಿ ಕರಗಿರುವಾಗ| ನಾನು ಹಚ್ಚುವ ಹಣತೆ ಶಾಶ್ವತವೆಂಬ ಭ್ರಾಂತಿ ನನಗಿಲ್ಲ.... ಆದರೂ ಹಣತೆ ಹಚ್ಚುತ್ತೇನೆ ನಾನೂ| ಕತ್ತಲೆಯನ್ನು ದಾಟುತ್ತೇನೆಂಬ ಭ್ರಮೆಯಿಂದಲ್ಲ| ಇರುವಷ್ಟು ಹೊತ್ತು ನಿನ್ನ ಮುಖ ನಾನು, ನನ್ನ ಮುಖ ನೀನು| ನೋಡಬಹುದೆಂಬ ಒಂದೇ ಒಂದು ಆಸೆಯಿಂದ| ಹಣತೆ ಆರಿದ ಮೇಲೆ, ನೀನು ಯಾರೋ, ಮತ್ತೆ| ನಾನು ಯಾರೋ' (ನನ್ನ ಹಣತೆ, ಗೋಡೆ).



ಬದುಕಿನ ಏಕಾಕಿತನ, ಅನಾಥಪ್ರಜ್ಞೆಗಳು ಮನುಷ್ಯನನ್ನು ವಿಹ್ವಲಗೊಳಿಸುತ್ತವೆ, ಕ್ರಮೇಣ ಅವನನ್ನು ಮೃಗವನ್ನಾಗಿಸುತ್ತವೆ. ಅಂತರಂಗದ ಬೆಳಕಾದರೂ ಮನುಷ್ಯನೊಳಗಿರುವ ಈ ಏಕಾಕಿತನವನ್ನು, ಅನಾಥ-ಪ್ರಜ್ಞೆಯನ್ನು ಕ್ಷಣಕಾಲವಾದರೂ ದೂರ ಮಾಡುತ್ತದೆ, ಮಾನವೀಯವಾಗಿ ಬದುಕುವ, ಮಾನವೀಯವಾಗಿ ಸ್ಪಂದಿಸುವ ಅವಕಾಶವನ್ನು ತಾತ್ಕಾಲಿಕವಾಗಿಯಾದರೂ ಒದಗಿಸಿಕೊಡುತ್ತದೆ.

ಇಂದು ನಾವು ಬೆಳಕಿಲ್ಲದ, ಮೃಗತ್ವವೇ ರಾರಾಜಿಸುತ್ತಿರುವ ಜಗತ್ತಿನಲ್ಲಿ ಬದುಕುತ್ತಿದ್ದೇವೆ. ನಮ್ಮ ನಾಯಕರ ಭ್ರಷ್ಟಾಚಾರ, ಮುಖವಾಡದ ನಡೆ, ದೇವರ ಹೆಸರಿನಲ್ಲಿ ದಲಿತರ ಮೇಲೆ ನಡೆದಿರುವ ಹಲ್ಲೆ, ಆಕ್ರಮಣ, ಮುಗ್ಧ ಹೆಣ್ಣುಮಕ್ಕಳ ಮೇಲಿನ ಅತ್ಯಾಚಾರ, ಬಲಾತ್ಕಾರದಂಥ ಹೀನ ಕೃತ್ಯಗಳು ಇಂದು ನಮ್ಮನ್ನು ತಲ್ಲಣಕ್ಕೆ ಈಡುಮಾಡುತ್ತಿಲ್ಲ, ಇವೆಲ್ಲ ನಮ್ಮ ಮಟ್ಟಿಗೆ ದಿನಪತ್ರಿಕೆಯ ಮಾಮೂಲಿ ಸುದ್ದಿಗಳಾಗಿಹೋಗಿವೆ. ಅದಕ್ಕಿಂತಲೂ ಮಿಗಿಲಿನ ಆತಂಕದ ಸಂಗತಿಯೆಂದರೆ, ನಾವು ಕತ್ತಲೆಯ ಬದುಕಿನಲ್ಲಿ ಬಾಳುತ್ತಿದ್ದೇವೆ ಎಂದು ತಿಳಿದಿದ್ದೂ ಜಾಣಕುರುಡರಂತೆ ವರ್ತಿಸುತ್ತಿರುವುದು. 'ತಿಳಿಯದೇ ಕತ್ತಲೆಯನ್ನು ಒಪ್ಪುವವನು ಕುರುಡುಗತ್ತಲಲ್ಲಿ ನಿಲ್ಲುತ್ತಾನೆ, ತಿಳಿದೂ ಕತ್ತಲೆಯನ್ನು ಒಪ್ಪುವವನು ಅದಕ್ಕಿಂತಲೂ ಘೋರವಾದ ತಿಮಿರಾಂಧಕಾರದಲ್ಲಿ ಮುಳುಗುತ್ತಾನೆ' (ಈಶಾವಾಸ್ಯ 9) ಎಂಬ ಉಪನಿಷದ್ವಾಣಿ ನಮ್ಮ ಈ ಕುರುಡುತನವನ್ನು ಉದ್ದೇಶಿಸಿಯೇ ನುಡಿದಂತಿದೆ.

ಇಂದು ಧಾರ್ಮಿಕವಾಗಿ ಪ್ರತಿಷ್ಠಿತರೆನಿಸಿದವರು ಅಥವಾ ಶಿಕ್ಷಕರೆಂದು ಕರೆಸಿಕೊಳ್ಳುವವರು ಪುತ್ರಿಸಮಾನರಾದ ವಿದ್ಯಾರ್ಥಿನಿಯರ ಮೇಲೆ ಲೈಂಗಿಕ ದೌರ್ಜನ್ಯ ನಡೆಸಿದ್ದಾರೆ ಎಂಬ ವರದಿಗಳು ನರಕಾಸುರನ ಅಟ್ಟಹಾಸವನ್ನು ನೆನಪಿಸುತ್ತವೆ. ನರಕಾಸುರನು ಹದಿನಾರು ಸಾವಿರ ಹೆಣ್ಣುಮಕ್ಕಳನ್ನು ಕೂಡಿಹಾಕಿದ್ದ. ಕಾಮರೂಪದ ಒಂದು ದಂತಕತೆಯ ಪ್ರಕಾರ, ಆ ಹದಿನಾರು ಸಾವಿರ ಹೆಣ್ಣುಮಕ್ಕಳು ಪೂರ್ವಜನ್ಮದಲ್ಲಿ ಅವನಿಗೆ ಹುಟ್ಟಿದ್ದ ಮಕ್ಕಳಾಗಿದ್ದರಂತೆ. ಅವರನ್ನು ತಂದೆಯಾಗಿ ಆ ಜನ್ಮದಲ್ಲಿ ಭೋಗಿಸಲು ಸಾಧ್ಯವಾಗದೇ ಅವನು ಮರುಜನ್ಮ ಪಡೆದು ಅವರನ್ನು ತನ್ನ ವಶದಲ್ಲಿ ಇರಿಸಿಕೊಂಡಿದ್ದನಂತೆ. ಶ್ರೀಕೃಷ್ಣ ಅವನನ್ನು ಸಂಹರಿಸಿ ಆ ಹೆಣ್ಣುಮಕ್ಕಳಿಗೆ ಬಿಡುಗಡೆ ನೀಡಿದುದರ ನೆನಪಾಗಿ ದೀಪಾವಳಿ ಆಚರಣೆಗೆ ಬಂದಿತು ಎಂಬುದು ಕೆಲವೆಡೆ ಇರುವ ನಂಬಿಕೆ.

ಆದರೆ ನರಕಾಸುರನ ಅಟ್ಟಹಾಸ ಅಂದಿಗೇ ಮುಗಿದಿಲ್ಲ, ಅದು ಇಂದಿಗೂ ಮುಂದುವರಿದಿದೆ. ಇಂದು ಪ್ರತಿವರ್ಷ ಸಾವಿರಾರು ಅತ್ಯಾಚಾರ ಪ್ರಕರಣಗಳು ದಾಖಲಾಗುತ್ತಿವೆ. ಆದರೆ ಅಡಿಗರೆನ್ನುವಂತೆ 'ಎಲ್ಲು ಕೃಷ್ಣನ ಕಾಪು ಕಾಣುತ್ತಿಲ್ಲ'. ಇಂದಿನ ಪುರುಷ ದುರಭಿಮಾನವು ಹೆಣ್ಣಿನ ಚೈತನ್ಯದ ಬೆಳಕಿಗೆ ಕುರುಡಾಗಿ ಅವಳನ್ನು ಭೋಗದ ವಸ್ತುವಿನಂತೆ ಬಳಸಿಕೊಳ್ಳುವ ಪ್ರವೃತ್ತಿ ಬೆಳೆಸಿಕೊಂಡಿದೆ. ಜಿಎಸ್‌ಎಸ್ ಹೇಳುವಂತೆ, ಹಣತೆಯು ಆರುವ ಮುನ್ನ ನಮ್ಮ ಮುಖಗಳ ನಿಜದರ್ಶನವಾಗದೇ, ಬರಿದೇ ಬೆಳಕಿನ ಹಬ್ಬವನ್ನು ಆಚರಿಸಿಕೊಳ್ಳುವುದು ವ್ಯರ್ಥ ಆಡಂಬರವಾಗುತ್ತದೆ, ಇನ್ನೂ ಘೋರವಾದ ತಿಮಿರಾಂಧಕಾರದಲ್ಲಿ ಮುಳುಗಿದಂತಾಗುತ್ತದೆ.

ಚುರುಮುರಿ



ಜುಟ್ಟಿಗೆ ಮಲ್ಲಿಗೆ ಹೂ

• ಸುಮಂಗಲಾ

'ಈಗಾರೂ ಅಯೋಧ್ಯೆಗೆ ಹೋಗೂಣು, ಟಿಕೀಟು ತೆಗಿ' ಅಂತ ಬೆಕ್ಕಣ್ಣ ವರಾತ ಹಚ್ಚಿತ್ತು.

'ಈಗೆದಕ್ಕಲೇ... ಮನ್ಯಾಗ ಹಬ್ಬಾ ಮಾಡೂದು ಬಿಟ್ಟು ತಿರುಗಾಡಕ್ಕೆ ಹೋಗೂಣೇನು? ತಿರುಗಲಾಡಿ ತಿಪ್ಪ' ಎಂದು ಬೈದೆ.

'ಗಿನ್ನೆಸ್ ರೆಕಾರ್ಡ್ ವಳಗ ನಮ್ಮ ಹೆಸರೂ ಸೇರತೈತಿ, ಮೋದಿಮಾಮನೂ ಬರತಾನಂತ'.

ನಾ ಕಿವಿಕೇಳದಂತೆ ಕೂತೆ.

'ಈ ಸಲ ದೀಪಾವಳಿ ದಿನ ಸರಯೂ ನದಿ ತೀರದಲ್ಲಿ 12 ಲಕ್ಷ ಹಣತೆ ಹಚ್ಚಿ, ಅರ್ಧ ಗಂಟೆ ದೀಪ ಉರಿಸಿ, ಗಿನ್ನೆಸ್ ರೆಕಾರ್ಡ್ ಮಾಡತೀವಿ ಅಂತ ಯೋಗಿಮಾಮ ಹೇಳ್ಯಾನ. ಅವರ ಜೋಡಿ ಸೇರಿ ದೀಪ ಹಚ್ಚಿದರ, ನಮ್ಮ ಹೆಸರೂ ರೆಕಾರ್ಡ್ ವಳಗ ಸೇರತೈತಿ' ಸುದ್ದಿ ತೋರಿಸಿತು.

'12 ಲಕ್ಷ ಹಣತೆ, ಅರ್ಧ ಗಂಟೆ ಉರೀಬಕು ಅಂದ್ರ ಕನಿಷ್ಠ ಒಂದೊಂದು ದೀಪಕ್ಕೆ ನಾಕೈದು ಚಮಚ ಎಣ್ಣೆ ಬೇಕಿಲ್ಲೋ? ಅಂದ್ರ ಇಪ್ಪತ್ತೈದು-ಮೂವತ್ತು ಎಂಎಲ್ ಎಣ್ಣೆ, ಅಷ್ಟು ಹಣತೆಗೆ ಕಡಿಮೆ ಅಂದ್ರೂ 35 ಸಾವಿರ ಲೀಟರ್ ಎಣ್ಣೆ ಬೇಕು. ಒಂದು ಲೀಟರ್ ಎಣ್ಣೆಗೆ 125 ರೂಪಾಯಿ ಅಂತ ಹಿಡಿದ್ರೂನೂ 45 ಲಕ್ಷ ರೂಪಾಯಿ ಬರೀ ಎಣ್ಣೆ ಬಾಬತ್ತು ಆತಿಲ್ಲೋ?' ನನ್ನ ಲೆಕ್ಕಾಚಾರ.

'ಹಬ್ಬ ಅಂದಮ್ಯಾಗೆ ಖರ್ಚುವೆಚ್ಚ ಇರೂದೆ. ದುಡಿಯೂದು ಎದಕ್ಕ ಮತ್ತ? ಈ ಸಲ ಮೈಸೂರು ದಸರಾಗೆ ದೀಪಾಲಂಕಾರ ಎಷ್ಟ್ ಛಲೋ ಮಾಡಿದ್ದರು. ಲಕ್ಷಗಟ್ಟಲೆ ಪ್ರವಾಸಿಗರು ಬಂದಿದ್ದರಂತ, ಕೊರೊನಾ ಕಾಲದಾಗೆ ನೆಲಕಚ್ಚಿದ್ದ ಪ್ರವಾಸೋದ್ಯಮ ಎದ್ದು ನಿಲ್ಲೂಹಂಗೆ ಆತಿಲ್ಲೋ?'

'ಹೌದು, ಆದರ ದೀಪಾಲಂಕಾರಕ್ಕೆ ಐದೂವರೆ ಕೋಟಿ ಖರ್ಚಾಗೈತಲ್ಲ, ಅದನ್ನು ಯಾರ ತಲಿಗೆ ಕಟ್ಟತಾರ? ನಮ್ಮ ದೇಶ ಹಸಿವೆ ಸೂಚ್ಯಂಕದಾಗೆ ಎದಕ್ಕ ಅಷ್ಟು ಕೆಳಗಿನ ಸ್ಥಾನದಾಗೆ ಐತಂತ ಗೊತ್ತಾತಿಲ್ಲೋ?'

'ಹೊಟ್ಟೆಗೆ ಹಿಟ್ಟಿಲ್ಲದಾಗ ಜುಟ್ಟಿಗೆ ಮಲ್ಲಿಗೆ ಹೂ ಅಂತ ಗಾದೆಯೇನೋ ಐತಿ. ಆದರೆ ಅದ್ರಿಂದ ಮಲ್ಲಿಗೆ ಬೆಳೆಯೋರಿಗೆ ಛಲೋ ವ್ಯಾಪಾರವಾಗತೈತೆ' ಎಂದು ಹೊಸ ವಾದ ಮುಂದಿಟ್ಟಿತು!

ಸಂಗತ

ಬೆಳಗಲಿ ದೀಪ, ತಗ್ಗಲಿ ಹಾವಳಿ

ಜ್ಞಾನಪ್ರತೀಕವಾದ ದೀಪಾವಳಿಯು ಶಬ್ದ ಮತ್ತು ಪರಿಸರ ಮಾಲಿನ್ಯದ ರಂಪ ಸೃಷ್ಟಿಸುವ ಪಟಾಕಿಗಳ ಹಾವಳಿ ಆಗುವುದು ಉಲ್ಲಾಸದ ಅಣಕ

• ಯೋಗಾನಂದ


ಮನುಷ್ಯ ಮತ್ತೆ ಮತ್ತೆ ಅದದೇ ತಪ್ಪು ಮಾಡುವುದರಿಂದ ಇತಿಹಾಸ ಮರುಕಳಿಸುತ್ತದಂತೆ. ಈ ಮಾತು ಅಕ್ಷರಶಃ ವರ್ಷ ವರ್ಷವೂ ಆಚರಿಸಲಾಗುವ ದೀಪಾವಳಿಗೆ ಹೇಳಿ ನುಡಿಸಿದಂತಿದೆ. ಸಿಡಿಮದ್ದು ಬೇಡ, ಹಣತೆ ಹಚ್ಚಿ ದೀಪಾವಳಿ ಆಚರಿಸಿ ಎಂದು ಹಿತವಚನಗಳ ಮಹಾಪೂರವೇ ಹರಿದಿರುತ್ತದೆ. ಆದರೆ ನರಿಯ ಕೂಗು ಗಿರಿಗೆ ಮುಟ್ಟಬೇಕಲ್ಲ. ಆಸ್ಪತ್ರೆಗಳಲ್ಲಿ ಅವೇ ಸರದಿ ಸಾಲುಗಳು, ಬೆಂಕಿ ಕೈ, ಮೈ ಸುಟ್ಟಿತು, ಕಣ್ಣಿಗೆ ಕಿಡಿ ಹಾರಿತು, ಉಸಿರುಗಟ್ಟಿತು, ಕಿವಿ ಮಂದವಾಯಿತು... ಅಂಥದ್ದೇ ಪ್ರಲಾಪಗಳು.

ಅನಿಷ್ಟದ ವಿರುದ್ಧ ಜಯ ಸಾರುವ ದೀಪಾವಳಿ ಭಾರತಕ್ಕಷ್ಟೇ ಅಲ್ಲ ಜಗತ್ತೇ ಸಡಗರಿಸುವ ಬೆಳಕಿನ ಉತ್ಸಾಹ. ಈ ಜಾಗತಿಕ ಲವಲವಿಕೆಯು ಹಣತೆಗೆ ಸೀಮಿತವಾದರೆ ಸೊಗಸು. ಶಬ್ದಾಸುರ ಮೆರೆದರೆ ಅಧ್ವಾನ. ಪಟಾಕಿಗಳಲ್ಲಿ ಕ್ಯಾನ್ಸರ್‌ಗೆ ಕಾರಣವಾಗಬಲ್ಲ ಅಪಾಯಕಾರಿ ರಾಸಾಯನಿಕಗಳು ಇರುತ್ತವೆ. ಪಟಾಕಿಗಳು ಸಿಡಿದಾಗ ವಿಷಾನಿಲಗಳು ವಾತಾವರಣ ಸೇರುತ್ತವೆ. ಮನುಷ್ಯನಿಗಷ್ಟೇ ಅಲ್ಲ, ಪ್ರಾಣಿ, ಪಕ್ಷಿಗಳಿಗೆ ಗಾಯ, ಉರಿತ ತಪ್ಪಿದ್ದಲ್ಲ. ಹಿರಿಯರಿಗಿಂತ ಮಕ್ಕಳೇ ಹೆಚ್ಚಾಗಿ ಪಟಾಕಿ ಸಿಡಿಸುವುದರಿಂದ ಅಪಾಯಕ್ಕೆ ಹೆಚ್ಚಾಗಿ ಗುರಿಯಾಗುವವರು ಅವರೇ. ಥಳಥಳ ಕಿಡಿಗಳು ಮೇಲ್ನೋಟಕ್ಕೆ ರಂಗು. ಆದರೆ ಆ ರಂಗು ರಂಗಿನ ಜ್ವಾಲೆಗಳಲ್ಲಿ ಅಡಗಿರುತ್ತವೆ ಮಾರಕ ಬೇರಿಯಂ, ತಾಮ್ರ, ಕಬ್ಬಿಣದಂತಹ ಲೋಹಗಳು. ಮನುಷ್ಯರಿಗಿಂತ ಬೆಕ್ಕು, ನಾಯಿಗೆ ನಾಲ್ಕು ಪಟ್ಟು ಅಧಿಕ ಶ್ರವಣ ಶಕ್ತಿ. ನಾವು ಕೇಳಲಾಗದ್ದು ಅವಕ್ಕೆ ಕೇಳುತ್ತದೆ. ದಿಢೀರನೆ ಸದ್ದಾಗಿ ಹೊಗೆ ಮುತ್ತಿದಾಗ ಮೂಕಜೀವಿಗಳು ಭಯದಿಂದ ಆವಾಸ ತೊರೆಯುತ್ತವೆ, ಸ್ವರಕ್ಷಣೆಗೆ ದಿಕ್ಕಾಪಾಲಾಗಿ ಎಲ್ಲೆಂದರಲ್ಲಿಗೆ ಧಾವಿಸುತ್ತವೆ. ನಮಗೋ ಹಿಗ್ಗಿನ ಹಬ್ಬ. ಬದುಕಬಿಟ್ಟರೆ ಅದೇ ಅವಕ್ಕೆ ಸಂಭ್ರಮ.

ದೀಪಾವಳಿ ಎಂದರೆ ಜ್ಞಾನಪ್ರತೀಕವಾದ ದೀಪಗಳ ಸಾಲು. ಅದು ಶಬ್ದ ಮತ್ತು ಪರಿಸರ ಮಾಲಿನ್ಯದ ರಂಪ ಸೃಷ್ಟಿಸುವ ಪಟಾಕಿಗಳ ಹಾವಳಿ ಆಗುವುದು ಉಲ್ಲಾಸದ ಅಣಕ. ದೀಪದ ಹಬ್ಬದ ಬದಲು ಸದ್ದಿನ ಹಬ್ಬವೆ? ಒಂದಕ್ಕಿಂತ ಒಂದು ಜೋರು ಪೈಪೋಟಿಯ ಸದ್ದಿನಿಂದ ಆಡಂಬರ, ಅಂತಸ್ತು ತೋರಿಕೆ ಎಷ್ಟು ಸರಿ? ನಾವು ಹಣತೆಗಷ್ಟೇ ಮಣೆ ಹಾಕುತ್ತೇವೆ, ಸದ್ದಿಗಲ್ಲ ಎಂದು ಒಂದು ಕುಟುಂಬ ನಿರ್ಧರಿಸುತ್ತದೆ ಅನ್ನಿ. ಆಗ ಒಂದು ಕಿರು 'ವಿಷ ಮೋಡ' ರಚನೆ ತಪ್ಪೀತು, ಅಷ್ಟರ ಮಟ್ಟಿಗೆ ಹವಾಮಾನ ಏರುಪೇರಿಗೆ ಹಾಗೂ ಭೂಮಿ ಕಾವೇರುವುದಕ್ಕೆ ಕಡಿವಾಣ ಸಹ!

ಒಂದು 'ಹಾವಿನಗುಳಿಗೆ' 9 ಸೆಕೆಂಡ್ ಉರಿದು 460 ಸಿಗರೇಟುಗಳು ಸುಟ್ಟಷ್ಟು ಪ್ರಮಾಣದ ಹೊಗೆ ಕಾರುವುದು. ಒಂದು 'ಹೂಬಾಣ' ಅಥವಾ 'ಭೂಚಕ್ರ' 68 ಸಿಗರೇಟುಗಳ ಹೊಗೆಗೆ ಕಾರಣವಾಗುತ್ತದೆ. ಒಂದು 'ರಾಕೆಟ್' ಹಾರಿಸುವುದೆಂದರೆ ಗಾಳಿಗೆ ದೂಳು ಮತ್ತು ಕಲುಷಿತ ಪದಾರ್ಥಗಳನ್ನು ನಾವೇ ಕೈಯಾರೆ ಜಮೆ ಮಾಡಿದಂತೆ. ಮತಾಪು, ಸುರುಸುರು ಬತ್ತಿಯಿಂದ ಹೊತ್ತಿಸಿದವರಿಗಿಂತ ಅಕ್ಕಪಕ್ಕದವರೇ ಬಾಧಿತರು. ಹಸಿರು ಪಟಾಕಿಗಳೂ ಸುರಕ್ಷಿತವಲ್ಲ. ಉಳಿದ ಪಟಾಕಿಗಳಲ್ಲಿರುವಷ್ಟರ ಶೇಕಡ 30ರಷ್ಟು ಮಾಲಿನ್ಯಕಾರಕಗಳು ಅವುಗಳಲ್ಲಿ ಇದ್ದೇ ಇರುತ್ತವೆ. ಒಂದೇ ಒಂದು ಪಟಾಕಿ 90ರಿಂದ 130 ಡೆಸಿಬಲ್‌ಗಳಷ್ಟು ಸದ್ದು ಉತ್ಪಾದಿಸುತ್ತದೆ. ಒಂದು ಡೆಸಿಬಲ್ ಅಂದರೆ ನಮ್ಮ ಕಿವಿ ಕೇಳಬಲ್ಲ ಕನಿಷ್ಠ ಸದ್ದು. ಮನುಷ್ಯ 80 ಡೆಸಿಬಲ್‌ಗೂ ಹೆಚ್ಚಿನ ಸದ್ದು ಸಹಿಸಲಾರ. ಪಟಾಕಿಗಳು ಸೃಷ್ಟಿಸುವ ರಾದ್ಧಾಂತಗಳನ್ನು ವಿಶ್ವ ಆರೋಗ್ಯ ಸಂಸ್ಥೆ ತೀವ್ರವಾಗಿಯೇ ಪರಿಗಣಿಸಿದೆ. ಪಟಾಕಿ ಸಿಡಿಸುವುದು ಹಣ ತೆತ್ತು ಉಸಿರಾಟದಲ್ಲಿ ವ್ಯತ್ಯಯ ತಂದುಕೊಂಡಂತೆ!

ಪಟಾಕಿ ನಿಷೇಧಿಸಿದರೆ ತಮಿಳುನಾಡಿನಲ್ಲಿ ಅದರಲ್ಲೂ ವಿಶೇಷವಾಗಿ ಶಿವಕಾಶಿಯಲ್ಲಿ ಪ್ರಧಾನವಾಗಿ ನೆಲೆಯೂರಿರುವ ವಾರ್ಷಿಕ ₹ 3,000 ಕೋಟಿ ಮೊತ್ತದ ವಹಿವಾಟಿನ ಸಿಡಿಮದ್ದಿನ ಉದ್ಯಮದ ಗತಿಯೇನು? 2.5 ಲಕ್ಷ ನೌಕರರ ಜೀವನೋಪಾಯ ಹೇಗೆ? ಈ ಪ್ರಶ್ನೆಗಳಿಗೆ ಉತ್ತರ ಸ್ಪಷ್ಟವಿದೆ. ಜನರ ಆರೋಗ್ಯ, ನೆಮ್ಮದಿಗೆ ಮೊದಲ ಆದ್ಯತೆಯಿರಬೇಕೆ ಹೊರತು ಉದ್ಯೋಗಾವಕಾಶಕ್ಕೆ ಅಲ್ಲ. ಮೇಲಾಗಿ ಈ ಉದ್ಯಮದಲ್ಲಿ ಬಾಲಕರೇ ಹೆಚ್ಚಾಗಿ ದುಡಿಯುತ್ತಿದ್ದಾರೆ ಎನ್ನುವುದನ್ನು ಗಮನಿಸಬೇಕಿದೆ.



ಹಬ್ಬದ ಸಂಭ್ರಮವೆಂದರೆ ಯಾರೂ ಮೂಗು ಮುರಿಯರು. ಆದರೆ ಅದರ ಆಚರಣೆಯಲ್ಲಿ ಪರಿಸರಸ್ನೇಹ ವಿಜೃಂಭಿಸಬೇಕು. ವಸತಿ ಸ್ಥಳದಿಂದ ದೂರವಿರುವ ವಿಶಾಲ ಬಯಲಿನಲ್ಲಿ ಸರ್ಕಾರ ಅಥವಾ ಸಂಘ ಸಂಸ್ಥೆಗಳು ಬಾಣ ಬಿರುಸುಗಳ ಪ್ರದರ್ಶನ ಏರ್ಪಡಿಸಬಹುದು. ಒಂದೇ ಕಲ್ಲಿನಲ್ಲಿ ಎರಡು ಹಕ್ಕಿ ಹೊಡೆದಂತೆ ಜನಮಾನಸದಲ್ಲಿ ಪುಳಕ ಮತ್ತು ಸುರಕ್ಷತೆ.

ಶುದ್ಧ ಪರಿಸರವು ಮನುಷ್ಯ ಮತ್ತು ಪ್ರಾಣಿ-ಪಕ್ಷಿಗಳ ಮೂಲಭೂತ ಹಕ್ಕು. ಜೀವವಿದ್ದರೆ ತಾನೆ ಜೀವನದ ಮಾತು? ವಾದ ಪ್ರತಿವಾದಗಳಿಗೆ ಕೊನೆಯಿಲ್ಲ. ಸಿಡಿಮದ್ದು ತಯಾರಿಸುವ ನೌಕರರಿಗೆ ಪುನರ್ವಸತಿ ಕಲ್ಪಿಸುವುದು ಅಸಾಧ್ಯವೇನಲ್ಲ. ದೀಪಾವಳಿಗೆ ನಾಲ್ಕು ದಿನಗಳ ಮುನ್ನ ಪಟಾಕಿ ಮಳಿಗೆಗಳು ತೆರೆಯುವುದೇನು? 'ನೋಡಿ, ದಿನದ 24 ತಾಸೂ ಸುಟ್ಟ ಗಾಯಗಳಿಗೆ ಚಿಕಿತ್ಸೆ ಲಭ್ಯ' ಎಂದು ಆಸ್ಪತ್ರೆಗಳು ಸಾರುವುದೇನು? ಇದು ಮಗು ಚಿವುಟಿ, ತೊಟ್ಟಿಲು ಆಡಿಸಿದಂತೆ! ಪಟಾಕಿ ನಿಷೇಧಿಸುವ ದೃಢ ಸಂಕಲ್ಪ ಪ್ರಭುತ್ವಕ್ಕೆ ಅಗತ್ಯ.

ವಾಚಕರ ವಾಣಿ

ದೇಗುಲಗಳಲ್ಲಿ ಗೋಪೂಜೆ: ಸರ್ಕಾರ ಖರ್ಚು ಭರಿಸಲಿ

ಧಾರ್ಮಿಕ ದತ್ತಿ ಇಲಾಖೆ ವ್ಯಾಪ್ತಿಯಲ್ಲಿರುವ ದೇವಸ್ಥಾನಗಳಲ್ಲಿ ಇದೇ 26ರ ಬಲಿಪಾಡ್ಯಮಿಯಂದು ಗೋಪೂಜೆ ನಡೆಸಲು ಇಲಾಖೆ ಆದೇಶ ನೀಡಿದೆ. ಹಿಂದೂ ಧರ್ಮದ ಗೋಪೂಜಾ ವಿಧಿವಿಧಾನಗಳ ಸಂಪ್ರದಾಯವನ್ನು ಉಳಿಸಿ ಬೆಳೆಸುವ ದಿಸೆಯಲ್ಲಿ ಇಲಾಖೆಯ ಈ ಕ್ರಮ ಸಾಧುವಾದುದೇ. ಆ ದಿನ ಗೋವುಗಳಿಗೆ ಸ್ನಾನ ಮಾಡಿಸಿ ದೇವಾಲಯಗಳಿಗೆ ಕರೆತಂದು ಅರಿಸಿನ, ಕುಂಕುಮ, ಹೂವುಗಳಿಂದ ಅಲಂಕರಿಸಬೇಕು; ಅಕ್ಕಿ, ಬೆಲ್ಲ, ಬಾಳೆಹಣ್ಣು, ಸಿಹಿಯನ್ನು ಹಸುಗಳಿಗೆ ನೀಡಿ ಪೂಜಿಸಬೇಕೆಂದು ಆದೇಶ ತಿಳಿಸಿದೆ. ಇದರೊಂದಿಗೆ ದೇವಸ್ಥಾನಗಳಿಂದ ಭಕ್ತಾದಿಗಳಿಗೆ ಪ್ರಸಾದ ವಿನಿಯೋಗವೂ ಆಗಬೇಕಾಗಿದೆ.

ಆದರೆ ಇವುಗಳಿಗಾಗಿ ದೇವಸ್ಥಾನಗಳಿಗೆ ತಗಲುವ ಖರ್ಚು ವೆಚ್ಚಗಳ ಪಾಡೇನು? ದೊಡ್ಡ ದೊಡ್ಡ ದೇವಾಲಯಗಳು ಮತ್ತು ನಗರಗಳ ಕೆಲವು ದೇವಸ್ಥಾನಗಳು ಈ ಆಚರಣೆಯನ್ನು ಸುಲಭವಾಗಿ ನಡೆಸಿಕೊಂಡು ಹೋಗಬಲ್ಲವು. ಆದರೆ ಇಲಾಖೆಗೆ ಸೇರಿದ ಸಾವಿರಾರು ದೇವಸ್ಥಾನಗಳಿಗೆ ದಿನನಿತ್ಯದ ಖರ್ಚನ್ನು ತೂಗಿಸಿಕೊಂಡು ಹೋಗುವುದೇ ಕಷ್ಟವಾಗಿದೆ. ಇನ್ನು ಅವು ಇಂತಹ ವಿಶೇಷ ಪೂಜೆಗಳನ್ನು ಹೇಗೆ ನಿರ್ವಹಿಸುತ್ತವೆ? ಇಂತಹ ಆದೇಶಗಳನ್ನು ಹೊರಡಿಸುವಾಗ ಅವುಗಳ ಖರ್ಚಿಗೆಂದು ಹಣವನ್ನೂ ಒದಗಿಸಬೇಕಾದುದು ಇಲಾಖೆಯ ಕರ್ತವ್ಯ. ಸಚಿವೆ ಇತ್ತ ಗಮನಹರಿಸುವರೇ?

ಗಾಯತ್ರಿ ದೇವಿ, ಬೆಂಗಳೂರು

ಕಾರಣ ಪರಿಶೀಲಿಸಲು ಕಾಲಹರಣ

ಅಧಿಕಾರದಲ್ಲಿದ್ದಾಗ ವ್ಯಾಪ್ತಿ ಮೀರಿ ಟೆಂಡರ್‌ಗಳನ್ನು ಅನುಮೋದಿಸುವ ಮೂಲಕ ಸರ್ಕಾರದ ಬೊಕ್ಕಸಕ್ಕೆ ಕೋಟ್ಯಂತರ ರೂಪಾಯಿ ನಷ್ಟ ಉಂಟುಮಾಡಿದ್ದ ಇಬ್ಬರು ಬಿಬಿಎಂಪಿ ಅಧಿಕಾರಿಗಳ ವಿರುದ್ಧ ಶಿಸ್ತು ಕ್ರಮಕ್ಕೆ 2014ರಲ್ಲಿ ಸಿಐಡಿ ಮಾಡಿದ್ದ ಶಿಫಾರಸಿಗೆ, ಕಾಲಮಿತಿ ಮೀರಿರುವ ಕಾರಣ ಈ ಶಿಸ್ತುಕ್ರಮ ಸಾಧ್ಯವಿಲ್ಲವೆಂದೂ, ಆರ್ಥಿಕ ನಷ್ಟವಾಗಿದ್ದರೆ ಸಿವಿಲ್ ದಾವೆ ಹೂಡಬಹುದೆಂದೂ ಸಿಬ್ಬಂದಿ ಮತ್ತು ಆಡಳಿತ ಸುಧಾರಣಾ ಇಲಾಖೆಯು 8 ವರ್ಷಗಳ ನಂತರ ಉತ್ತರಿಸಿದೆ (ಪ್ರ.ವಾ., ಅ. 22). 'ಕಾಲಮಿತಿ ಮೀರಿರುವ' ಕಾರಣವನ್ನು ಪರಿಶೀಲಿಸುವ ನೆಪದಲ್ಲಿ ಕಾಲಹರಣ ಮಾಡಲು ಸಂಬಂಧಿಸಿದ ಇಲಾಖೆಗೆ ಎಂಟು ವರ್ಷ ಬೇಕಾಗುತ್ತದೆ! ಈ ಅಧಿಕಾರಿಗಳು ಪ್ರಭಾವಶಾಲಿಗಳಾಗಿ ಇದ್ದುದರಿಂದಲೇ, ಅವರ ರಕ್ಷಣೆಗಾಗಿಯೇ ಈ ವಿಳಂಬ ನೀತಿ ಅನುಸರಿಸಲಾಗಿದೆಯೆಂಬುದು ಮೇಲ್ನೋಟಕ್ಕೇ ವೇದ್ಯವಾಗುತ್ತದೆ. ಸಣ್ಣ ಮೀನುಗಳು ಮಾತ್ರ ಬಲೆಯೊಳಗೆ ಸಿಲುಕಿಕೊಳ್ಳುತ್ತವೆ, ದೊಡ್ಡವು ಬಲೆಯನ್ನೇ ಹರಿದು ಹೊರಬರಬಲ್ಲವು ಎಂಬುದಕ್ಕೆ ಇದು ಉತ್ತಮ ಉದಾಹರಣೆ.

ಸಿವಿಲ್ ದಾವೆ ಹೂಡಿ ಸರ್ಕಾರದ ಬೊಕ್ಕಸಕ್ಕಾದ ನಷ್ಟವನ್ನು ವಸೂಲಿ ಮಾಡಿದ ಮಾತ್ರಕ್ಕೆ ತಪ್ಪಿತಸ್ಥರಿಗೆ ಶಿಕ್ಷೆಯಾದಂತಾಗುವುದಿಲ್ಲ. ಇಷ್ಟಕ್ಕೂ ಸಿವಿಲ್ ದಾವೆ ಹೂಡುವುದನ್ನು ಅವರು ಪ್ರಭಾವ ಬೀರಿ ತಡೆಯಲಾರರೆಂಬ ಖಾತರಿಯೂ ಇಲ್ಲ. ಇವರಿಗಷ್ಟೇ ಅಲ್ಲ ಪರಿಶೀಲನೆಯ ನೆಪದಲ್ಲಿ ಅವರಿಗೆ ನೆರವಾಗಲು ವಿಳಂಬ ನೀತಿ ಅನುಸರಿಸಿದವರಿಗೂ ಶಿಕ್ಷೆಯಾಗಬೇಕು. ಆಗ ಮಾತ್ರ, ಸರ್ಕಾರವು ಭ್ರಷ್ಟರನ್ನು ಸಹಿಸುವುದಿಲ್ಲವೆಂಬ ವಿಶ್ವಾಸ ಸಾರ್ವಜನಿಕರಲ್ಲಿ ಮೂಡೀತು.

ಸ್ವಾತಿ ಪಿ., ಬೆಂಗಳೂರು

ಪ್ರಬುದ್ಧ ರಾಜಕೀಯ ನಡೆ

ಅಧಿಕಾರಕ್ಕೆ ಬಂದ ಕೆಲವೇ ದಿನಗಳಲ್ಲಿ, ತಮ್ಮ ಮೇಲೆ ಗುರುತರವಾದ ಆಪಾದನೆ ಬಂದಿದ್ದೇ ಕಾರಣವಾಗಿ ಬ್ರಿಟನ್ ಪ್ರಧಾನಿ ಲಿಜ್ ಟ್ರಸ್ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಿದ್ದಾರೆ, ಯಾವುದೇ ಅವಕಾಶವಾದಿ ನೆಪವನ್ನೂ ಒಡ್ಡದೆ. ಇಂತಹ ಒಂದು ನಡೆಯನ್ನು ಬಹುಶಃ ನಮ್ಮಲ್ಲಿ ಊಹಿಸಿಕೊಳ್ಳುವುದೂ ಸಾಧ್ಯವಿಲ್ಲ. ಹೌದು, ತೆರಿಗೆ ನೀತಿಯ ವಿಚಾರದಲ್ಲಿ ದೊಡ್ಡ ತಪ್ಪುಗಳಾದವು ಎಂದು ಒಪ್ಪಿಕೊಂಡಿದ್ದಲ್ಲದೆ, ಅವನ್ನು ಸರಿಪಡಿಸಲು ಕ್ರಮ ಕೈಗೊಳ್ಳುವುದಾಗಿ ಅವರು ಹೇಳಿದ್ದರು. ಆದರೆ, ಅದರ ಪರಿಣಾಮಗಳು ಗಂಭೀರವಾದಾಗ, ತಮ್ಮ ಪಕ್ಷದ ಸಂಸದರಿಂದಲೇ ಒತ್ತಡಕ್ಕೆ ಒಳಗಾಗಿ ಪದತ್ಯಾಗ ಮಾಡಿರುವುದು ರಾಜಕೀಯವಾಗಿ ಅತ್ಯಂತ ಪ್ರಬುದ್ಧ ನಡೆ. ಅದಕ್ಕಿಂತ ಹೆಚ್ಚಾಗಿ, ನಮ್ಮ ದೇಶದ ರಾಜಕಾರಣಿಗಳಿಗೆ ಇದು ಅನುಕರಣೀಯ ನಡೆಯಾಗಬೇಕು.

ಎಂ.ಎಸ್.ರಘುನಾಥ್, ಬೆಂಗಳೂರು

ಹೊಸ ಬಗೆಯ 'ಉಡುಗೊರೆ'!

ದೀಪಾವಳಿ ಹಬ್ಬದ ಕಾರಣ, ಅ. 27ರವರೆಗೆ ಸಂಚಾರ ನಿಯಮ ಉಲ್ಲಂಘಿಸಿದರೆ ದಂಡ ವಿಧಿಸದಂತೆ ಗುಜರಾತ್ ಸರ್ಕಾರವು ಪೊಲೀಸರಿಗೆ ನಿರ್ದೇಶನ ನೀಡಿದೆ (ಪ್ರ.ವಾ., ಅ. 23). ನಮ್ಮಲ್ಲಿ ದೀಪಾವಳಿಗೆ ವಾಣಿಜ್ಯ ವ್ಯವಹಾರಗಳ ಅಭಿವೃದ್ಧಿಗಾಗಿ ಬಗೆಬಗೆಯ ಆಶ್ವಾಸನೆ ಹಾಗೂ ಉಡುಗೊರೆಗಳನ್ನು ಕೊಟ್ಟರೆ, ಗುಜರಾತ್ ಸರ್ಕಾರ ಹೊಸ ಬಗೆಯ 'ಉಡುಗೊರೆ' ದಯಪಾಲಿಸಿದೆ. ಇದರಿಂದ ಎಷ್ಟೆಲ್ಲ ಅಪಘಾತಗಳು ಉಂಟಾಗುತ್ತವೋ ನಂತರ ಫಲಿತಾಂಶ ತಿಳಿಯುತ್ತದೆ. ಸಂಚಾರ ಉಲ್ಲಂಘನೆಯನ್ನೇ ರೂಢಿ ಮಾಡಿಕೊಂಡಿರುವ ಹಲವಾರು ಮಂದಿಗೆ ಇದೊಂದು ಸುಸಮಯ.

ಬಾಲಕೃಷ್ಣ ಎಂ.ಆರ್., ಬೆಂಗಳೂರು

ಇದರಲ್ಲಿ ಯಾವುದು ಸತ್ಯ?

ಬಹುಜನರ ವಿರೋಧವನ್ನು ಪರಿಗಣಿಸಿ ಅಂತೂ ಸರ್ಕಾರವು ಸರ್ಕಾರಿ ಶಾಲೆಗಳ ಮಕ್ಕಳ ಪೋಷಕರಿಂದ ತಿಂಗಳಿಗೆ ₹ 100 ದೇಣಿಗೆ ಸಂಗ್ರಹಿಸುವ ಆದೇಶವನ್ನು ಹಿಂಪಡೆದಿದೆ. ಇದು ಸ್ವಾಗತಾರ್ಹ. ಆದರೆ 'ಈ ಕುರಿತು ಆಯುಕ್ತರು ಸುತ್ತೋಲೆ ಹೊರಡಿಸಿದ್ದಾರೆ. ಇದರಲ್ಲಿ ನನ್ನದಾಗಲೀ ಮುಖ್ಯಮಂತ್ರಿಯದ್ದಾಗಲೀ ಪಾತ್ರವಿಲ್ಲ' ಎಂದು ಶಿಕ್ಷಣ ಸಚಿವ ಬಿ.ಸಿ.ನಾಗೇಶ್ ಅವರು ನೀಡಿರುವ ಹೇಳಿಕೆ ಅಚ್ಚರಿ ಮೂಡಿಸುತ್ತದೆ! ಇಂಥ ಗಂಭೀರವಾದ ವಿಷಯದಲ್ಲಿ ಸಂಬಂಧಪಟ್ಟ ಸಚಿವರು ಅಥವಾ ಮುಖ್ಯಮಂತ್ರಿಯವರ ಗಮನಕ್ಕೆ ತಾರದೇ ಒಬ್ಬ ಅಧಿಕಾರಿ ಏಕಾಏಕಿ ನಿರ್ಧಾರ ತೆಗೆದುಕೊಂಡು ಆದೇಶ ಹೊರಡಿಸುತ್ತಾರೆಂದರೆ ಅದಕ್ಕಿಂತ ನಾಚಿಕೆಗೇಡು ಇನ್ನೊಂದಿಲ್ಲ. ಅಕಸ್ಮಾತ್ ಹಾಗೇನಾದರೂ ಆಗಿದ್ದರೆ ಆ ಅಧಿಕಾರಿಯ ವಿರುದ್ಧ ಕ್ರಮ ತೆಗೆದುಕೊಳ್ಳದಿರುವಷ್ಟು ಅಸಹಾಯಕ ಸರ್ಕಾರ ಇದೆ ಎಂದಾದರೆ ಅದಕ್ಕಿಂತ ದೌರ್ಭಾಗ್ಯ ಇನ್ನೊಂದಿಲ್ಲ.

ಒಂದೋ ಈ ಸರ್ಕಾರ ಈ ಬಗ್ಗೆ ಸುಳ್ಳು ಹೇಳುತ್ತಿರಬೇಕು, ಇಲ್ಲ ಸರ್ಕಾರವು ತನ್ನ ಅಧಿಕಾರಿಗಳನ್ನು ಹಿಡಿತದಲ್ಲಿ ಇಟ್ಟುಕೊಳ್ಳಲಾರದಷ್ಟು ದುರ್ಬಲವಾಗಿರಬೇಕು. ಇದರಲ್ಲಿ ಯಾವುದು ಸತ್ಯ?!

ಚಾವಲ್ಮನೆ ಸುರೇಶ್ ನಾಯಕ್, ಹಾಲ್ಮತ್ತೂರ್, ಕೊಪ್ಪ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor: Sudesha Doddapalya (Responsible for selection of news under the PRB Act). Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in. Phone: 080 - 45557333, Editorial: 080 - 45557251, Circ: 1800-425-8009, Advt: 1800-425-8008. Also printed at Hubballi-Dharwad, Mangaluru, Kalaburagi, Davanagere, Mysuru and Hosapete.

ಜಿನ್‌ಪಿಂಗ್ ಏಕಚಕ್ರಾಧಿಪತ್ಯ


ಚೀನಾದ ಕಮ್ಯುನಿಸ್ಟ್ ಪಕ್ಷದ ಪಾಲಿಟ್ ಬ್ಯೂರೊ ಸದಸ್ಯರ ಸಭೆ ಚಿತ್ರ:ಷಿನ್ಹುವಾ ನ್ಯೂಸ್

ಪ್ರಜಾವಾಣಿ ವಾರ್ತೆ

ಚೇರ್ಮನ್ ಮಾವೊ ಎಂದೇ ಜನಪ್ರಿಯರಾಗಿದ್ದ ಮಾವೊ ಜೆಡಾಂಗ್ ಅವರು 1949ರಲ್ಲಿ ಪೀಪಲ್ಸ್ ರಿಪಬ್ಲಿಕ್ ಆಫ್ ಚೀನಾವನ್ನು ಸ್ಥಾಪಿಸಿದಾಗಿನಿಂದ ಆ ದೇಶ ತನ್ನ ಜನರ ಕುರಿತು ಅನುಸರಿಸಿದ್ದು ದಮನ ನೀತಿ ಮಾತ್ರವೇ. ಚೀನಾದ ಕಮ್ಯುನಿಸ್ಟ್ ಪಕ್ಷವು ಸಮಾಜವಾದ ಮತ್ತು ನಾಸ್ತಿಕವಾದವನ್ನು ಪ್ರತಿಪಾದಿಸುತ್ತದೆ. ಸಮಾಜವಾದವನ್ನು ಜಾರಿಗೆ ತರುವ ಪ್ರಯತ್ನ ಮತ್ತು ಎಲ್ಲವೂ ಸರ್ಕಾರಿ ಸ್ವಾಮ್ಯದಲ್ಲಿಯೇ ಇರಬೇಕು ಎಂಬ ಹಟದಿಂದಾಗಿ ಹಲವು ದಶಕಗಳ ಕಾಲ ದೇಶದ ಜನರು ಅತೀವವಾದ ಬಡತನದಲ್ಲಿ ಬದುಕುವಂತಹ ಸ್ಥಿತಿ ನಿರ್ಮಾಣ ಆಗಿತ್ತು.

ಚೀನಾದ ಜನರು ಪಾರಂಪರಿಕವಾಗಿ ಧಾರ್ಮಿಕ ಮತ್ತು ಆಧ್ಯಾತ್ಮಿಕವಾದ ಮನಃಸ್ಥಿತಿಯನ್ನು ಹೊಂದಿದ್ದುದೇ ಕಮ್ಯುನಿಸ್ಟ್ ಪಕ್ಷದ ನಾಸ್ತಿಕವಾದದ ಜಾರಿಗೆ ದೊಡ್ಡ ಸವಾಲಾಗಿತ್ತು. ಹಾಗಾಗಿಯೇ ಧರ್ಮವನ್ನು ನಿಷೇಧಿಸುವ ಸಾಹಸಕ್ಕೆ ಮಾವೊ ಕೈಹಾಕಲಿಲ್ಲ. ಆದರೆ, ಧರ್ಮವನ್ನು ಅನುಸರಿಸುವವರಿಗೆ ಕಮ್ಯುನಿಸ್ಟ್ ಪಕ್ಷದ ಸದಸ್ಯತ್ವ ದೊರಕುತ್ತಿರಲಿಲ್ಲ. ಬೌದ್ಧ, ತಾವೊ, ಇಸ್ಲಾಂ, ಪ್ರೊಟೆಸ್ಟೆಂಟ್ ಮತ್ತು ಕ್ಯಾಥೊಲಿಕ್ ಧರ್ಮಗಳಿಗೆ ದೇಶದಲ್ಲಿ ಮಾನ್ಯತೆ ಇದೆ. ಮಾವೊ ಇದ್ದ ಕಾಲದಲ್ಲಿ ಆಸ್ತಿಕ ಎಂದು ಹೇಳಿಕೊಳ್ಳುವುದು ಸಾಧ್ಯವಿರಲಿಲ್ಲ. 1966ರಿಂದ 1976ರವರೆಗೆ ಚೀನಾದಲ್ಲಿ 'ಸಾಂಸ್ಕೃತಿಕ ಕ್ರಾಂತಿ'ಯ ಹೆಸರಿನಲ್ಲಿ ಕಮ್ಯುನಿಸ್ಟ್ ಸಿದ್ಧಾಂತವನ್ನು ದೇಶದ ಮೂಲೆ ಮೂಲೆಗೆ ಹರಡುವ ಕೆಲಸ ನಡೆಯಿತು. ಈ ಸಂದರ್ಭದಲ್ಲಿ ದೇಶದಲ್ಲಿ ಇದ್ದ ದೇವಾಲಯ, ಮಸೀದಿ, ಚರ್ಚ್, ಬೌದ್ಧ ಮಂದಿರಗಳನ್ನು ಧ್ವಂಸ ಮಾಡಲಾಗಿತ್ತು.

ಈಗ, ಚೀನಾದ ಅಧ್ಯಕ್ಷರಾಗಿ ಮೂರನೇ ಅವಧಿಗೆ ನೇಮಕವಾಗಿರುವ ಷಿ ಜಿನ್‌ಪಿಂಗ್ ಅವರನ್ನು ಮಾವೊ ಜೊತೆಗೆ ಹೋಲಿಸಲಾಗುತ್ತದೆ. ಆದರೆ, ಈ ಇಬ್ಬರ ನಡುವೆ ಹೋಲಿಕೆ ಇಲ್ಲ ಎಂಬ ವಿಶ್ಲೇಷಣೆಯೂ ಇದೆ. ಸಮಾಜವಾದದ ನೆಲೆಯಲ್ಲಿಯೇ ದೇಶ ನಿರ್ಮಾಣ ಆಗಬೇಕು ಎಂಬುದು ಮಾವೊ ಸಿದ್ಧಾಂತವಾಗಿತ್ತು. ಆದರೆ, ಷಿ ಜಿನ್‌ಪಿಂಗ್ ಅವರ 10 ವರ್ಷಗಳ ಆಳ್ವಿಕೆಯಲ್ಲಿ ದೇಶದಲ್ಲಿ ಸಮಾಜವಾದವು ನೆಲೆ ಕಳೆದುಕೊಂಡಿದೆ. 1949ರಲ್ಲಿ ದೇಶ ಸ್ಥಾಪನೆ ಆದಾಗಿನಿಂದ 1976ರಲ್ಲಿ ಮಾವೊ ಸಾಯುವವರೆಗೆ ಮಾವೊ ಅವರದ್ದು ಪಕ್ಷ ಮತ್ತು ದೇಶದ ಮೇಲೆ ಬಿಗಿ ಹಿಡಿತವೇ ಆಗಿತ್ತು. ಪಕ್ಷದ ಎಲ್ಲ ಅಧಿಕಾರವನ್ನೂ ತನ್ನ ಕೈವಶ ಮಾಡಿಕೊಂಡಿರುವ ಜಿನ್‌ಪಿಂಗ್ ಅವರು ನೆಪಮಾತ್ರಕ್ಕೇ ಆದರೂ ಪಕ್ಷದ ವ್ಯವಸ್ಥೆಯ ಮೂಲಕವೇ ಆಯ್ಕೆ ಆಗಬೇಕಾಗಿದೆ. ಏಕಚಕ್ರಾಧಿಪತ್ಯಕ್ಕೆ ಅವಕಾಶ ದೊರೆಯಬಾರದು ಎಂಬ ಕಾರಣಕ್ಕಾಗಿಯೇ ದೇಶದ ಅಧ್ಯಕ್ಷ ಹುದ್ದೆಯಲ್ಲಿ ಒಬ್ಬ ವ್ಯಕ್ತಿ ಐದು ವರ್ಷಗಳ ಎರಡು ಅವಧಿಗೆ ಮಾತ್ರ ಇರಲು ಸಾಧ್ಯ ಎಂಬ ನಿಯಮವನ್ನು ಮೂರು ದಶಕಗಳ ಹಿಂದೆ ಮಾಡಿಕೊಳ್ಳಲಾಗಿತ್ತು. ತಮಗೆ ಏಕಚಕ್ರಾಧಿಪತ್ಯವೇ ಬೇಕು ಎಂಬ ಕಾರಣಕ್ಕೆ 2017ರಲ್ಲಿ ಈ ನಿಯಮವನ್ನು ಜಿನ್‌ಪಿಂಗ್ ಅವರು ರದ್ದುಪಡಿಸಿದ್ದಾರೆ. ಅದರ ಪರಿಣಾಮವಾಗಿ ಮೂರನೇ ಅವಧಿಗೆ ಅವರಿಗೆ ಅಧಿಕಾರ ದಕ್ಕಿದೆ.

ದಮನ ನೀತಿಯನ್ನು ಕೈಬಿಡಬೇಕು ಎಂಬ ಚಿಂತನೆ 1980ರ ದಶಕದಲ್ಲಿ ಕಾಣಿಸಿಕೊಂಡಿತ್ತು. ಆದರೆ, 1989ರಲ್ಲಿ ಟಿಯನಾನ್‌ಮನ್‌ನಲ್ಲಿ ನಡೆದ ಹತ್ಯಾಕಾಂಡವು ದೇಶವು ದಮನ ನೀತಿಯನ್ನೇ ಗಟ್ಟಿಯಾಗಿ ನಂಬಿಕೊಂಡಿದೆ ಎಂಬುದನ್ನು ಜಗತ್ತಿಗೆ ಮತ್ತೆ ಸಾರಿ ಹೇಳಿತು. ಭ್ರಷ್ಟಾಚಾರ ಮತ್ತು ಬೆಲೆ ಏರಿಕೆಯನ್ನು ಖಂಡಿಸಿ ವಿದ್ಯಾರ್ಥಿಗಳು ಮತ್ತು ಕಾರ್ಮಿಕರು ಸಾವಿರಾರು ಸಂಖ್ಯೆಯಲ್ಲಿ ಬೀಜಿಂಗ್‌ನ ಟಿಯನಾನ್‌ಮನ್ ಚೌಕದಲ್ಲಿ ಸೇರಿದ್ದರು. ಆಗ ಅಧ್ಯಕ್ಷರಾಗಿದ್ದವರು ಸುಧಾರಣಾವಾದಿ ಝಾವೊ ಝಿಯಾಂಗ್. ಈ ಪ್ರತಿಭಟನೆಯನ್ನೇ ಮುಂದಿಟ್ಟು ಸುಧಾರಣೆಗೆ ವೇಗ ತುಂಬಬೇಕು ಎಂದು ಅವರು ಬಯಸಿದ್ದರು. ಪಕ್ಷದಲ್ಲಿ ಎರಡು ಬಣಗಳಾದವು. ಪಕ್ಷವನ್ನು ಅಧಿಕಾರದಿಂದ ಕೆಳಗೆ ಇಳಿಸುವುದೇ ಪ್ರತಿಭಟನೆಯ ಗುರಿ ಎಂದು ಪ್ರಧಾನಿ ಲಿ ಪೆಂಗ್ ಪ್ರತಿಪಾದಿಸಿದರು. ಈ ಬಣಕ್ಕೆ ಮೇಲುಗೈಯಾಯಿತು. ಜೂನ್ 4ರಂದು ಬೆಳಿಗ್ಗೆ ಟ್ಯಾಂಕುಗಳು ಸಾವಿರಾರು ಜನರನ್ನು ಅಪ್ಪಚ್ಚಿ ಮಾಡಿತು.



ಯಾವುದೇ ನೀತಿಯನ್ನು ಬಂದೂಕು ಹಿಡಿದೇ ಜಾರಿ ಮಾಡುವುದು ಚೀನಾ ಕಮ್ಯುನಿಸ್ಟ್ ಪಕ್ಷದ ಜಾಯಮಾನ. ಸೌಮ್ಯವಾಗಿ ಕಾಣಿಸುವ ಜಿನ್‌ಪಿಂಗ್ ಕೂಡ ಅದಕ್ಕೆ ಹೊರತಲ್ಲ. ಪಕ್ಷದ ನಾಯಕರು, ಪತ್ರಕರ್ತರು, ಹೋರಾಟಗಾರರು ಎಲ್ಲರನ್ನೂ ನಿರ್ದಯವಾಗಿ ದಮನ ಮಾಡಿದ್ದಾರೆ. ಭ್ರಷ್ಟಾಚಾರದ ಕೂಪವಾಗಿದ್ದ ಚೋಂಗ್‌ಕ್ವಿಂಗ್ ಪ್ರಾಂತ್ಯದ ಶುದ್ಧೀಕರಣಕ್ಕಾಗಿ ಸಚಿವ ಬೊ ಕ್ಸಿಲಾಯ್ ಅವರನ್ನು 2007ರಲ್ಲಿ ಅಲ್ಲಿಗೆ ಕಳುಹಿಸಲಾಗಿತ್ತು. ಅತ್ಯಂತ ದಕ್ಷವಾಗಿದ್ದ ಬೊ, ಅಪರಾಧಿಗಳು, ಉದ್ಯಮಿಗಳು, ರಾಜಕಾರಣಿಗಳು ಮತ್ತು ಪೊಲೀಸರು ಸೇರಿದಂತೆ ನೂರಾರು ಮಂದಿಯನ್ನು ಸೆರೆಮನೆಗೆ ತುಂಬಿದರು. ಬೊ ಅವರ ಆಳ್ವಿಕೆಯು ಜನರಲ್ಲಿ ಭೀತಿ ಮೂಡಿಸಿತ್ತು. ಮುಂದೆ ಇದೇ ನೀತಿಯನ್ನು ಜಿನ್‌ಪಿಂಗ್ ಅವರು ಅಧ್ಯಯನ ಮಾಡಿದರು. ಅದನ್ನೇ ಅವರು ದೇಶದಾದ್ಯಂತ ಜಾರಿಗೂ ತಂದಿದ್ದಾರೆ. ಆದರೆ, ಪಕ್ಷದಲ್ಲಿ ಪ್ರಾಬಲ್ಯ ಗಳಿಸಿಕೊಂಡಿದ್ದ ಬೊ ಅವರು ಮಾತ್ರ ಈಗ ಸೆರೆಮನೆಯಲ್ಲಿ ಇದ್ದಾರೆ.

ಚೀನಾದ ರಾಜಕಾರಣದಲ್ಲಿ ನಕ್ಷತ್ರದಂತೆ ಬೆಳಗುತ್ತಿದ್ದ ಬೊ ಅವರ ಪತನದ ಬಳಿಕ ಪಕ್ಷದ ಸಾವಿರಾರು ಕಾರ್ಯಕರ್ತರನ್ನು ತನಿಖೆಗೆ ಒಳಪಡಿಸಲಾಗಿದೆ. ಭ್ರಷ್ಟಾಚಾರದ ಹೆಸರಿನಲ್ಲಿ ಶಿಕ್ಷೆಗೆ ಒಳಗಾದವರ ಸಂಖ್ಯೆ ಲಕ್ಷವನ್ನೂ ದಾಟಿದೆ. ಅದರಲ್ಲಿ ಪಕ್ಷ, ಸರ್ಕಾರದಲ್ಲಿ ಉನ್ನತ ಹುದ್ದೆಯಲ್ಲಿದ್ದ 120 ಜನರೂ ಇದ್ದಾರೆ. ಪಕ್ಷದ ನಿರ್ಧಾರ ಕೈಗೊಳ್ಳುವ ಪಾಲಿಟ್‌ಬ್ಯೂರೊ ಸ್ಥಾಯಿ ಸಮಿತಿಯ ಸದಸ್ಯ ಮತ್ತು ಜಿನ್‌ಪಿಂಗ್ ಅವರ ಪ್ರತಿಸ್ಪರ್ಧಿಯಾಗಿದ್ದ ಝೌ ಯೊಂಗ್‌ಕಾಂಗ್ ಅವರನ್ನು 2014ರಲ್ಲಿ ಬಂಧಿಸಲಾಗಿದೆ.

ಜಿನ್‌ಪಿಂಗ್ ಯುಗದಲ್ಲಿ ಭಿನ್ನಮತ, ವೈವಿಧ್ಯಕ್ಕೆ ಜಾಗವೇ ಇಲ್ಲ. ಉಯ್‌ಘುರ್ ಜನಾಂಗದ ಮುಸ್ಲಿಮರಿಗೆ ಇನ್ನಿಲ್ಲದ ರೀತಿಯಲ್ಲಿ ಕಿರುಕುಳ ನೀಡಲಾಗುತ್ತಿದೆ ಎಂಬುದು ಜಾಗತಿಕ ಮಟ್ಟದಲ್ಲಿ ಕಳವಳ ವ್ಯಕ್ತವಾದ ವಿಚಾರವಾಗಿದೆ. ಈ ಸಮುದಾಯದ 1.2 ಕೋಟಿಗೂ ಹೆಚ್ಚು ಜನರ ಹತ್ಯೆ ಮಾಡಲಾಗಿದೆ ಎನ್ನಲಾಗುತ್ತಿದೆ. ಇಂತಹ ನರಮೇಧ ಟಿಬೆಟ್ ಮತ್ತು ಮಂಗೋಲಿಯಾದಲ್ಲಿಯೂ ನಡೆಯುತ್ತಿದೆ ಎಂಬ ವರದಿಗಳಿವೆ.

ರಾಜಕೀಯ ಸುಧಾರಣೆ ತರಬೇಕು ಎಂದು ಹೇಳಿದ್ದ ಲೇಖಕ ಮತ್ತು ಸಾಮಾಜಿಕ ಹೋರಾಟಗಾರ, ನೊಬೆಲ್ ಶಾಂತಿ ಪ್ರಶಸ್ತಿ ಪುರಸ್ಕೃತ ಲಿಯು ಕ್ಸಿಯೊಬೊ ಅವರೂ ಜೈಲಿನಲ್ಲಿಯೇ ಇದ್ದಾರೆ.

ಮಾಧ್ಯಮದ ಮೇಲೆ ಕಟ್ಟುನಿಟ್ಟಿನ ನಿಗಾ ಇದೆ. ಸರ್ಕಾರ ಮತ್ತು ಪಕ್ಷಕ್ಕೆ ಪಥ್ಯವಾಗದ್ದನ್ನು ಬರೆದ ಪತ್ರಕರ್ತರನ್ನು ದೇಶದ ಭದ್ರತೆಗೆ ಧಕ್ಕೆ ತಂದ ಆರೋಪದಲ್ಲಿ ಜೈಲಿಗೆ ಹಾಕಲಾಗುತ್ತದೆ. ರಿಪೋರ್ಟರ್ಸ್ ವಿದೌಟ್ ಬಾರ್ಡರ್ಸ್ ಸಂಸ್ಥೆಯ ಮಾಧ್ಯಮ ಸ್ವಾತಂತ್ರ್ಯ ಸೂಚ್ಯಂಕದ 180 ದೇಶಗಳ ಪಟ್ಟಿಯಲ್ಲಿ ಚೀನಾಕ್ಕೆ 175ನೇ ಸ್ಥಾನ ಇದೆ. ಇದುವೇ ಆ ದೇಶದಲ್ಲಿ ಮಾಧ್ಯಮ, ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ ಎಷ್ಟಿದೆ ಎಂಬುದಕ್ಕೆ ಕೈಗನ್ನಡಿ.

ಪಾಲಿಟ್‌ಬ್ಯೂರೊ ಮೇಲೆ ಬಿಗಿಹಿಡಿತ

ಏಳು ಸದಸ್ಯರ ಪಾಲಿಟ್‌ಬ್ಯೂರೊ ಸ್ಥಾಯಿ ಸಮಿತಿಯು ಈಗ ಜಿನ್‌ಪಿಂಗ್ ಅವರ ಸಂಪೂರ್ಣ ನಿಯಂತ್ರಣಕ್ಕೆ ಬಂದಿದೆ. ಸಮಿತಿಯ ಏಳೂ ಸದಸ್ಯರು ಅವರ ನಿಷ್ಠರೇ ಆಗಿದ್ದಾರೆ ಎಂಬುದು ವಿಶೇಷ. ಪ್ರತೀ ಐದು ವರ್ಷಕ್ಕೊಮ್ಮೆ ನಡೆಯುವ ಚೀನಾ ಕಮ್ಯುನಿಸ್ಟ್ ಪಕ್ಷದ (ಸಿಪಿಸಿ) ಸಮಾವೇಶದಲ್ಲಿ ಪಾಲಿಟ್‌ಬ್ಯೂರೊ ಸ್ಥಾಯಿ ಸಮಿತಿ ಸದಸ್ಯರ ನೇಮಕವಾಗುತ್ತದೆ. ಇದೇ ಮೊದಲ ಬಾರಿಗೆ ಏಳೂ ಜನರು ಜಿನ್‌ಪಿಂಗ್ ಬಣಕ್ಕೆ ಸೇರಿದವರೇ ಆಯ್ಕೆಯಾಗಿದ್ದಾರೆ. ತಮ್ಮ ನಿಷ್ಠರನ್ನೇ ನೇಮಿಸಿಕೊಳ್ಳುವ ಮೂಲಕ ತಮ್ಮ ಸ್ಥಾನವನ್ನು ಜಿನ್‌ಪಿಂಗ್ ಭದ್ರಪಡಿಸಿಕೊಂಡಿದ್ದಾರೆ ಎಂದು ವಿಶ್ಲೇಷಿಸಲಾಗಿದೆ.

ಏಳು ಸದಸ್ಯರ ಸಮಿತಿಗೆ ಈ ಬಾರಿ ಇಬ್ಬರು ಹೊಸಬರು ಬಂದಿದ್ದಾರೆ. ಝಾವೊ ಲೆಜಿ ಹಾಗೂ ವಾಂಗ್ ಹನಿಂಗ್ ಅವರಿಗೆ ಪಾಲಿಟ್‌ಬ್ಯೂರೊದಲ್ಲಿ ಸ್ಥಾನ ಕಲ್ಪಿಸಲಾಗಿದೆ. ಅಚ್ಚರಿಯೆಂದರೆ, ಹಾಲಿ ಪ್ರಧಾನಿ ಲಿ ಕೆಕಿಯಾಂಗ್ ಅವರನ್ನು ಸಮಿತಿ ಒಳಗೊಂಡಿಲ್ಲ. ಜಿನ್‌ಪಿಂಗ್ ನಂತರದ ಸ್ಥಾನದಲ್ಲಿರುವ ಅವರನ್ನು ಕೈಬಿಡಲಾಗಿದೆ. ಇವರ ಸ್ಥಾನಕ್ಕೆ, ಪಕ್ಷದ ಶಾಂಘೈ ಘಟಕದ ಮುಖ್ಯಸ್ಥರಾಗಿರುವ ಲಿ ಕಿಯಾಂಗ್ ಬಂದಿದ್ದಾರೆ.

ಮುಂದಿನ ವರ್ಷದ ಮಾರ್ಚ್‌ನಲ್ಲಿ ತೆರವಾಗಲಿರುವ ಪ್ರಧಾನಿ ಹುದ್ದೆಗೆ ಲಿ ಕಿಯಾಂಗ್ ನೇಮಕಗೊಳ್ಳಲಿದ್ದಾರೆ ಎನ್ನಲಾಗುತ್ತಿದೆ. ಈಗಿನ ಪ್ರಧಾನಿ ಲಿ ಕೆಕಿಯಾಂಗ್ ಅವರನ್ನು ಸುಲಭವಾಗಿ ಹೊರಗೆ ಕಳುಹಿಸುವುದಕ್ಕೆ ಜಿನ್‌ಪಿಂಗ್ ವೇದಿಕೆ ಸಿದ್ಧ ಮಾಡಿದ್ದಾರೆ. ಕಾಯ್ ಕಿ, ಡಿಂಗ್ ಷುಷಿಯಾಂಗ್, ಲೀ ಷಿ ಅವರು ಇನ್ನಿತರ ಸದಸ್ಯರು. ಪಕ್ಷದ ಗುವಾಂಗ್‌ಡಾಂಗ್ ಘಟಕದ ಮುಖ್ಯಸ್ಥರಾಗಿರುವ ಲೀ ಷಿ ಅವರು ಜಿನ್‌ಪಿಂಗ್ ಅವರ ಜೊತೆಗೆ ಈ ಹಿಂದೆ ಕೆಲಸ ಮಾಡಿದ್ದರು. 25 ವರ್ಷಗಳ ನಂತರ ಇದೇ ಮೊದಲ ಬಾರಿಗೆ ಸ್ಥಾಯಿ ಸಮಿತಿಯಲ್ಲಿ ಮಹಿಳೆಗೆ ಪ್ರಾತಿನಿಧ್ಯ ಸಿಕ್ಕಿಲ್ಲ. ಸಮಿತಿಯಲ್ಲಿರುವ ಎಲ್ಲರೂ 60 ವರ್ಷ ಮೀರಿದವರು. ಇವರು ಮತ್ತೆ ಎರಡು ಅವಧಿಗೆ ಪಾಲಿಟ್‌ಬ್ಯೂರೊ ಸ್ಥಾಯಿ ಸಮಿತಿಗೆ ಪುನರಾಯ್ಕೆಯಾಗುವ ಎಲ್ಲ ಸಾಧ್ಯತೆಗಳಿವೆ ಎನ್ನಲಾಗಿದೆ.

ಮಾವೊ ನಂತರದ ಪ್ರಬಲ ನಾಯಕ

ಜಿನ್‌ಪಿಂಗ್‌ಗೆ ರಾಜಕೀಯ ಹೊಸದೇನೂ ಅಲ್ಲ. ಅವರ ತಂದೆ ಷಿ ಝೊಂಗ್‌ಕ್ಸನ್ ಕಮ್ಯುನಿಸ್ಟ್ ಪಕ್ಷದ ಸಂಸ್ಥಾಪಕರಲ್ಲಿ ಒಬ್ಬರು. ಮಾವೊ ಜೆಡಾಂಗ್ ಜತೆಗೆ ಉತ್ತಮ ಸಂಬಂಧ ಹೊಂದಿದ್ದ ಝೊಂಗ್‌ಕ್ಸನ್, ಚೀನಾದ ಉಪಾಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದಾರೆ. ದೇಶದ ಅತ್ಯುನ್ನತ ರಾಜಕೀಯ ಕುಟುಂಬದಲ್ಲಿ ಜನಿಸಿದ ಕಾರಣಕ್ಕೆ ಜಿನ್‌ಪಿಂಗ್ ಅವರಿಗೆ ಈಗಿನ ಹುದ್ದೆ ಒಲಿದುಬಂದಿದೆ ಎಂದರೆ ಅದು ತಪ್ಪಾಗುತ್ತದೆ.

ಪಕ್ಷದ ಸಂಸ್ಥಾಪಕರಲ್ಲಿ ಒಬ್ಬರಾಗಿದ್ದರೂ ದೇಶದ ಉಪಾಧ್ಯಕ್ಷರಾಗಿದ್ದರೂ ಮಾವೊಗೆ ಆಪ್ತರಾಗಿದ್ದರೂ ಝೊಂಗ್‌ಕ್ಸನ್ ಮತ್ತು ಮಾವೊ ಮಧ್ಯೆ ಭಿನ್ನಾಭಿಪ್ರಾಯವಿತ್ತು. ಈ ಕಾರಣದಿಂದ ಝೊಂಗ್‌ಕ್ಸನ್ ಅವರನ್ನು ಬಂಧಿಸಿ, ಸೆರೆಮನೆಗೆ ತಳ್ಳಲಾಗಿತ್ತು. ಇನ್ನೂ 15ನೇ ವಯಸ್ಸಿನಲ್ಲಿದ್ದ ಜಿನ್‌ಪಿಂಗ್ ಅವರನ್ನು ಬೀಜಿಂಗ್‌ನ ಅತಿಶ್ರೀಮಂತರ ಶಾಲೆಯಿಂದ ಎಳೆದೊಯ್ಯಲಾಗಿತ್ತು. ನಂತರ ಅವರನ್ನು ಉತ್ತರ ಚೀನಾದ ಕಗ್ಗಾಡಿನಲ್ಲಿದ್ದ 'ರಿ–ಎಜುಕೇಷನ್' ಶಿಬಿರಕ್ಕೆ ತಳ್ಳಲಾಗಿತ್ತು. ಮಾವೊ ವಿಚಾರಗಳ ವಿರುದ್ಧ ದನಿ ಎತ್ತಿದವರು ಮತ್ತು ಭಿನ್ನಾಭಿಪ್ರಾಯ ಹೊಂದಿವರನ್ನು ಕೂಡಿ ಹಾಕಿ, ಕಠಿಣ ಕೆಲಸಗಳ ಮೂಲಕ ಮಾವೊ ವಿಚಾರಗಳನ್ನು ಮನವರಿಕೆ ಮಾಡಿಕೊಡುವ ಶಿಬಿರವದು. ಅಂತಹ ಶಿಬಿರದಲ್ಲಿ ಜಿನ್‌ಪಿಂಗ್ ಅವರನ್ನು ಏಳು ವರ್ಷ 'ರಿ–ಎಜುಕೇಟ್' ಮಾಡಲಾಗಿತ್ತು. ಇದೇ ಅವಧಿಯಲ್ಲಿ ಜಿನ್‌ಪಿಂಗ್ ಅವರ ಅಕ್ಕನನ್ನು ಬೀಜಿಂಗ್‌ನಲ್ಲೇ ಹತ್ಯೆ ಮಾಡಲಾಗಿತ್ತು.

ತಮ್ಮ ಕುಟುಂಬವನ್ನೇ ಹೊಸಕಿಹಾಕಿದ್ದ ಕಮ್ಯುನಿಸ್ಟ್ ಪಕ್ಷದ ವಿರೋಧಿಯಾಗುವ ಬದಲಿಗೆ, ಜಿನ್‌ಪಿಂಗ್ ಆ ಪಕ್ಷದ ಬಗ್ಗೆ ಒಲವು ಬೆಳೆಸಿಕೊಂಡರು. ಆನಂತರ ಕಮ್ಯುನಿಸ್ಟ್ ಪಕ್ಷವನ್ನು ಸೇರಲು ಜಿನ್‌ಪಿಂಗ್ ಮಾಡಿದ ಹಲವು ಯತ್ನಗಳು ವಿಫಲವಾದವು. ಜಿನ್‌ಪಿಂಗ್ ಅವರ ತಂದೆ, ಮಾವೊ ವಿಚಾರಗಳಿಗೆ ವಿರುದ್ಧವಾಗಿದ್ದರು ಎಂಬ ಕಾರಣದಿಂದಲೇ ಜಿನ್‌ಪಿಂಗ್ ಅವರನ್ನು ಆರಂಭದ ದಿನಗಳಲ್ಲಿ ಪಕ್ಷದ ಒಳಗೆ ಬಿಟ್ಟುಕೊಂಡಿರಲಿಲ್ಲ. ಆದರೆ ಜಿನ್‌ಪಿಂಗ್ ತನ್ನ ಪ್ರಯತ್ನ ಬಿಟ್ಟಿರಲಿಲ್ಲ. ಮಾವೊ ವಿಚಾರಗಳಿಗೆ ನಿಷ್ಠನಾಗಿದ್ದೇನೆ ಎಂದು ಪದೇ–ಪದೇ ಸಾಬೀತು ಮಾಡಿದ ಕಾರಣಕ್ಕೆ 1974ರಲ್ಲಿ ಪಕ್ಷದ ಪ್ರಾಥಮಿಕ ಸದಸ್ಯತ್ವ ನೀಡಲಾಗಿತ್ತು. ನಂತರದ ಕೆಲವೇ ವರ್ಷಗಳಲ್ಲಿ ಹೆಬೇ ಪ್ರಾಂತ್ಯದ ಅಧ್ಯಕ್ಷ ಹುದ್ದೆಗೆ ಜಿನ್‌ಪಿಂಗ್ ಏರಿದರು. ವಿವಿಧ ಕಾರಣಗಳಿಂದಾಗಿ 2000ನೇ ಇಸವಿಯಲ್ಲಿ ಒಲಿಪಿಂಕ್ಸ್ ಆಯೋಜಕನ ಸ್ಥಾನವನ್ನು ಚೀನಾ ಕಳೆದುಕೊಳ್ಳಬೇಕಾಯಿತು. ಆದರೆ, 2008ರಲ್ಲಿ ಆ ಅವಕಾಶ ಚೀನಾಗೆ ಮತ್ತೆ ಒದಗಿಬಂದಿತ್ತು. ಒಲಿಪಿಂಕ್ಸ್ ಆಯೋಜಿಸುವ ಹೊಣೆ ಜಿನ್‌ಪಿಂಗ್ ಅವರದ್ದಾಗಿತ್ತು. ಅದನ್ನು ಸಮರ್ಥವಾಗಿ ನಿಭಾಯಿಸಿದ ಜಿನ್‌ಪಿಂಗ್ ಅವರಿಗೆ ಪಕ್ಷದ ಪಾಲಿಟ್‌ಬ್ಯೂರೊ ಸ್ಥಾಯಿ ಸಮಿತಿಗೆ ಪ್ರವೇಶ ದೊರೆಯಿತು. ಅಲ್ಲಿಂದಲೂ ಒಂದು ಹಂತ ಮೇಲಕ್ಕೇರಿದ ಜಿನ್‌ಪಿಂಗ್ 2012ರಲ್ಲಿ ಅಧ್ಯಕ್ಷರಾದರು.

ಮಾವೊ ಜೆಡಾಂಗ್ ಅವರನ್ನು ಚೀನಾದ ಅತಿ ನಿರಂಕುಶವಾದಿ ಎಂದು ಕರೆಯಲಾಗುತ್ತದೆ. ಅಂತಹ ನಿರಂಕುಶವಾದದ ವಿರುದ್ಧ ದನಿ ಎತ್ತಿ ಜೈಲು ಸೇರಿದ್ದ ಷಿ ಝೊಂಗ್‌ಕ್ಸನ್ ಅವರ ಮಗ ಷಿ ಜಿನ್‌ಪಿಂಗ್ ಅವರನ್ನು ಈಗ, ಮಾವೊ ನಂತರದ ಅತ್ಯಂತ ಪ್ರಬಲ ನಿರಂಕುಶವಾದಿ ಎಂದು ಕರೆಯಲಾಗುತ್ತಿದೆ. ಈ ಹಿಂದೆ ಎಂದೂ ಇಲ್ಲದಷ್ಟು 'ರಿ–ಎಜುಕೇಷನ್' ಶಿಬಿರಗಳನ್ನು ಚೀನಾದ ಉದ್ದಗಲಕ್ಕೂ ಜಿನ್‌ಪಿಂಗ್ ಅವಧಿಯಲ್ಲಿ ಸ್ಥಾಪಿಸಲಾಗಿದೆ. ಸಂಪೂರ್ಣ ಸ್ವಾಯತ್ತೆ ಬಯಸುತ್ತಿರುವ ಹಾಂಗ್‌ಕಾಂಗ್ ಹೋರಾಟವನ್ನು ಹತ್ತಿಕ್ಕಲಾಗುತ್ತಿದೆ. ಅಲ್ಲಿನ ಹೋರಾಟಗಾರರನ್ನು 'ರಿ–ಎಜುಕೇಷನ್' ಶಿಬಿರಗಳಿಗೆ ತಳ್ಳಲಾಗುತ್ತಿದೆ. ತೈವಾನ್ ಅನ್ನು ಚೀನಾ ಜತೆಗೆ ಮರುಕೂಡಿಸುವ 'ಅಖಂಡ ಚೀನಾ' ಮಂತ್ರವನ್ನು ಜಿನ್‌ಪಿಂಗ್ ಪಠಿಸಿದ್ದಾರೆ. ಅಗತ್ಯಬಿದ್ದರೆ ಸೇನೆ ಬಳಸುವುದಾಗಿಯೂ ಹೇಳಿದ್ದಾರೆ.

ಆಧಾರ: ಬಿಬಿಸಿ, ಬ್ರಿಟಾನಿಕಾ, ಕೌನ್ಸಿಲ್ ಆನ್ ಫಾರಿನ್ ರಿಲೇಷನ್ಸ್, ರಿಪೋರ್ಟರ್ಸ್ ವಿದೌಟ್ ಬಾರ್ಡರ್ಸ್


ವೇದವ್ಯಾಸರ ಶಿವಪುರಾಣಸಾರ 257
ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ

ಮದುಮಗನ ಅಲಂಕಾರದಲ್ಲಿ ಶಿವ

ಶಿವ-ಪಾರ್ವತಿಯ ಕಲ್ಯಾಣಕ್ಕೆ ಹೊರಡುವ ಮದುವೆ ದಿಬ್ಬಣಕ್ಕೆ ವಿಷ್ಣು, ಬ್ರಹ್ಮ ತಮ್ಮ ಪರಿವಾರದೊಡನೆ ಕೈಲಾಸಕ್ಕೆ ಆಗಮಿಸಿದ. ಇಂದ್ರ ಮೊದಲಾದ ಲೋಕಪಾಲರೂ ಸುಂದರವಾದ ವೇಷಭೂಷಣಗಳೊಂದಿಗೆ ಪತ್ನಿ ಮತ್ತು ಪರಿವಾರದೊಡನೆ ಬಂದರು. ನಾರದನ ಆಹ್ವಾನ ಮನ್ನಿಸಿ ಮುನಿಗಳು, ನಾಗಗಳು, ಸಿದ್ಧರು, ಗಂಧರ್ವರು, ಕಿನ್ನರರು ಸಹ ಬಂದರು.

ವಿಷ್ಣು-ಬ್ರಹ್ಮ ಮೊದಲಾದ ದೇವತೆಗಳು ಶಂಕರನ ಮದುವೆ ತಮ್ಮ ಮನೆಯ ಕಾರ್ಯವೆಂಬಂತೆ ಶ್ರದ್ಧೆಯಿಂದ ನೆರವೇರಿಸಲು ಸಿದ್ಧರಾದರು. ಶಿವನ ನಿತ್ಯದ ಬೂದಿ ಬಳಿದ ಅರೆನಗ್ನ ವೇಷವೂ ಬದಲಾಗಿ, ರಾಜಕುಮಾರನಂತೆ ಅಲಂಕೃತನಾದ. ಶಿವನ ಶಿರದಲ್ಲಿದ್ದ ಚಂದ್ರನ ಸ್ಥಾನದಲ್ಲಿ ವಜ್ರಖಚಿತ ಚಿನ್ನದ ಕಿರೀಟ ಅಲಂಕರಿಸಿತು. ಅವನ ಮೂರನೆಯ ಕಣ್ಣು ಸುಂದರವಾದ ತಿಲಕವಾಯಿತು. ನಾಗಾಭರಣಗಳಾಗಿದ್ದ ಶೇಷ ಮತ್ತು ವಾಸುಕಿ ಎಂಬ ಎರಡು ಸರ್ಪಗಳು ರತ್ನಮಯವಾದ ಕುಂಡಲಗಳಾಗಿ ಶಿವನ ಕರ್ಣವನ್ನಲಂಕರಿಸಿದವು.

ಶಿವನ ಶರೀರದಲ್ಲಿ ಸದಾ ಇರುತ್ತಿದ್ದ ವಿಭೂತಿಯು ಚಂದನವಾಗಿ ಪರಿಮಳಭರಿತವಾಯಿತು. ಅವನ ಸೊಂಟ ಅಲಂಕರಿಸಿದ್ದ ಗಜಚರ್ಮವು ಸುಂದರವಾದ ವಸ್ತ್ರವಾಯಿತು. ಮದುಮಗನ ಅಲಂಕಾರದಿಂದ ಶಿವ ಮನೋಹರವಾಗಿ ಶೋಭಿಸುತ್ತಿದ್ದ. ಹರಿಯು ಶಂಕರನಿಗೆ ಭಕ್ತಿಯಿಂದ ನಮಸ್ಕರಿಸಿ, 'ಮಹಾದೇವನೆ, ನನ್ನದೊಂದು ವಿಜ್ಞಾಪನೆಯನ್ನು ನೆರವೇರಿಸು. ಪಾರ್ವತಿಯೊಡನೆ ನಿನ್ನ ಮದುವೆಯು ಗೃಹ್ಯಸೂತ್ರಗಳಲ್ಲಿ ಹೇಳಿರುವ ವಿಧಿಯಂತೆ ಆಗಬೇಕು. ನೀನು ವಿಧಿವತ್ತಾಗಿ ಮದುವೆಯನ್ನು ಮಾಡಿಕೊಂಡರೆ, ಆ ವಿಧಿಪದ್ಧತಿಯೇ ಲೋಕದಲ್ಲಿ ಪ್ರಸಿದ್ಧವಾಗುತ್ತದೆ. ಮುಂದೆ ಲೋಕದಲ್ಲಿ ಎಲ್ಲ ಮದುಮಕ್ಕಳು ನೀನು ಮಾಡಿಕೊಂಡ ವಿವಾಹವಿಧಿಯಂತೆ ಮಾಡಿಕೊಳ್ಳುತ್ತಾರೆ. ಮದುವೆ ಮಂಟಪಸ್ಥಾಪನ, ನಾಂದೀಮುಖ ಮುಂತಾದ ಕರ್ಮಗಳನ್ನು ಕುಲಧರ್ಮದಂತೆ ವಿಧಿವತ್ತಾಗಿ ಆಚರಿಸು. ಅದರಿಂದ ನೀನು ಧರ್ಮದೇವನೆಂದು ಖ್ಯಾತಿಗೊಳ್ಳುವೆ' ಎಂದು ಯೋಗ್ಯವಾದ ಮಾತುಗಳನ್ನು ಹೇಳಿದ.

ಹರಿಯ ಕೋರಿಕೆಯನ್ನು ಅಂಗೀಕರಿಸಿದ ಹರನು ಲೋಕಾಚಾರದಂತೆ ಮದುವೆಯ ಆಯಾಯ ವಿಧಿಗಳನ್ನು ಮಾಡಿದ. ಶಿವನ ವಿವಾಹಕ್ಕೆ ಬಂದಿದ್ದ ಕಶ್ಯಪ, ಅತ್ರಿ, ವಸಿಷ್ಠ, ಗೌತಮ, ಭಾಗುರಿ, ಗುರು, ಕಣ್ವ, ಬೃಹಸ್ಪತಿ, ಶಕ್ತಿಮುನಿ, ಜಮದಗ್ನಿ, ಪರಾಶರ, ಮಾರ್ಕಾಂಡೇಯ, ಶಿಲಾಪಾಕ, ಅರುಣಪಾಲ, ಅಕೃತಶ್ರಮ, ಅಗಸ್ತ್ಯ, ಚ್ಯವನ, ಗರ್ಗ, ಶಿಲಾದ, ದಧೀಚಿ, ಉಪಮನ್ಯು, ಭರದ್ವಾಜ, ಅಕೃತವ್ರಣ, ಪಿಪ್ಪಲಾದ, ಕುಶಿಕ, ಕೌತ್ಸ, ವ್ಯಾಸ ಮೊದಲಾದ ಮುನಿಗಳು ಬ್ರಹ್ಮನ ಅಪ್ಪಣೆಯಂತೆ ವಿಧಿವತ್ತಾಗಿ ಕರ್ಮಗಳನ್ನು ಮಾಡಿಸಿದರು.

ಆ ಕರ್ಮಗಳಲ್ಲಿ ಬ್ರಹ್ಮ ಅಧಿಕಾರಿಯಾಗಿ ನಿಂತು ಅಭ್ಯುದಯಕ್ಕೆ ಅನುಗುಣವಾದಂತಹ ಎಲ್ಲ ಕರ್ಮಗಳನ್ನು ಮುನಿಗಳೊಡನೆ ನಿರ್ವಹಿಸಿದ. ಮುನಿಗಳು ವೇದೋಕ್ತವಿಧಿಯಂತೆ ಕೌತುಕಬಂಧನ ಕರ್ಮವನ್ನು ಮಾಡಿ ಶಿವನಿಗೆ ರಕ್ಷಾಕಂಕಣವನ್ನು ಕಟ್ಟಿದರು. ವೇದಸೂಕ್ತಗಳಿಂದ ಋಷಿಮುನಿಗಳು ಅನೇಕ ಮಂಗಳ ಕಾರ್ಯಗಳನ್ನು ನೆರವೇರಿಸಿದರು. ಗ್ರಹಮಂಡಲದಲ್ಲಿರುವ ಎಲ್ಲಾ ಗ್ರಹಗಳ ದೋಷವು ನಿವೃತ್ತಿಯಾಗುವಂತೆ ನವಗ್ರಹಪೂಜೆಯನ್ನು ಸಹ ಶಂಕರನಿಂದ ಮಾಡಿಸಿದರು.

ಶಿವ ಸಂತೋಷದಿಂದ ವಿವಾಹಕ್ಕೆ ಯೋಗ್ಯವಾದ ಲೌಕಿಕ ಮತ್ತು ವೈದಿಕ ಕರ್ಮಗಳೆರಡನ್ನೂ ವಿಧಿವತ್ತಾಗಿ ಮಾಡಿ, ಮುನಿವರ್ಯರಿಗೆ ವಂದಿಸಿದ. ಅನಂತರ ದೇವತೆಗಳನ್ನು ಮುನಿಗಳನ್ನು ಮುಂದಿಟ್ಟುಕೊಂಡು ಪರ್ವತಶ್ರೇಷ್ಠವಾದ ಕೈಲಾಸದಿಂದ ಹಿಮಾಲಯಕ್ಕೆ ಹೊರಟ. ಇಲ್ಲಿಗೆ ಶ್ರೀಶಿವಮಹಾಪುರಾಣದಲ್ಲಿ ಪಾರ್ವತೀಖಂಡದ ಮೂವತ್ತೊಂಬತ್ತನೆಯ ಅಧ್ಯಾಯ ಮುಗಿಯಿತು.

ಪಿವಿ ಫ್ಯಾಕ್ಟ್ ಚೆಕ್


ಮಾಹಿತಿ/ವಿಡಿಯೊ ಕಳುಹಿಸಬೇಕಾದ ಸಂಖ್ಯೆ
9606038256

✗ ಯಾವ ಆಧಾರವೂ ಇಲ್ಲದೆ, ವ್ಯಕ್ತಿಯೊಬ್ಬರು ಗಾಳಿಯಲ್ಲಿ ತೇಲುತ್ತಿರುವ ವಿಡಿಯೊವೊಂದು ಇತ್ತೀಚಿನ ದಿನಗಳಲ್ಲಿ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿದೆ. ಯೋಗ ಶಕ್ತಿಯಿಂದ ಇದು ಸಾಧ್ಯವಾಗಿದೆ ಎಂದು ಚರ್ಚಿಸಲಾಗುತ್ತಿದೆ. ಹೈದರಾಬಾದ್‌ನ ವ್ಯಕ್ತಿಯೊಬ್ಬರು ಯೋಗದಿಂದ ಸಿದ್ಧಿಸಿಕೊಂಡ ಶಕ್ತಿಯಿಂದ ಆಗಸದಲ್ಲಿ ಹಕ್ಕಿಯಂತೆ ಹಾರಾಡಲು ಸಾಧ್ಯವಾಗಿದೆ ಎಂದು ವಾಟ್ಸ್‌ಆ್ಯಪ್, ಫೇಸ್‌ಬುಕ್‌ಗಳಲ್ಲಿ ಉಲ್ಲೇಖಿಸಲಾಗಿದೆ. ವಿಜ್ಞಾನಿಗಳೂ ಇದನ್ನು ಕಂಡು ಚಕಿತರಾಗಿದ್ದಾರೆ ಎಂದು ಸಾಮಾಜಿಕ ಜಾಲತಾಣ ಬಳಕೆದಾರರು ಹೇಳಿಕೊಂಡಿದ್ದಾರೆ. ಆದರೆ, ಇದು ತಪ್ಪು ಮಾಹಿತಿ.



✓ ಸಾಮಾಜಿಕ ಜಾಲತಾಣಗಳಲ್ಲಿ ಹರಿದಾಡುತ್ತಿರುವ ಈ ವಿಡಿಯೊದಲ್ಲಿ ಕಾಣಿಸಿಕೊಂಡಿರುವವರು ಹೈದರಾಬಾದ್‌ನ ವಿಘ್ನೇಶ್ ಪ್ರಭು. ಇವರು ವೃತ್ತಿಯಲ್ಲಿ ಅಂತರರಾಷ್ಟ್ರೀಯ ಜಾದೂಗಾರ. ಗಾಳಿಯಲ್ಲಿ ತೇಲುವ ಜಾದೂ ಪ್ರದರ್ಶಿಸಿರುವ ಅವರು, ವಿಡಿಯೊವನ್ನು ತಮ್ಮ ಯೂಟ್ಯೂಬ್ ಖಾತೆಯಲ್ಲಿ ಹಂಚಿಕೊಂಡಿದ್ದಾರೆ. 'ಈಗ ಜಾದೂ ಪ್ರದರ್ಶಿಸುತ್ತೇನೆ' ಎಂದು ಸ್ವತಃ ಅವರೇ ವಿಡಿಯೊದಲ್ಲಿ ಹೇಳಿದ್ದಾರೆ. ಗಾಳಿಯಲ್ಲಿ ಯಾವುದೇ ಆಧಾರ ಇಲ್ಲದೆ ತೇಲುವಂತಹ ಜಾದೂ ರಹಸ್ಯಗಳನ್ನು ವಿವರಿಸುವ ಹಲವಾರು ಯೂಟ್ಯೂಬ್ ವಿಡಿಯೊಗಳು ಲಭ್ಯವಿವೆ. ಕ್ರೇನ್ ಬಳಸಿ ತಂತ್ರಗಾರಿಕೆ ಪ್ರದರ್ಶಿಸಿರುವ ವಿಡಿಯೊಗಳೂ ಇವೆ ಎಂದು 'ನ್ಯೂಸ್‌ಮೀಟರ್' ತಾಣ ವರದಿ ಮಾಡಿದೆ.

ಗುಂಡಣ್ಣ



ಬೆರಗಿನ ಬೆಳಕು
ಗುರುರಾಜ ಕರಜಗಿ

ಡೊಂಬನ ನಡೆ

ತಲೆ ಕೊಡವ ತಳೆದಿರಲು, ಕೈ ಕತ್ತಿ ಪಿಡಿದಿರಲು |
ಬಳುಕುಹಗ್ಗದ ಮೇಲೆ ತಾನಡಿಯನಿಡುತ ||
ಕೆಲಬಲಕೆ ಬೀಳದೆ ಮುನ್ನಡೆವ ಡೊಂಬನುಪಾಯ |
ಕಲೆಯೆ ಜೀವನಯೋಗ – ಮಂಕುತಿಮ್ಮ || 741 ||

ಪದ-ಅರ್ಥ: ಪಿಡಿದಿರಲು = ಹಿಡಿದಿರಲು, ತಾನಡಿಯನಿಡುತ = ತಾನು + ಅಡಿಯನು + ಇಡುತ, ಡೊಂಬನುಪಾಯ = ಡೊಂಬನ + ಉಪಾಯ

ವಾಚ್ಯಾರ್ಥ: ತಲೆಯ ಮೇಲೆ ನೀರು ತುಂಬಿದ ಕೊಡ, ಕೈಯಲ್ಲಿ ಕತ್ತಿ, ಅಲುಗಾಡುವ ಹಗ್ಗದ ಮೇಲೆ ಎಚ್ಚರಿಕೆಯಿಂದ ಹೆಜ್ಜೆಯನ್ನಿಡುತ್ತ, ಕೆಳಗೆ ಬೀಳದೆ, ಮುನ್ನಡೆಯುವ ಡೊಂಬನ ಉಪಾಯದ ಕಲೆಯೇ ಜೀವನ ಯೋಗ.

ವಿವರಣೆ: ಬದುಕು ಎಷ್ಟು ಕಷ್ಟ ಎಂಬುದನ್ನು ಈ ಕಗ್ಗ ಕಣ್ಣಿಗೆ ಕಟ್ಟುವಂತೆ ವಿವರಿಸುತ್ತದೆ. ಒರಟಾದ, ಮೌಲ್ಯಗಳಿಲ್ಲದ ಬದುಕು ಬೇರೆ. ಆದರೆ ಮರ್ಯಾದೆಯಿಂದ, ಬದುಕಿನ ಸೊಗಸು ಕೆಡದಂತೆ, ಜೀವನ ಸಾಗಿಸುವುದು ಕಷ್ಟದ ಕೆಲಸ. ಜಗತ್ತಿನ ಆಕರ್ಷಣೆಗಳಿಗೆ ಸಿಕ್ಕಿ ಹಾಕಿಕೊಳ್ಳದೆ, ತಾವು ನಂಬಿದ ಸಿದ್ಧಾಂತಗಳಿಗೆ ಬದ್ಧರಾಗಿ, ಅಡ್ಡಬಂದವರ, ತೊಂದರೆ ನೀಡಲೆಂದೇ ಮುಂದಾದವರನ್ನು ದ್ವೇಷಿಸದೆ, ಅವರಿಂದ ಪಾರಾಗುತ್ತ, ತಮ್ಮ ಜೀವನದಲ್ಲಿ ಸುಂದರತೆಯನ್ನು ಕಳೆದುಕೊಳ್ಳದಿರುವುದು ಡೊಂಬನ ಸಾಹಸ. ಆತ ತಲೆಯ ಮೇಲೆ ನೀರು ತುಂಬಿದ ಕೊಡ ಹೊತ್ತಿದ್ದಾನೆ, ಕೈಯಲ್ಲಿ ಹರಿತವಾದ ಕತ್ತಿ ಇದೆ. ಆತ ತೂಕದಿಂದ ಹೆಜ್ಜೆ ಇಟ್ಟು ನಡೆಯುವುದು ಬಳಕುವ ಹಗ್ಗದ ಮೇಲೆ. ಒಂದು ಕ್ಷಣ ಹೆಜ್ಜೆ ತಪ್ಪಿದರೆ ಕೆಳಗೆ ಬೀಳುತ್ತಾನೆ. ಹಿಡಿದ ಕತ್ತಿಯೇ ಹಗ್ಗವನ್ನುಕತ್ತರಿಸೀತು. ತಲೆಯ ಮೇಲಿನ ಕೊಡ ಜಾರೀತು. ಹೀಗೆ ತೂಕದಿಂದ ಹಗ್ಗದ ಮೇಲೆ ಒಂದೊಂದೇ ಹೆಜ್ಜೆಯನ್ನಿಟ್ಟು ನಡೆಯುವುದು ಡೊಂಬನ ಕುಶಲತೆ. ಅವನ ಉಪಾಯದಂತೆಯೇ ನಮ್ಮೆಲ್ಲರ ಬದುಕು. ಮೊನ್ನೆ ಸಿರಸಿಯ ಅಕದಾಸ ಗಣಪತಿಭಟ್ಟರ ಬಗ್ಗೆ ಒಂದು ಲೇಖನ ಓದುತ್ತಿದ್ದೆ. ಹುಟ್ಟಿ ಬೆಳೆದದ್ದು ಶ್ರೀಮಂತ ಅಡಿಕೆ ವ್ಯಾಪಾರ ಮಾಡುವ ಮನೆತನದಲ್ಲಿ. ವಿಶಾಲವಾದ ಕೋಟೆಯಂತೆ ಮನೆ. ಮಾಧ್ಯಮಿಕ ಶಿಕ್ಷಣ ಮುಗಿಯುತ್ತಿದ್ದಂತೆ ಸ್ವಾತಂತ್ರ್ಯಕ್ಕಾಗಿ ಗಾಂಧೀಜಿ ನೀಡಿದ ಕರೆ ಸೆಳೆಯಿತು. ಮನೆ, ಕರಪತ್ರಗಳ ತಯಾರಿಕೆಯ ಗುಪ್ತಕೇಂದ್ರ. ಅದಷ್ಟೇ ಅಲ್ಲ, ಒಬ್ಬ ಬಾಲವಿಧವೆಯ ಪರಿಸ್ಥಿತಿ ಮನ ಕಲಕಿತು. ವಿಧವಾ ವಿವಾಹ ಪ್ರಚಾರ ಕಾರ್ಯ ಪ್ರಾರಂಭಿಸಿದರು. ಅದಕ್ಕೆ ಬಂದ ಅಡ್ಡಿ ಆತಂಕಗಳೆಷ್ಟೋ? ಅಡಿಕೆಯ ವ್ಯಾಪಾರ ಹಿಂದಕ್ಕೆ ಹೋಯಿತು. ಸಮಾಜದ ಸಂಪ್ರದಾಯವಾದಿಗಳ ಟೀಕೆ, ಹೀಯಾಳಿಕೆ. ಅವರಿಗೆ ಸಾಮಾಜಿಕ ಬಹಿಷ್ಕಾರ. ಭಟ್ಟರು ವಿರೋಧವನ್ನು ಗಮನಿಸದೆ, ತಮ್ಮ ಮನೆಯನ್ನೇ ವಿಧವಾ ವಿವಾಹದ ಕಲ್ಯಾಣಮಂಟಪವನ್ನಾಗಿ ಮಾಡಿ ನೂರಾರು ಬಾಲವಿಧವೆಯರ ಮದುವೆ ಮಾಡಿಸಿದರು. ಅವರು ತರುಣರಿದ್ದಾಗಲೇ ಪತ್ನಿ ತೀರಿದರು. ತಾವು ಪ್ರತಿಪಾದಿಸುತ್ತಿದ್ದ ತತ್ವದಂತೆ ಬಾಲವಿಧವೆಯಾದ ಸಾಗರದ ಮಂಕಾಳಮ್ಮ ಎಂಬುವರನ್ನು ಮದುವೆಯಾದರು. ಕಗ್ಗ ಹೇಳುವ ಡೊಂಬನಂತೆ, ತಾವು ನಂಬಿದ ಕಾರ್ಯದ ಮೇಲಿನ ಕಣ್ಣು ತೆಗೆಯದೆ, ವಿರೋಧಗಳನ್ನು ಗಮನಿಸದೆ, ವೈಯಕ್ತಿಕ ನಷ್ಟ, ಅಪಾಯಗಳನ್ನು ಗಮನಿಸದೆ ಬದುಕಿದ ಗಣಪತಿ ಭಟ್ಟರು ಸ್ವಾತಂತ್ರ್ಯ ಬರುವುದಕ್ಕೆ ಮೊದಲೇ (1944 ಜೂನ್ 26) ನಿಧನರಾದರು. ಆದರೆ ಅವರ ಕಾರ್ಯ ಶಾಶ್ವತವಾಯಿತು. ಕೆಲವು ಧೀಮಂತರ ಬದುಕು ಹೀಗೆ ಎದ್ದು ಕಾಣುತ್ತದೆ. ಆದರೆ ನಮ್ಮೆಲ್ಲರ ಬದುಕೂ, ಸಣ್ಣ ಪ್ರಮಾಣದಲ್ಲಾದರೂ ಡೊಂಬನ ಬದುಕೇ. ಅದೇ ನಮ್ಮ ಜೀವನ ಯೋಗ.

ದಿನ ಭವಿಷ್ಯ
ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಸೋಮವಾರ ಅಕ್ಟೋಬರ್ 24, 2022

ಶ್ರೀ ಶುಭಕೃತ್ ನಾಮ ಸಂವತ್ಸರ ದಕ್ಷಿಣಾಯನ ಶರತ್ ಋತು ತಿಥಿ: ಆಶ್ವಯುಜ ಕೃಷ್ಣ ಚತುರ್ದಶಿ ಗಂ. 17-28 ನಕ್ಷತ್ರ: ಹಸ್ತ ಗಂ. 14-42 ಯೋಗ: ವೈಧೃತಿ ಗಂ. 14-32, ಕರಣ: ಶಕುನಿ ಗಂ. 17-28, ತುಲಾ ಮಾಸದ 06 ನೇ ದಿನ. ರಾಹುಕಾಲ : ಬೆಳಿಗ್ಗೆ 07-30 – 09:00
ಸೂರ್ಯೋದಯ : 06-26 ಸೂರ್ಯಾಸ್ತ : 06-03
ಮುಸ್ಲಿಂ ದಿನಾಂಕ : 27 ರಬಿಉಲ್ಲಾವಲ್
ದಿನ ವಿಶೇಷ : ನರಕ ಚತುರ್ದಶಿ, ಲಕ್ಷ್ಮಿ ಪೂಜಾ, ಮಹಾವೀರ ನಿರ್ವಾಣ (ಜೈನ್)
ಅದೃಷ್ಟ ಸಂಖ್ಯೆ : 1, 7

ಮೇಷ: ರಾಜಕೀಯ ಭವಿಷ್ಯಕ್ಕೆ ಪ್ರವೇಶ ಮಾಡುವ ಬಗ್ಗೆ ನಿರ್ಧಾರ ಕೈಗೊಳ್ಳಲು ಅತಿಯಾದ ಚಿಂತನೆ ನಡೆಸುವಿರಿ. ಆರಕ್ಷಕ ಅಧಿಕಾರಿಗಳಿಗೆ ಕೆಲಸಗಳ ಒತ್ತಡ ಕಡಿಮೆಯಾಗಲಿದೆ. ವೈಯಕ್ತಿಕ ಕೆಲಸಗಳಿಗೆ ಯಾವುದೇ ಅಡಚಣೆ ಇರುವುದಿಲ್ಲ.

ವೃಷಭ: ಸಮೀಪವರ್ತಿಗಳ ಸಲಹೆ ಸಹಕಾರದಿಂದ ವ್ಯಾಪಾರ ವಹಿವಾಟುಗಳಲ್ಲಿನ ಆದಾಯದಲ್ಲಿ ಗಣನೀಯ ಏರಿಕೆ ಕಾಣಲಿರುವಿರಿ. ಪಾಲುದಾರರೊಂದಿಗೆ ಹಣಕಾಸಿನ ವಿಷಯದಲ್ಲಿ ಬಿಗಿ ಹಿಡಿತ ಪಡೆಯುವುದು ಅಗತ್ಯವಾಗುವುದು.

ಮಿಥುನ: ವಿಶ್ರಾಂತಿಯಿಲ್ಲದ ಕಾರ್ಯದೊತ್ತಡದಿಂದ ಅನಾರೋಗ್ಯ ಉಂಟಾಗಬಹುದು. ಬಂಧುಗಳಲ್ಲಿ ಅನಗತ್ಯವಾದ ವಿವಾದಗಳು ಬೇಡ ಹಾಗೂ ಕಳೆದುಕೊಂಡಿರುವ ವಿಶ್ವಾಸವನ್ನು ಪುನಃ ಸಂಪಾದಿಸುವ ಬಗ್ಗೆ ಗಮನಹರಿಸಿ.

ಕರ್ಕಾಟಕ: ತಂದೆಯ ಅಥವಾ ಹಿರಿಯರ ಮಾತಿಗೆ ಎದುರಾಡಬೇಡಿ, ನಿಮ್ಮ ಶ್ರೇಯಸ್ಸಿಗೆ ಅಡ್ಡಿಯಾಗುವುದು. ನೀವು ತಪ್ಪನ್ನು ಮಾಡದಿದ್ದರೂ ಅದರ ಅಪವಾದ ನಿಮ್ಮನ್ನು ಸುತ್ತುಕೊಳ್ಳುವ ಪ್ರಸಂಗ ನಡೆಯಬಹುದು.

ಸಿಂಹ: ಅತಿಯಾದ ಸೋಮಾರಿತನ ನಿಮ್ಮನ್ನು ಆವರಿಸಿಕೊಳ್ಳಲಿದೆ. ಹಣವನ್ನು ಸಂಪಾದಿಸುವ ಬಗ್ಗೆ ಎಷ್ಟು ಗಮನಹರಿಸುವಿರೋ ಗಳಿಸಿದ ಹಣವನ್ನು ಸದ್ಬಳಕೆ ಮಾಡುವ ಬಗ್ಗೆಯೂ ಅಷ್ಟೇ ಗಮನಹರಿಸಿ. ಗಣಪತಿಯನ್ನು ಆರಾಧಿಸಿ.

ಕನ್ಯಾ: ಬೇರೆಯವರ ಅಧೀನದಲ್ಲಿ ಕೆಲಸ ನಿರ್ವಹಿಸಬಾರದು, ಸ್ವತಂತ್ರವಾಗಿರಬೇಕೆಂಬ ಆಸೆಯು ನಿಮ್ಮನ್ನು ಕಾಡಲಿದೆ. ನೂತನ ವಾಹನವನ್ನು ಖರೀದಿಸಬೇಕೆಂಬ ನಿಮ್ಮ ಕನಸು ನನಸಾಗುವುದು.

ತುಲಾ: ಭ್ರಮೆಯ ಬದುಕಿನಲ್ಲಿರುವ ನಿಮಗೆ ಸಣ್ಣ-ಪುಟ್ಟ ಘಟನೆಗಳೂ ಭಯ ಹುಟ್ಟಿಸಬಹುದು. ಧಾರ್ಮಿಕ ವೃತ್ತಿಯನ್ನು ನಡೆಸುವ ವ್ಯಕ್ತಿಗಳಿಗೆ ಸಾಧಿಸಿದ ಖುಷಿ ಸಿಗಲಿದೆ. ತೈಲ ಉತ್ಪನ್ನ ವಸ್ತುಗಳ ಮಾರಾಟದಿಂದ ಲಾಭ ಪಡೆಯುವಿರಿ.

ವೃಶ್ಚಿಕ: ಮಕ್ಕಳ ಶೈಕ್ಷಣಿಕ ವಿಚಾರದಲ್ಲಿ ಹೆಚ್ಚಿನ ಮುತುವರ್ಜಿ ತೋರುವುದು ಉತ್ತಮ. ಭೂ ಸಂಬಂಧದ ವ್ಯವಹಾರದಲ್ಲಿ ಅನಿಸಿಕೆಗಳನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿದಲ್ಲಿ ವ್ಯವಹಾರಗಳು ಕೈಗೂಡಲಿದೆ. ಬಾಂಧವ್ಯ ವೃದ್ಧಿಯಾಗಲಿದೆ.

ಧನು: ಸ್ನೇಹಿತರೊಂದಿಗೆ ಸಂತೋಷವಾಗಿ ಕಾಲ ಕಳೆಯುವಿರಿ. ಹಣ್ಣು ಹೂ ವ್ಯಾಪಾರಸ್ಥರಿಗೆ ವಿಶೇಷ ಲಾಭ. ರಾಜಕೀಯ ಪಕ್ಷವೊಂದಕ್ಕೆ ಸೇರಲು ಒತ್ತಾಯ ಬರುವುದು. ತಂದೆ ಮಕ್ಕಳಲ್ಲಿ ಅನ್ಯೋನ್ಯತೆ ಕಡಿಮೆಯಾಗದಂತೆ ಜಾಗ್ರತೆ ವಹಿಸಿ.

ಮಕರ: ನಿಮ್ಮ ಅಭಿವೃದ್ಧಿಗೆ ಅಡೆತಡೆಗಳು ಉಂಟಾಗಬಹುದು. ಶತ್ರುಗಳ ಉಪಟಳವನ್ನು ತಡೆಯಲು ತಂತ್ರಗಾರಿಕೆಯನ್ನು ಮಾಡಬೇಕಾಗುತ್ತದೆ. ಹಿಂದಿನ ದಿನಗಳಿಗೆ ಹೋಲಿಸಿದರೆ ಈ ದಿನ ಸಂಸಾರ ನಿರ್ವಹಣೆ ಸುಲಭವೆನಿಸುವುದು.


ಕುಂಭ: ಅವಿವಾಹಿತರಿಗೆ ಅವರ ಮನಸ್ಸಿಗೆ ಇಷ್ಟವಾಗುವ ಸಂಬಂಧಗಳು ಈ ದಿನ ಪ್ರಾಪ್ತಿಯಾಗುತ್ತದೆ. ಮೇಧಾವಿಗಳ ಮೂಲಕ ಧನ ಸಂಪಾದನೆ ಹೊಂದುವಿರಿ. ಕುಟುಂಬ ವರ್ಗದಲ್ಲಿ ಆರೋಗ್ಯ ಉತ್ತಮವಾಗಿ ಇರುವುದು.

ಮೀನ: ಆಪ್ತರ ಕಷ್ಟಗಳ ಕಡೆಗೆ ಗಮನ ಹರಿಸುವುದು ಸಾಧ್ಯವಾಗುತ್ತದೆ. ಹಾಗೂ ಅದರಿಂದ ಪುಣ್ಯ ಸಂಪಾದನೆಯಾಗುವುದು. ಮರಕೆಲಸ ಮಾಡುವವರಿಗೆ ಹೆಚ್ಚಿನ ಅವಕಾಶಗಳು ಬಂದರೂ ಕೆಲಸಕ್ಕೆ ಸೋಮಾರಿತನ ಅಡ್ಡಬರುವುದು.

ಪದಬಂಧ 5118
– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1.ನೆಲದಲ್ಲಿ ಕೊರೆದು ಮಾಡಿರುವ ಗುಪ್ತದಾರಿ (5)
3.ಕೂಸಿನ ತಲೆಗೆ ಕಟ್ಟುವ ಟೊಪ್ಪಿಗೆ (3)
5.ವ್ಯವಧಾನದಿಂದ ಕಲಿತಿರುವ ಕಳೆಯುವ ಲೆಕ್ಕ (5)
7.ರಗಳೆ ಮಾಡುತ್ತಿರುವವನ ಮುಂದಿರುವ ವಿಷ (3)
8.ಇದಂತೂ ಕೆಲಸಕ್ಕೆ ಬಾರದ ಮಾತು (5)
10.ಬಯ್ಯಲಿಕ್ಕೇ ಈ ಆಸೆಯೂ ಕಾರಣವೇ? (3)
11.ಅದೇ ತಾನೆ ಲಗ್ನವಾಗದ ಗಂಡ ಹೆಂಡತಿ (5)
14.ಮುಗಿಲು ನೋಡಲು ಆವರಿಸಿರುವ ಭಯ! (3)
15.ಈತ ಕೊಳ್ಳೆ ಹೊಡೆಯುವವನು (5)

ಮೇಲಿಂದ ಕೆಳಕ್ಕೆ
1.ಕೇಳಲು ಬಲು ಹಿತಕರವಾದುದು (3)
2.ಗಣಿತ ಬಲ್ಲವನೀತ (3)
4.ನಿರಾಳವಾಗಿ ಕಾಣಿಸುತ್ತಿರುವುದು ತುಂಬಾ ಅಪರೂಪ! (3)
6.ಕ್ಷಣ ಕ್ಷಣಕ್ಕೂ ಸೊಗಸಾಗಿ ಕಾಣುತ್ತಿರುವ ಶುಭಚಿಹ್ನೆ! (3)
7.ಜಾಗಟೆ ಬಾರಿಸಿದ್ದಕ್ಕೇ ಈ ಗೊಂದಲ! (3)
8.ಧಾನ್ಯ ಕುಟ್ಟಲು ಬಳಸುತ್ತಿದ್ದ ಸಾಧನ (3)
9.ಬೊಕ್ಕಸವನ್ನೇ ನೋಡುತ್ತಿರುವ ಅಸುರ (3)
10.ಬದಿಯಲ್ಲಿರುವ ಜೈನ ದೇವಾಲಯ (3)
12.ದಂಗೆಯೊಳಗೆ ಕಾಣುತ್ತಿರುವ ಪಲ್ಲಕ್ಕಿ (3)
13.ತೀರದ ಬಳಿಯಲ್ಲಿ ಕವಿದಿರುವ ಅಂಧಕಾರ (3)



5117ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಉಪಯೋಗ 3.ಒಡ್ಡೋಲಗ
5.ಝಲುಮೆ 6.ರಿಕಾಪು
8.ದುರುಳ 9.ನಿಮಿಷ
10.ನಗದು 12.ತಾಲವ್ಯ
14.ರಣಹೇಡಿ 15.ನತದೃಷ್ಟ.

ಮೇಲಿಂದ ಕೆಳಕ್ಕೆ:
1.ಉಪಕಾರಿ 2.ಗಲೀಜು
3.ಒಲುಮೆ 4.ಗಟ್ಟಿಕುಳ
7.ಪುರುಷ 8.ದುಮ್ಮಾನ
9.ನಿರುತ್ತರ 11.ದುರಾದೃಷ್ಟ
12.ತಾಯ್ನುಡಿ 13.ವ್ಯಸನ

ಸುಡೊಕು 5504

	7			6			5	3
2					5			
		1	2			4		9
		2					4	
4				9				5
	1		3		2		7	
	2			1		8		
1			8					4
	8			3	7		1	

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5503 ಸುಡೊಕು

7	9	2	5	3	1	4	6	8
4	1	5	6	8	7	3	2	9
6	8	3	4	9	2	1	5	7
5	3	4	7	1	9	6	8	2
1	2	6	8	5	4	7	9	3
8	7	9	2	6	3	5	4	1
9	4	7	3	2	5	8	1	6
3	6	1	9	4	8	2	7	5
2	5	8	1	7	6	9	3	4

‘ಕೆರ್ಸಾನ್‌ನಿಂದ ರಷ್ಯಾ ಸೇನಾ ಅಧಿಕಾರಿಗಳು ಹಿಂದಕ್ಕೆ’

ಕೀವ್ (ಎಪಿ): ಉಕ್ರೇನ್ ಪಡೆಗಳು ನಿಪ್ರೊ ನದಿ ದಾಟಿ ಮುಂದುವರಿಯುವುದಂತೆ ತಡೆಯಲು ರಷ್ಯಾ ಇತ್ತೀಚೆಗಷ್ಟೆ ತನ್ನ ಸ್ವಾಧೀನಕ್ಕೆ ಸೇರಿಸಿಕೊಂಡು, ಸೇನಾಡಳಿತ ಹೇರಿರುವ ಕೆರ್ಸಾನ್ ನಗರದಿಂದ ತನ್ನಲ್ಲ ಸೇನಾಧಿಕಾರಿಗಳನ್ನು ಹಿಂಪಡೆದಿದೆ ಎಂದು ಸೇನಾ ಚಿಂತಕರ ಚಾವಡಿ ದಿ ಇನ್‌ಸ್ಟಿಟ್ಯೂಟ್ ಫಾರ್ ದಿ ಸ್ಟಡಿ ಆಫ್ ವಾರ್ ಹೇಳಿದೆ.

ರಷ್ಯಾದ ಸೇನಾಧಿಕಾರಿಗಳ ವಾಪಸಾತಿ ಪೂರ್ಣಗೊಂಡ ನಂತರ ಉಕ್ರೇನ್ ಪಡೆಗಳ ಪ್ರತಿದಾಳಿ ವಿಳಂಬಗೊಳಿಸಲು ನದಿಯ ಇನ್ನೊಂದು ಬದಿಯಲ್ಲಿ ಅನನುಭವಿ ಸೇನಾ ಪಡೆಗಳನ್ನು ನಿಯೋಜಿಸುತ್ತಿದೆ. ಕೆರ್ಸಾನ್ ಮತ್ತು ರುಪುರಿಯನ್ನು ಪ್ರದೇಶಗಳಲ್ಲಿ ಪ್ರತಿದಾಳಿ ಮುಂದುವರಿದಿದೆ ಎಂದು ಉಕ್ರೇನ್ ಸೇನೆ ಹೇಳಿದೆ. ಕೆರ್ಸಾನ್‌ನ ಎಲ್ಲ ನಿವಾಸಿಗಳು ತಕ್ಷಣವೇ ನಗರ ತೊರೆಯುವಂತೆ ಉಕ್ರೇನ್‌ನಲ್ಲಿನ ರಷ್ಯಾದ ಅಧಿಕಾರಿಗಳು ಹೇಳಿದ್ದರು.

ಸೋನಿಯಾ ನೇತೃತ್ವದ ಸಂಸ್ಥೆಗಳಿಂದ ನಿಯಮ ಉಲ್ಲಂಘನೆ

ದೇಣಿಗೆ: 2 ಸಂಸ್ಥೆಗಳ ಲೈಸೆನ್ಸ್ ರದ್ದು

ನವದೆಹಲಿ (ಪಿಟಿಐ): ಕಾಂಗ್ರೆಸ್ ನಾಯಕಿ ಸೋನಿಯಾಗಾಂಧಿ ನೇತೃತ್ವದ ಎರಡು ಸಂಸ್ಥೆಗಳಿಗೆ, ವಿದೇಶಿ ದೇಣಿಗೆ ನಿಯಂತ್ರಣ ಕಾಯ್ದೆಯಡಿ (ಎಫ್‌ಸಿಆರ್‌ಎ) ನೀಡಲಾಗಿದ್ದ ಲೈಸೆನ್ಸ್ ಅನ್ನು ಕೇಂದ್ರ ಸರ್ಕಾರ ರದ್ದುಪಡಿಸಿದೆ.

ನಿಯಮಗಳ ಉಲ್ಲಂಘನೆ ಹಿನ್ನೆಲೆಯಲ್ಲಿ ರಾಜೀವ್‌ಗಾಂಧಿ ಫೌಂಡೇಷನ್ (ಆರ್‌ಜಿಎಫ್) ಮತ್ತು ರಾಜೀವ್‌ಗಾಂಧಿ ಚಾರಿಟಬಲ್ ಟ್ರಸ್ಟ್ (ಆರ್‌ಜಿಸಿಟಿ) ನೀಡಲಾಗಿದ್ದ ಲೈಸೆನ್ಸ್ ರದ್ದುಪಡಿಸಲಾಗಿದೆ ಎಂದು ಗೃಹ ಸಚಿವಾಲಯದ ಅಧಿಕಾರಿಗಳು ತಿಳಿಸಿದ್ದಾರೆ.

ಆದಾಯ ತೆರಿಗೆ ವಿವರ ದಾಖಲೆ ಸಲ್ಲಿಕೆಯಲ್ಲಿ ಲೋಪಗಳಿವೆ. ಹಣ ದುರ್ಬಳಕೆ ಆಗಿದೆ. ಚೀನಾ ಸೇರಿ ವಿವಿಧ ದೇಶಗಳಿಂದ ಬಂದಿದ್ದ ಹಣ ಅಕ್ರಮವಾಗಿ ವರ್ಗಾವಣೆಯಾಗಿದೆ ಎಂದು ಈ ಕುರಿತು ತನಿಖೆ ನಡೆಸಿದ್ದ ಅಂತರ ಸಚಿವಾಲಯ ಸಮಿತಿ ವರದಿ ನೀಡಿತ್ತು ಎಂದು ಹೇಳಿಕೆ ತಿಳಿಸಿದೆ.

ಈ ಎರಡೂ ಸಂಸ್ಥೆಗಳ ಟ್ರಸ್ಟಿಗಳಲ್ಲಿ ಮಾಜಿ ಹಣಕಾಸು ಸಚಿವ ಪಿ.ಚಿದಂಬರಂ, ಸಂಸದ ರಾಹುಲ್ ಗಾಂಧಿ, ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ, ಮೊಂಟೆಕ್ ಸಿಂಗ್ ಅಹ್ಲುವಾಲಿಯಾ, ಸುಮನ್ ದುಬೆ, ಅಶೋಕ್ ಗಂಗೂಲಿ ಸೇರಿದ್ದಾರೆ.

ಆರ್‌ಜಿಎಫ್ ಅನ್ನು 1991ರಲ್ಲಿ ಸ್ಥಾಪಿಸಲಾಗಿದ್ದು, ಆರೋಗ್ಯ, ವಿಜ್ಞಾನ, ತಂತ್ರಜ್ಞಾನ ಕ್ಷೇತ್ರ ಮತ್ತು ಮಕ್ಕಳು, ಅಂಗವಿಕಲರಿಗೆ ನೆರವು ಕಾರ್ಯದಲ್ಲಿ ತೊಡಗಿಕೊಂಡಿತ್ತು. ಆರ್‌ಜಿಸಿಟಿ ಅನ್ನು 2002ರಲ್ಲಿ ಸ್ಥಾಪಿಸಿದ್ದು ಇದು ನಿರ್ಗತಿಕರ ಅಭಿವೃದ್ಧಿ, ಗ್ರಾಮೀಣ ಅಭಿವೃದ್ಧಿಗೆ ಒತ್ತು ನೀಡಿತ್ತು.

ಬಿಜೆಪಿ ಸ್ವಾಗತ: ಎರಡು ಸಂಸ್ಥೆಗಳ ಲೈಸೆನ್ಸ್ ರದ್ದುಪಡಿಸಿದ ಸರ್ಕಾರದ ಕ್ರಮವನ್ನು ಬಿಜೆಪಿ ಸ್ವಾಗತಿಸಿದೆ. 'ಗಾಂಧಿ ಕುಟುಂಬ ಮತ್ತು ಅವರಿಗೆ ಸಂಬಂಧಿಸಿದ ಸಂಸ್ಥೆಗಳು ಕಾನೂನಿಗಿಂತ ದೊಡ್ಡವಲ್ಲ' ಎಂದು ಬಿಜೆಪಿ ವಕ್ತಾರ ಸಂಬಿತ್ ಪಾತ್ರಾ ಪ್ರತಿಕ್ರಿಯಿಸಿದ್ದಾರೆ.

‘ಜನರ ಗಮನ ಬೇರೆಡೆ ಸೆಳೆಯುವ ತಂತ್ರ’

'ದೇಶವು ಹಲವಾರು ಸಮಸ್ಯೆಗಳನ್ನು ಎದುರಿಸುತ್ತಿದೆ. ಅವುಗಳಿಂದ ಜನರ ಗಮನ ಬೇರೆಡೆ ಸೆಳೆಯುವ ಉದ್ದೇಶದಿಂದ ಬಿಜೆಪಿಯು ರಾಜೀವ್‌ಗಾಂಧಿ ಫೌಂಡೇಷನ್ (ಆರ್‌ಜಿಎಫ್) ಮತ್ತು ರಾಜೀವ್‌ಗಾಂಧಿ ಚಾರಿಟಬಲ್ ಟ್ರಸ್ಟ್‌ಗೆ (ಆರ್‌ಜಿಸಿಟಿ) ನೀಡಲಾಗಿದ್ದ ಪರವಾನಗಿಗಳನ್ನು ರದ್ದುಪಡಿಸಿದೆ' ಎಂದು ಕಾಂಗ್ರೆಸ್ ಟೀಕಿಸಿದೆ.

'ಬಿಜೆಪಿಯು ಹಳೆಯ ದುರಾರೋಪಗಳನ್ನು ಮುಂದಿಟ್ಟುಕೊಂಡು ಪರವಾನಗಿ ರದ್ದು ಮಾಡಿದೆ. ಕಾಂಗ್ರೆಸ್ ಪಕ್ಷದ ಗೌರವಕ್ಕೆ ಧಕ್ಕೆ ತರುವುದು ಹಾಗೂ ಸಮಸ್ಯೆಗಳಿಂದ ಜನರ ಗಮನ ಬೇರೆಡೆ ಸೆಳೆಯುವುದು ಆ ಪಕ್ಷದ ಉದ್ದೇಶ' ಎಂದು ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ (ಸಂವಹನ) ಜೈರಾಮ್ ರಮೇಶ್ ದೂರಿದ್ದಾರೆ.

'ದೇಶದಲ್ಲಿ ಆರ್ಥಿಕ ಬಿಕ್ಕಟ್ಟು ಸೃಷ್ಟಿಯಾಗಿದೆ. ರೂಪಾಯಿ ಮೌಲ್ಯ ಕುಸಿಯುತ್ತಿದೆ. ಬೆಲೆ ಏರಿಕೆ ಹಾಗೂ ನಿರುದ್ಯೋಗ ಸಮಸ್ಯೆಯಿಂದ ಜನ ಬೇಸತ್ತಿದ್ದಾರೆ' ಎಂದೂ ಹರಿಹಾಯ್ದಿದ್ದಾರೆ.

ಸಂಭ್ರಮವೇ ಮೈದಳೆವ ಹಬ್ಬ: ದೀಪಾವಳಿ

• ನವೀನ ಗಂಗೋತ್ರಿ



ಹಬ್ಬಗಳ ಸಾಲಿನಲ್ಲಿ ‘ದೀಪಾವಳಿ’, ‘ದೀಪವಳ್ಳಿ’, ‘ದೀಪಪ್ರತಿಪದೋತ್ಸವ’ ಇತ್ಯಾದಿ ಹೆಸರಿನ ದೀಪಗಳ ಹಬ್ಬಕ್ಕೆ ವಿಶಿಷ್ಟವಾದ ಸ್ಥಾನವಿದೆ. ಏಕೆಂದರೆ, ಉಳಿದ ಬಹುತೇಕ ಹಬ್ಬಗಳಂತೆ ಇದು ಆರಾಧನೆಯನ್ನು ಕೇಂದ್ರವಾಗುಳ್ಳ ಹಬ್ಬವಲ್ಲ; ಬದಲಿಗೆ ಲೌಕಿಕ ಬದುಕಿನ ಸೊಗಸನ್ನು ಮತ್ತು ಮಾನವೀಯ ಸಂತಸಗಳನ್ನು ಸಂಭ್ರಮಿಸುವ ಹಬ್ಬ. ಕರ್ನಾಟಕದ ಬಹುಭಾಗದಲ್ಲಿ ಈ ಹಬ್ಬವನ್ನು ದೊಡ್ಡ ಹಬ್ಬವೆಂದು ಕರೆಯುವ ರೂಢಿಯೂ ಇದೆ. ದೀಪಾವಳಿಯು ಸಾಂಪ್ರದಾಯಿಕವಾಗಿ ಐದು ದಿನಗಳ ಹಬ್ಬವಾಗಿದ್ದರೂ ವ್ಯಾಪಕವಾಗಿ ಎರಡು ದಿನಗಳ ಸಂಭ್ರಮವನ್ನು ಆಚರಿಸುವುದು ವಾಡಿಕೆ.

ಇಂದು ಏಷ್ಯಾದ ಸೀಮೆಯನ್ನೂ ದಾಟಿ ಯುರೋಪ್ ಮತ್ತು ಅಮೆರಿಕದಲ್ಲಿಯೂ ದೀಪಾವಳಿಯು ಜನಪ್ರಿಯವಾಗುತ್ತಿರುವುದನ್ನು ಕಾಣಬಹುದು. ಸಿಂಗಪುರ, ಮಲೇಷ್ಯಾ, ಮಾರಿಷಸ್, ಶ್ರೀಲಂಕಾ, ಮ್ಯಾನ್ಮಾರ್, ಬಾಂಗ್ಲಾ, ಪಾಕಿಸ್ತಾನ, ನೇಪಾಳ, ಫಿಜಿಗಳಲ್ಲಿಯೂ ದೀಪಾವಳಿಯ ಆಚರಣೆ ಇದೆ. ಇತ್ತೀಚೆಗೆ ಅಮೆರಿಕದ ಕೆಲವು ರಾಜ್ಯಗಳಲ್ಲಿ ದೀಪಾವಳಿಗೆ ಸಾರ್ವಜನಿಕ ರಜೆ ಘೋಷಿಸುವ ಪ್ರಸ್ತಾವನೆಯೂ ಚಾಲ್ತಿಯಲ್ಲಿದೆ. ಈ ಹಬ್ಬವನ್ನು ಹಿಂದೂ ಸಮುದಾಯಗಳಲ್ಲದೆ ಜೈನ, ಸಿಕ್ಖ, ಬೌದ್ಧರು ಸಹ ಬೇರೆ ಬೇರೆ ಹಿನ್ನೆಲೆಯಲ್ಲಿ ಆಚರಿಸುತ್ತಾರೆ.

ಇಂದು ನರಕ ಚತುರ್ದಶಿ

ದೀಪಾವಳಿಯೊಂದಿಗೆ ಮಿಳಿತವಾಗಿರುವ ಕಥೆಗಳು ಹಲವಾರು. ಅವುಗಳಲ್ಲಿ ಪ್ರಸಿದ್ಧವಾಗಿರುವ ಪೌರಾಣಿಕ ಕಥೆಗಳೆಂದರೆ ರಾಮನ ಅಯೋಧ್ಯಾಗಮನ, ಲಕ್ಷ್ಮೀಸಂಭವ ಮತ್ತು ನರಕಾಸುರ ವಧೆ. ದಶಶಿರನಾದ ರಾವಣನ್ನು ರಾಮನು ತರಿದು ಮುಗಿಸಿದ್ದು ವಿಜಯದಶಮಿ ಯಂದು. ಅದಕ್ಕಾಗಿಯೇ ವಿಜಯದಶಮಿಯನ್ನು ದಶಹರ/ದಸರಾ ಎಂದು ಕರೆಯುವುದು ರೂಢಿ. ಅಲ್ಲಿಂದಾಚೆ ಇಪ್ಪತ್ತು ದಿನಕ್ಕೆ ಲಂಕೆಯಿಂದ ರಾಮನು ಅಯೋಧ್ಯೆಯನ್ನು ತಲುಪುತ್ತಾನೆ ಎಂದಿಟ್ಟುಕೊಂಡರೆ, ಅದು ದೀಪಾವಳಿಯ ಸಮಯಕ್ಕೆ ಸರಿಹೊಂದುತ್ತದೆ. 14 ವರ್ಷಗಳಿಂದ ಅಯೋಧ್ಯೆಯಲ್ಲಿ ಕವಿದಿದ್ದ ಕತ್ತಲೆಯನ್ನು ಕಳೆಯುವ ಅಕಳಂಕ ಬೆಳಕಿನಂತೆ ರಾಮ ಅಯೋಧ್ಯೆಗೆ ಮರಳಿದ. ಅದರ ನೆನಪಲ್ಲಿ ಅಯೋಧ್ಯೆಯ ದೀಪಾವಳಿಗೆ ಲಕ್ಷ ಲಕ್ಷ ದೀಪಗಳನ್ನು ಬೆಳಗುವುದನ್ನು ಇವತ್ತಿಗೂ ನಾವು ಸಾಕ್ಷಾತ್ಕರಿಸಿಕೊಳ್ಳಬಹುದು.

ದೀಪಾವಳಿಯ ಅಂಗವಾಗಿ ಭಾರತೀಯ ಉಪಖಂಡದ ಬಹುತೇಕ ಎಲ್ಲಕಡೆ ಆಚರಣೆಯಲ್ಲಿರುವ ಸಂಪ್ರದಾಯಗಳಲ್ಲಿ ಲಕ್ಷ್ಮೀಪೂಜೆ ಪ್ರಸಿದ್ಧವಾದ್ದು. ‘ಧನತ್ರಯೋದಶಿ’ ಅಥವಾ ‘ಧನ್ ತೇರಸ್’ ಎಂದು ಆಚರಿಸಲ್ಪಡುವ ಈ ಹಬ್ಬ ಸಮೃದ್ಧಿಯ ದೇವತೆಯಾದ ಲಕ್ಷ್ಮೀಯನ್ನು ಕುರಿತಾದ್ದು. ದೇವಾಸುರರು ಅಮೃತಪ್ರಾಪ್ತಿಗಾಗಿ ಹಾಲ್ಗಡಲನ್ನು ಕಡೆವಾಗ ದೊರೆತ ಮಹತ್ತಮ ಉಪೋತ್ಪನ್ನಗಳಲ್ಲಿ ‘ಲಕ್ಷ್ಮೀ’ ಎಂಬ ಸಂಪತ್ತಿನ ದೇವತೆಯೂ ಒಬ್ಬಳು. ಇದೇ ಹಿನ್ನೆಲೆಯಲ್ಲಿ ದೀಪಾವಳಿ ಅಮಾವಾಸ್ಯೆಯ ಹಿಂದಿನ ತ್ರಯೋದಶಿಯಂದು ಲಕ್ಷ್ಮೀಪೂಜೆಯನ್ನು ಆಚರಿಸಲಾಗುತ್ತದೆ. ಸ್ವಚ್ಛತೆ ಮತ್ತು ನವತೆಯಿರುವಲ್ಲಿ ನೆಲೆಸುವ ದೇವತೆ ಇವಳಾದ್ದರಿಂದ ಲಕ್ಷ್ಮೀಪೂಜೆಗೂ ಮುಂಚೆ ಮನೆಯನ್ನು ಸ್ವಚ್ಛಗೊಳಿಸುವ, ಇರುವುದನ್ನೇ ತೊಳೆದು, ಬೆಳಗಿ, ಹೊಸದನ್ನಾಗಿಸುವ ಕಾರ್ಯವೂ ದೀಪಾವಳಿಯ ಭಾಗವೇ. ಇದು ಲಕ್ಷ್ಮಿಯ ವಿರುದ್ಧ ಸ್ವಭಾವದ ಜ್ಯೇಷ್ಠಾದೇವಿಯನ್ನು, ಅಲಕ್ಷ್ಮೀ ಅಥವಾ ದಾರಿದ್ರ್ಯ ತೊಡೆದುಹಾಕುವ ಪ್ರಕ್ರಿಯೆಯೂ ಹೌದು. ಅಶುಚಿ ಮತ್ತು ಅವ್ಯವಸ್ಥೆ ಇರುವಲ್ಲಿ ದಾರಿದ್ರ್ಯದೇವತೆ ಅಥವಾ ಅಲಕ್ಷ್ಮೀ ನೆಲೆಸುವಳಾದ್ದರಿಂದ ಕೊಳೆಯನ್ನು ತೊಳೆದು ಹೊಸತನವನ್ನು ಆವಾಹಿಸಿಕೊಳ್ಳುವುದು ಲಕ್ಷ್ಮೀ ಆವಾಹನೆಯ ಪ್ರಕ್ರಿಯೆಯೆನಿಸಿಕೊಳ್ಳುತ್ತದೆ. ಈ ರೀತಿ ಲಕ್ಷ್ಮೀಗಾಗಿ ಮನೆಯನ್ನು, ವಾಸಸ್ಥಾನ ಮತ್ತು ಕಾರ್ಯಕ್ಷೇತ್ರವನ್ನು ಶುದ್ಧಗೊಳಿಸುವ ಸಂಪ್ರದಾಯ ಬಹುಕಾಲದಿಂದ ರೂಢಿಯಲ್ಲಿತ್ತು ಎಂಬುದಕ್ಕೆ ಒಂಬತ್ತನೆಯ ಶತಮಾನದ ರಾಜಶೇಖರನ ‘ಕಾವ್ಯಮೀಮಾಂಸೆ’ಯಲ್ಲಿಯೂ ಉಲ್ಲೇಖವಿದೆ.

ದೀಪಾವಳಿಯ ಇನ್ನೊಂದು ಪ್ರಸಿದ್ಧವಾದ ಕಥೆ ನರಕಾಸುರನ ವಧೆಯನ್ನು ಕುರಿತಾದ್ದು. ತಾನು ಮಾಡಿದ ಪಾಪಗಳ ಫಲವಾಗಿ ಇವನು ಶ್ರೀಕೃಷ್ಣನಿಂದ ಹತನಾಗುತ್ತಾನೆ. ಈ ಹಿನ್ನೆಲೆಯಲ್ಲಿಯೇ ನರಕಚತುರ್ದಶಿಯನ್ನು ಸಂಭ್ರಮಿಸುತ್ತೇವೆ. ನರಕಾಸುರವಧೆಯನ್ನು ಸಂಭ್ರಮಿಸಲೆಂಬಂತೆ ಈ ದಿನ ಪಟಾಕಿಗಳನ್ನು ಸಿಡಿಸುವುದು ತಲೆತಲಾಂತರದಿಂದ ಜಾರಿಯಲ್ಲಿದೆ.

ಬಳಿಕದ್ದು ಅಮಾವಾಸ್ಯೆಯ ಮತ್ತು ಪ್ರತಿಪದೆಯ (ಪಾಡ್ಯ) ಹಬ್ಬ. ಪ್ರತಿಪದೆಯ ಹಬ್ಬವನ್ನು ಸಾಮಾನ್ಯವಾಗಿ ಬಲಿಪಾಡ್ಯವೆಂದು ಕರೆದು, ಬಲಿಚಕ್ರವರ್ತಿಯ ಆಗಮನ ದಿನವೆಂದು ನೆನೆಯಲಾಗುತ್ತದೆ. ಈ ಸಂಪ್ರದಾಯಗಳು ಸಮುದಾಯ ಮತ್ತು ಪ್ರದೇಶಗಳಿಗನುಗುಣವಾಗಿ ಬದಲಾಗುವುದಿದೆ. ಇನ್ನು ದೀಪಾವಳಿಯೊಂದಿಗೆ ಮಿಳಿತವಾಗಿರುವ ಭಾರತೀಯ ಆಹಾರವೈವಿಧ್ಯವಂತೂ ಬಣ್ಣಿಸಲಸದಳವಾದ್ದು. ದೀಪಾವಳಿಗಾಗಿ ಮನೆಯನ್ನೆಲ್ಲ ಶುಚಿಗೊಳಿಸುವ, ದೀಪ ಬೆಳಗಿಸುವ, ಪಟಾಕಿ ಸಿಡಿಸುವ, ಹೊಸಬಟ್ಟೆ ತೊಡುವ ಸಂಭ್ರಮದ ಜೊತೆಯಲ್ಲಿಯೇ ಅನನ್ಯವಾದ ನಮ್ಮ ಆಹಾರಸಂಪ್ರದಾಯವನ್ನು ಕಾಪಿಟ್ಟುಕೊಳ್ಳುವ ಎಚ್ಚರವೂ ನಮ್ಮಲ್ಲಿ ಮೂಡಲಿ.

‘ಬಿಜೆಪಿ–ಆರೆಸ್ಸೆಸ್ ದ್ವೇಷ ಹರಡುತ್ತಿವೆ’

ಹೈದರಾಬಾದ್ (ಪಿಟಿಐ): ‘ಭಾರತ್ ಜೋಡೊ ಯಾತ್ರೆ ದೇಶದಲ್ಲಿ ಸಾಮರಸ್ಯ ಮತ್ತು ಸಹೋದರತ್ವ ಉತ್ತೇಜಿಸುವ ಗುರಿ ಹೊಂದಿದ್ದರೆ, ಬಿಜೆಪಿ ಮತ್ತು ಆರೆಸ್ಸೆಸ್ ದೇಶದಾದ್ಯಂತ ದ್ವೇಷ ಹರಡುತ್ತಿವೆ’ ಎಂದು ಕಾಂಗ್ರೆಸ್ ನಾಯಕ ರಾಹುಲ್ ಗಾಂಧಿ ಆರೋಪಿಸಿದರು.

ಭಾರತ್ ಜೋಡೊ ಯಾತ್ರೆ ಭಾನುವಾರ ಬೆಳಿಗ್ಗೆ ಕರ್ನಾಟಕದಿಂದ ತೆಲಂಗಾಣ ಪ್ರವೇಶಿಸಿದಾಗ ಸೇರಿದ್ದ ಜನಸ್ತೋಮ ಉದ್ದೇಶಿಸಿ ಮಾತನಾಡಿದರು. ನಂತರ ಹೈದರಾಬಾದ್‌ಗೆ ತೆರಳಿದರು. ಅಲ್ಲಿಂದ ದೆಹಲಿಗೆ ಅವರು ಪ್ರಯಾಣಿಸಲಿದ್ದಾರೆ ಎನ್ನಲಾಗಿದೆ.

ದೀಪಾವಳಿ ಪ್ರಯುಕ್ತ ಭಾನುವಾರದಿಂದ 3 ದಿನಗಳವರೆಗೆ (ಅ.26) ಯಾತ್ರೆಗೆ ಬಿಡುವು ನೀಡಲಾಗಿದೆ. ತೆಲಂಗಾಣದಲ್ಲಿ ಅ.27ರಿಂದ ಪುನರಾರಂಭವಾಗುವ ಯಾತ್ರೆ ನ.7ರಂದು ಮಹಾರಾಷ್ಟ್ರ ಪ್ರವೇಶಿಸುವ ಮೊದಲು ರಾಜ್ಯದಲ್ಲಿ 375 ಕಿ.ಮೀ ಸಾಗಲಿದೆ. ಪ್ರತಿ ದಿನ 20ರಿಂದ 25 ಕಿ.ಮೀ. ಪಾದಯಾತ್ರೆಯಲ್ಲಿ ಜನರೊಂದಿಗೆ ಸಂವಾದ ನಡೆಸಲಿದ್ದಾರೆ.

ಶರದ್ ಪವಾರ್, ಉದ್ಧವ್ ಭಾಗಿ: ಕಾಂಗ್ರೆಸ್ ಕೈಗೊಂಡಿರುವ ‘ಭಾರತ್ ಜೋಡೊ ಯಾತ್ರೆ’ಯಲ್ಲಿ ಪಾಲ್ಗೊಳ್ಳುವುದಾಗಿ ಎನ್‌ಸಿಪಿ ಅಧ್ಯಕ್ಷ ಶರದ್ ಪವಾರ್ ಅವರು ಹೇಳಿದ್ದಾರೆ. ಶಿವಸೇನಾ ನಾಯಕ ಉದ್ಧವ್ ಠಾಕ್ರೆ ಕೂಡಾ ಯಾತ್ರೆಯಲ್ಲಿ ಪಾಲ್ಗೊಳ್ಳಲಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಸುಗ್ರೀವಾಜ್ಞೆಗೆ ಅಂಕಿತ

ಒಂದನೇ ಪುಟದಿಂದ...

ಆದರೆ, ಮೀಸಲಾಯಿತಿಯು 1958ರಲ್ಲಿ ಇದ್ದಂತೆ ಎಸ್‌ಸಿ ಶೇ 15, ಎಸ್‌ಟಿ ಶೇ 3ರಷ್ಟು ಮಾತ್ರ ಇದೆ. ನ್ಯಾಯಮೂರ್ತಿ ನಾಗಮೋಹನದಾಸ್ ಆಯೋಗ ಮತ್ತು ನ್ಯಾಯಮೂರ್ತಿ ಸುಭಾಷ್ ಬಿ. ಅಡಿ ಸಮಿತಿ ವರದಿಗಳ ಆಧಾರದಲ್ಲಿ ಮೀಸಲಾತಿ ಹೆಚ್ಚಿಸಲು ವಿಶೇಷ ಪ್ರಕರಣವನ್ನು ರೂಪಿಸುವ ಅಗತ್ಯವಿದೆ ಎಂದು ಸುಗ್ರೀವಾಜ್ಞೆಯಲ್ಲಿ ವಿವರಿಸಲಾಗಿದೆ.

ಸಂವಿಧಾನದ 15ನೇ ಅನುಚ್ಛೇದ (4) ನೇ ಭಾಗವು ಸಾಮಾಜಿಕ ಮತ್ತು ಶೈಕ್ಷಣಿಕವಾಗಿ ಹಿಂದುಳಿದ ಯಾವುದೇ ವರ್ಗಗಳ ಏಳಿಗೆಗಾಗಿ, ಯಾವುದೇ ವಿಶೇಷ ಅಂಶ ಸೇರಿಸಲು ರಾಜ್ಯಕ್ಕೆ ಅವಕಾಶ ನೀಡಿದೆ. 16ನೇ ಅನುಚ್ಛೇದ (4)ನೇ ಭಾಗವು ರಾಜ್ಯ ಸರ್ಕಾರದ ಸೇವೆಗಳಲ್ಲಿ ಸಾಕಷ್ಟು ಪ್ರಾತಿನಿಧ್ಯ ಹೊಂದಿಲ್ಲವೆಂದು ಸರ್ಕಾರ ಅಭಿಪ್ರಾಯಪಡುವ ಹಿಂದುಳಿದ ಯಾವುದೇ ವರ್ಗಗಳ ಪರ ನೇಮಕಾತಿ ಮತ್ತು ಹುದ್ದೆಗಳಲ್ಲಿ ಮೀಸಲಾತಿಗಾಗಿ ಉಪಬಂಧ ಕಲ್ಪಿಸಲು ಅವಕಾಶ ನೀಡಲಾಗಿದೆ. 38ನೇ ಅನುಚ್ಛೇದ (1) ಭಾಗದಲ್ಲಿ ನ್ಯಾಯಿಕ, ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯವಾಗಿ ರಾಷ್ಟ್ರೀಯ ಜೀವನದ ಎಲ್ಲ ಕ್ಷೇತ್ರಗಳನ್ನು ಒಳಗೊಳ್ಳುವಂಥ ಸಾಮಾಜಿಕ ವ್ಯವಸ್ಥೆಯನ್ನು ಹೊಂದುವ ಮತ್ತು ಅದನ್ನು ಪರಿಣಾಮಕಾರಿಯಾಗಿ ಸಂರಕ್ಷಿಸುವ ಮೂಲಕ ಜನರ ಕಲ್ಯಾಣವನ್ನು ಉತ್ತೇಜಿಸಲು ರಾಜ್ಯ ಯತ್ನಿಸಬೇಕಿದೆ. ವಿಧಾನಮಂಡಲದ ಅಧಿವೇಶನ ಸದ್ಯಕ್ಕೆ ಇಲ್ಲದಿರುವುದರಿಂದ ಮತ್ತು ಶೀಘ್ರ ಕ್ರಮ ತೆಗೆದುಕೊಳ್ಳುವ ಅವಶ್ಯಕತೆ ಇರುವುದರಿಂದ ಈ ಸುಗ್ರೀವಾಜ್ಞೆ ಹೊರಡಿಸಲಾಗುತ್ತಿದೆ ಎಂದು ವಿವರಿಸಲಾಗಿದೆ.

‘ಸುಗ್ರೀವಾಜ್ಞೆಯಲ್ಲಿರುವ ಅಂಶಗಳನ್ನು ಅನುಷ್ಠಾನಗೊಳಿಸಲು ಸರ್ಕಾರ ಗೆಜೆಟ್ ಅಧಿಸೂಚನೆ ಮೂಲಕ ನಿಯಮಗಳನ್ನು ರಚಿಸಬಹುದು. ಆ ನಿಯಮಗಳನ್ನು ರಚಿಸಿದ ಬಳಿಕ ಆದಷ್ಟು ಬೇಗ ವಿಧಾನ ಮಂಡಲದ ಎರಡೂ ಸದನಗಳಲ್ಲಿ ಮಂಡಿಸಬೇಕು. ಸುಗ್ರೀವಾಜ್ಞೆಯ ಅಂಶಗಳ ಜಾರಿಗೆ ಸಮಸ್ಯೆ ಎದುರಾದರೆ, ಆದೇಶದ ಮೂಲಕ ಆ ಅಂಶಗಳನ್ನು ತೆಗೆದುಹಾಕಲು ಅಥವಾ ಹೊಸತಾಗಿ ಸೇರಿಸಲು ಅವಕಾಶ ನೀಡಲಾಗಿದೆ. ಆದರೆ, ಸುಗ್ರೀವಾಜ್ಞೆ ಜಾರಿಗೆ ಬಂದ ಎರಡು ವರ್ಷದ ಒಳಗೆ ಅಂಥ ಆದೇಶವನ್ನು ಮಾಡಬೇಕು’ ಎಂದೂ ಸ್ಪಷ್ಟಪಡಿಸಲಾಗಿದೆ.

ಜನಸಂಕಲ್ಪ ಯಾತ್ರೆ ಮುಂದೂಡಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕಲಬುರಗಿ ಜಿಲ್ಲೆಯ ಚಿತ್ತಾಪುರ ಮತ್ತು ಆಳಂದದಲ್ಲಿ ಭಾನುವಾರ ನಿಗದಿಯಾಗಿದ್ದ ಬಿಜೆಪಿ ಜನಸಂಕಲ್ಪ ಯಾತ್ರೆಯನ್ನು ವಿಧಾನಸಭೆ ಉಪಾಧ್ಯಕ್ಷ ಆನಂದ ಮಾಮನಿ ಅವರ ನಿಧನದ ಕಾರಣದಿಂದ ಮುಂದೂಡಲಾಗಿದೆ.

‘ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಮತ್ತು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ನೇತೃತ್ವದಲ್ಲಿ ಎರಡೂ ಸ್ಥಳಗಳಲ್ಲಿ ಭಾನುವಾರ ಜನಸಂಕಲ್ಪ ಯಾತ್ರೆ ನಿಗದಿಯಾಗಿತ್ತು. ಆದರೆ, ವಿಧಾನಸಭೆ ಉಪಾಧ್ಯಕ್ಷರ ನಿಧನದಿಂದ ಪಕ್ಷಕ್ಕೆ ಆಘಾತವಾಗಿದೆ. ಈ ಕಾರಣದಿಂದ ಯಾತ್ರೆಯನ್ನು ಮುಂದೂಡಲಾಗಿದೆ’ ಎಂದು ಜನಸಂಕಲ್ಪ ಯಾತ್ರೆಯ ಸಂಯೋಜಕರೂ ಆಗಿರುವ ವಿಧಾನ ಪರಿಷತ್ ಸದಸ್ಯ ಎನ್. ರವಿಕುಮಾರ್ ತಿಳಿಸಿದ್ದಾರೆ.

ಕೊರೊನಾ ಭೀತಿ ಬೇಡ, ಮುಂಜಾಗ್ರತೆ ಇರಲಿ

‘ಸಲ್ಮಾನ್ ರಶ್ದಿಯ ಒಂದು ಕಣ್ಣಿನ ದೃಷ್ಟಿ ಹೋಗಿದೆ’

ನ್ಯೂಯಾರ್ಕ್ (ರಾಯಿಟರ್ಸ್): ‘ದುಷ್ಕರ್ಮಿಯಿಂದ ದಾಳಿಗೆ ಒಳಗಾಗಿದ್ದ ಲೇಖಕ ಸಲ್ಮಾನ್ ರಶ್ದಿ ಅವರು ಒಂದು ಕಣ್ಣಿನ ದೃಷ್ಟಿ ಕಳೆದುಕೊಂಡಿದ್ದಾರೆ. ಅವರ ಒಂದು ಕೈ ಸ್ವಾಧೀನ ಕಳೆದುಕೊಂಡಿದೆ’ ಎಂದು ರಶ್ದಿ ಅವರ ಏಜೆಂಟ್ ಆ್ಯಂಡ್ರ್ಯೂ ವೈಲಿ ಭಾನುವಾರ ಹೇಳಿದ್ದಾರೆ.

‘ಚಾಕು ಇರಿತದಿಂದಾಗಿ ರಶ್ದಿ ಕುತ್ತಿಗೆ ಬಳಿ ಮೂರು ಗಂಭೀರ ಗಾಯಗಳಾಗಿವೆ. ಎದೆ ಭಾಗದಲ್ಲೂ ಗಾಯಗಳಾಗಿವೆ. ತೋಳಿನ ನರ ಕತ್ತರಿಸಿರುವುದರಿಂದ ಅವರ ಒಂದು ಕೈ ಸ್ವಾಧೀನ ಕಳೆದುಕೊಂಡಿದೆ’ ಎಂದಿದ್ದಾರೆ.

ಅಯೋಧ್ಯೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಹೇಳಿಕೆ

‘ಎಲ್ಲರ ವಿಕಾಸ ನೀತಿಗೆ ರಾಮನೇ ಸ್ಫೂರ್ತಿ’

ಅಯೋಧ್ಯೆ (ಉತ್ತರ ಪ್ರದೇಶ) (ಪಿಟಿಐ): ನಮ್ಮ ಸರ್ಕಾರದ ‘ಎಲ್ಲರ ಜತೆ, ಎಲ್ಲರ ವಿಕಾಸ’ ಎಂಬ ಧ್ಯೇಯವು ಶ್ರೀರಾಮನ ಉಪದೇಶ ಮತ್ತು ಆಳ್ವಿಕೆಯಿಂದ ಸ್ಫೂರ್ತಿ ಪಡೆದಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ.

2020ರ ಆಗಸ್ಟ್‌ನಲ್ಲಿ ಶ್ರೀರಾಮ ಮಂದಿರ ನಿರ್ಮಾಣಕ್ಕೆ ಭೂಮಿಪೂಜೆ ನಡೆಸಿದ ನಂತರ ಇದೇ ಮೊದಲ ಬಾರಿ ಇಲ್ಲಿಗೆ ಭೇಟಿ ನೀಡಿದ ಮೋದಿ ಅವರು, ಮಂದಿರ ನಿರ್ಮಾಣ ಕಾಮಗಾರಿಯನ್ನು ಪರಿಶೀಲಿಸಿದರು. ಇಲ್ಲಿನ ರಾಮಕಥಾ ಉದ್ಯಾನದಲ್ಲಿ ಸಾಂಕೇತಿಕವಾಗಿ ರಾಮಪಟ್ಟಾಭಿಷೇಕವನ್ನು ಅವರು ನೆರವೇರಿಸಿದರು.

ಇಲ್ಲಿರುವ ತಾತ್ಕಾಲಿಕ ಮಂದಿರದಲ್ಲಿ ರಾಮನಿಗೆ ಪೂಜೆ ಸಲ್ಲಿಸಿ ಮಾತನಾಡಿದ ಮೋದಿ, ‘ಮುಂದಿನ 25 ವರ್ಷಗಳಲ್ಲಿ ಭಾರತೀಯರು ಅತ್ಯಂತ ಕಠಿಣವಾದ ಗುರಿಗಳನ್ನು ತಲುಪಲು ಮತ್ತು ಅಭಿವೃದ್ಧಿಯನ್ನು ಸಾಧಿಸಲು ಶ್ರೀರಾಮನ ಧ್ಯೇಯಗಳೇ ದಾರಿದೀಪವಾಗಲಿವೆ. ಸಂವಿಧಾನದ ಮೂಲಪ್ರತಿಯಲ್ಲಿ ಶ್ರೀರಾಮ, ಲಕ್ಷ್ಮಣ ಮತ್ತು ಸೀತೆಯ ಚಿತ್ರವಿತ್ತು. ಇದು ಸಂವಿಧಾನವು ನಮಗೆ ನೀಡಿರುವ ಹಕ್ಕುಗಳಿಗೆ ಮತ್ತೊಂದು ಖಾತರಿ’ ಎಂದು ಮೋದಿ ಹೇಳಿದ್ದಾರೆ.

ದೀಪೋತ್ಸವ: ಇಲ್ಲಿನ ಸರಯೂ ನದಿ ದಂಡೆಯಲ್ಲಿ ಭಾನುವಾರ ಸಂಜೆ, 15.76 ಲಕ್ಷ ದೀಪಗಳನ್ನು ಹಚ್ಚಲಾಗಿತ್ತು. ಪ್ರಧಾನಿ ಇದಕ್ಕೆ ಸಾಕ್ಷಿಯಾದರು. ರಾಮಕಥಾ ಉದ್ಯಾನದಲ್ಲಿ ಆಯೋಜಿಸಲಾಗಿದ್ದ 3ಡಿ ಮತ್ತು ಲೇಸರ್ ಬೆಳಕಿನ ಪ್ರದರ್ಶನವನ್ನು ಅವರು ವೀಕ್ಷಿಸಿದರು.



ಅಯೋಧ್ಯೆಯಲ್ಲಿ ಭಾನುವಾರ ನಡೆದ ದೀಪೋತ್ಸವದ ದೃಶ್ಯ –ಪಿಟಿಐ ಚಿತ್ರ

ಕಾಣಿಯೂರಿನಲ್ಲಿ ಗುಂಪು ಹಲ್ಲೆ: ಆರು ಮಂದಿ ಬಂಧನ

ಪ್ರಜಾವಾಣಿ ವಾರ್ತೆ

ಸುಳ್ಯ (ದಕ್ಷಿಣ ಕನ್ನಡ): ಮಹಿಳೆಯ ಮಾನಭಂಗಕ್ಕೆ ಯತ್ನಿಸಿದ ಆರೋಪದಡಿ ದಕ್ಷಿಣ ಕನ್ನಡ ಜಿಲ್ಲೆಯ ಕಡಬ ತಾಲ್ಲೂಕಿನ ಕಾಣಿಯೂರು ಗ್ರಾಮದ ಬೆದ್ರಾಜೆಯಲ್ಲಿ ಯುವಕರಿಬ್ಬರ ಮೇಲೆ ಗುಂಪು ಹಲ್ಲೆ ನಡೆಸಿರುವ ಸಂಬಂಧ ಆರು ಜನರನ್ನು ಪೊಲೀಸರು ಬಂಧಿಸಿದ್ದಾರೆ.

ಪುನೀತ್, ರಾಜು, ಪ್ರಸಾದ್, ಕಿಶೋರ್, ಭವಿತ್ ಹಾಗೂ ರಂಜಿತ್ ಬಂಧಿತರು. ‘ವಿಡಿಯೊ ಸಾಕ್ಷ್ಯ ಆಧರಿಸಿ ಬಂಧಿಸಿದ್ದೇವೆ’ ಎಂದು ಎಸ್‌ಪಿ ಹೃಷಿಕೇಶ್ ಸೋನಾವಣೆ ‘ಪ್ರಜಾವಾಣಿ’ಗೆ ತಿಳಿಸಿದರು.

ಮಂಗಳೂರು ತಾಲ್ಲೂಕಿನ ಅಡ್ಡೂರು ಗ್ರಾಮದ ರಮೀಜುದ್ದೀನ್ ಹಾಗೂ ಆತನ ಸಂಬಂಧಿ ಮಹಮ್ಮದ್ ರಫೀಕ್ ಅ.20ರಂದು ಬೆಡ್ ಶೀಟ್ ಮಾರಲು ಕಾರಿನಲ್ಲಿ ಹೋಗುತ್ತಿದ್ದಾಗ, ಕಾಣಿಯೂರು ಬಳಿ ಸ್ಥಳೀಯರು ಗುಂಪು ಹಲ್ಲೆ ನಡೆಸಿದ್ದರೆಂದು ಬೆಳ್ಳಾರೆ ಠಾಣೆಯಲ್ಲಿ ದೂರು ದಾಖಲಿಸಿದ್ದರು.

ಬೆಡ್ ಶೀಟ್ ವ್ಯಾಪಾರಿಗಳ ಮೇಲೂ ಪ್ರಕರಣ: ‘ಬೆಡ್‌ಶೀಟ್ ಮಾರುವ ನೆಪದಲ್ಲಿ ಮನೆಗೆ ಬಂದಿದ್ದ ಇಬ್ಬರು ಒಂಟಿಯಾಗಿದ್ದ ನನ್ನ ಮೇಲೆ ಅತ್ಯಾಚಾರಕ್ಕೆ ಯತ್ನಿಸಿದರು’ ಎಂದು ಆರೋಪಿಸಿ ಪರಿಶಿಷ್ಟ ಜಾತಿ ಮಹಿಳೆಯೊಬ್ಬರು ಕಡಬ ಠಾಣೆಗೆ ದೂರು ನೀಡಿದ್ದಾರೆ. ಇಬ್ಬರು ಬೆಡ್ ಶೀಟ್ ವ್ಯಾಪಾರಿಗಳ ಮೇಲೂ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಇಬ್ಬರನ್ನೂ ಬಂಧಿಸುವುದಾಗಿ ಎಸ್‌ಪಿ ತಿಳಿಸಿದ್ದಾರೆ.

ಚೀನಾ: ಜಿನ್‌ಪಿಂಗ್ ಸತತ 3ನೇ ಬಾರಿಗೆ ಆಯ್ಕೆ



ಬೀಜಿಂಗ್ (ಪಿಟಿಐ): ಚೀನಾ ಅಧ್ಯಕ್ಷ ಷಿ ಜಿನ್‌ಪಿಂಗ್ ಸತತ ಮೂರನೇ ಬಾರಿಗೆ ಚೀನಾ ಕಮ್ಯುನಿಸ್ಟ್ ಪಾರ್ಟಿಯ (ಸಿಪಿಸಿ) ಪ್ರಧಾನ ಕಾರ್ಯದರ್ಶಿಯಾಗಿ ಆಯ್ಕೆಯಾಗುವ ಮೂಲಕ ದಾಖಲೆ ನಿರ್ಮಿಸಿದ್ದಾರೆ.

ಸಿಪಿಸಿ ಪ್ರಧಾನ ಕಾರ್ಯದರ್ಶಿಯಾಗಿ ಪುನರಾಯ್ಕೆಯಾಗಿರುವ ಕಾರಣ, ಷಿ ಅವರು ದೇಶದ ಅಧ್ಯಕ್ಷರಾಗಿ ಹಾಗೂ ಸೇನೆಯ ಮುಖ್ಯಸ್ಥರಾಗಿಯೂ ಮುಂದುವರಿಯಲಿದ್ದಾರೆ. ಸಿಪಿಸಿ ಸಂಸ್ಥಾಪಕ ಮಾವೊ ಜೆಡಾಂಗ್ ನಂತರ ಈ ಹುದ್ದೆಗೆ ಸತತ ಮೂರನೇ ಸಲ ಪುನರಾಯ್ಕೆಗೊಂಡ ಪಕ್ಷದ ಮೊದಲ ನಾಯಕ ಎಂಬ ಹೆಗ್ಗಳಿಕೆಗೂ ಅವರು ಪಾತ್ರರಾಗಿದ್ದಾರೆ.

ಷಿ ಅವರ ಆಯ್ಕೆಯನ್ನು ಅಧಿಕೃತವಾಗಿ ಭಾನುವಾರ ಘೋಷಿಸಲಾಯಿತು. ಏಳು ಜನ ಸದಸ್ಯರನ್ನು ಒಳಗೊಂಡ ಸ್ಥಾಯಿ ಸಮಿತಿ ಸುದ್ದಿಗೋಷ್ಠಿ ನಡೆಸಿ, ಷಿ ಆಯ್ಕೆಯನ್ನು ಪ್ರಕಟಿಸಿತು. ಅವರ ಅಧಿಕಾರಾವಧಿ ಐದು ವರ್ಷ. ಅವರು ಮೊದಲ ಬಾರಿಗೆ 2012ರಲ್ಲಿ ಚುನಾಯಿತರಾಗಿದ್ದರು.

ಶನಿವಾರ ಸಿಪಿಸಿಯ ಪ್ರತಿನಿಧಿಗಳ ಸಮಾವೇಶ ನಡೆದಿತ್ತು. 300ಕ್ಕೂ ಹೆಚ್ಚು ಸದಸ್ಯರು ಇರುವ ಕೇಂದ್ರ ಸಮಿತಿಯನ್ನು ಸಮಾವೇಶದ ಸಮಾರೋಪಕ್ಕೆ ಮೊದಲು ಆಯ್ಕೆ ಮಾಡಲಾಗಿತ್ತು.

ಭಾನುವಾರ ನಡೆದ ಕೇಂದ್ರ ಸಮಿತಿಯ ಸಭೆಯಲ್ಲಿ 25 ಸದಸ್ಯರಿರುವ ಪಾಲಿಟ್ ಬ್ಯುರೊ ಆಯ್ಕೆ ನಡೆಯಿತು. ಈ ಪಾಲಿಟ್ ಬ್ಯುರೊ, ಏಳು ಜನ ಸದಸ್ಯರಿರುವ ಸ್ಥಾಯಿ ಸಮಿತಿಯನ್ನು ರಚಿಸಿತು. ಅಂತಿಮವಾಗಿ ಈ ಸ್ಥಾಯಿ ಸಮಿತಿಯೇ ಷಿ ಜಿನ್‌ಪಿಂಗ್ ಅವರ ಮರು ಆಯ್ಕೆಗೆ ಮುದ್ರೆ ಒತ್ತಿತು.

ಬ್ರಿಟನ್ ಪ್ರಧಾನಿ ಸ್ಥಾನಕ್ಕೆ ಸ್ಪರ್ಧೆ ಘೋಷಿಸಿದ ಸುನಕ್

ಲಂಡನ್ (ಪಿಟಿಐ): ಟೋರಿ ಪಕ್ಷದ ಅಧ್ಯಕ್ಷ ಸ್ಥಾನಕ್ಕೆ ಸ್ಪರ್ಧಿಸುವುದಾಗಿ ಭಾರತ ಮೂಲದ ಮಾಜಿ ಸಚಿವ ರಿಷಿ ಸುನಕ್ ಭಾನುವಾರ ಘೋಷಿಸಿದ್ದಾರೆ.

ಭಾನುವಾರ ಈ ಕುರಿತು ಟ್ವೀಟ್ ಮಾಡಿರುವ ಅವರು, ‘ಬ್ರಿಟನ್ ಒಂದು ದೊಡ್ಡ ದೇಶ. ಆದರೆ, ಸದ್ಯ ನಾವು ತೀವ್ರವಾದ ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದೇವೆ. ಕನ್ಸರ್ವೇಟಿವ್ ಪಕ್ಷದ ಮುಂದಾಳಾಗಿ ನಾನು ಬ್ರಿಟನ್‌ನ ಪ್ರಧಾನಿಯಾಗಲು ಇಚ್ಛಿಸುತ್ತೇನೆ. ಆ ಮೂಲಕ ಪ್ರಸ್ತುತ ಸಮಸ್ಯೆಗಳನ್ನು ಬಗೆಹರಿಸುವ ವಿಶ್ವಾಸ ಹೊಂದಿದ್ದೇನೆ’ ಎಂದಿದ್ದಾರೆ.

ಲಿಜ್ ಟ್ರಸ್ ಅವರ ರಾಜೀನಾಮೆಯಿಂದ ಪ್ರಧಾನಿ ಹುದ್ದೆ ತೆರವಾಗಿದೆ. ಪಕ್ಷದ ಅಧ್ಯಕ್ಷರಾಗಿ ಆಯ್ಕೆಯಾಗುವವರು ನೂತನ ಪ್ರಧಾನಿಯಾಗಲಿದ್ದಾರೆ. ಸುನಕ್ ಅವರು 128 ಸಂಸದರ ಬೆಂಬಲದೊಂದಿಗೆ ಈ ಸ್ಥಾನಕ್ಕೆ ನಡೆಯುವ ಚುನಾವಣೆಯಲ್ಲಿ ಮುಂಚೂಣಿಯಲ್ಲಿದ್ದಾರೆ. ಇನ್ನೊಂದೆಡೆ, ಮಾಜಿ ಪ್ರಧಾನಿ ಬೋರಿಸ್ ಜಾನ್ಸನ್ ಅವರೂ ಕಣಕ್ಕಿಳಿಯಲಿದ್ದಾರೆ ಎಂಬ ಮಾತುಗಳು ಕೇಳಿ ಬರುತ್ತಿವೆ. ಆದರೆ, ಚುನಾವಣೆಯಲ್ಲಿ ಸ್ಪರ್ಧಿಸುವ ಕುರಿತು ಜಾನ್ಸನ್ ಅವರು ಅಧಿಕೃತವಾಗಿ ಘೋಷಣೆ ಮಾಡಬೇಕಿದೆ. ಒಂದು ವೇಳೆ ಜಾನ್ಸನ್ ಅವರು ಸ್ಪರ್ಧಿಸುವುದು ಖಚಿತವಾದಲ್ಲಿ, ಸುನಕ್, ಜಾನ್ಸನ್ ಹಾಗೂ ಪೆನ್ನಿ ಮೊರ್ಡಾಂಟ್ ನಡುವೆ ತ್ರಿಕೋನ ಸ್ಪರ್ಧೆ ಏರ್ಪಡಲಿದೆ.

ಜಾಗತಿಕ ಮಾರುಕಟ್ಟೆ ಮೇಲೆ ಇಸ್ರೊ ಕಣ್ಣು

ನವದೆಹಲಿ (ಪಿಟಿಐ): ಬ್ರಿಟನ್ ಒನ್‌ವೆಬ್ ಕಂಪನಿಯ 36 ಸಂವಹನ ಉಪಗ್ರಹಗಳನ್ನು ಇಸ್ರೊ ಶ್ರೀಹರಿಕೋಟಾದ ಉಡ್ಡಯನ ಕೇಂದ್ರದಿಂದ ಭಾನುವಾರ ನಸುಕಿನಲ್ಲಿ ಎಲ್‌ವಿಎಂ–3 ರಾಕೆಟ್ ಮೂಲಕ ಉಡಾವಣೆ ಮಾಡಿದೆ. ಎಲ್ಲ ಉಪಗ್ರಹಗಳನ್ನೂ ಕಕ್ಷೆಗಳಿಗೆ ಯಶಸ್ವಿಯಾಗಿ ಸೇರಿಸಿ, ಇಸ್ರೊ ತನ್ನ ಸಾಮರ್ಥ್ಯವನ್ನು ಜಗತ್ತಿಗೆ ತೆರೆದಿಟ್ಟಿದೆ.

ಉಪಗ್ರಹಗಳ ಉಡ್ಡಯನದ ಜಾಗತಿಕ ಮಾರುಕಟ್ಟೆಯ ಮೇಲೆ ಇಸ್ರೊ ಕಣ್ಣಿಟ್ಟಿದೆ. ಸದ್ಯ, ಜಾಗತಿಕ ಬಾಹ್ಯಾಕಾಶ ಆರ್ಥಿಕತೆ ₹ 36 ಲಕ್ಷ ಕೋಟಿಯಷ್ಟಿದೆ. ಈ ಪೈಕಿ, ಉಪಗ್ರಹಗಳ ಉಡ್ಡಯನ ಕ್ಷೇತ್ರದ ಪಾಲು ₹ 49 ಸಾವಿರ ಕೋಟಿ ಎಂದು ಭಾರತೀಯ ಬಾಹ್ಯಾಕಾಶ ಸಂಘಟನೆ ಹಾಗೂ ಅರ್ನ್ಸ್ಟ್ ಅಂಡ್ ಯಂಗ್ ಸಂಸ್ಥೆಗಳ ವರದಿಯಲ್ಲಿ ಹೇಳಿದೆ. ‘ಬರುವ ಫೆಬ್ರುವರಿಯಲ್ಲಿ ಮತ್ತೆ ಒನ್‌ವೆಬ್ ಕಂಪನಿಯ 36 ಉಪಗ್ರಹಗಳ ಉಡಾವಣೆ ಮಾಡಲಾಗುವುದು’ ಎಂದು ಇಸ್ರೊ ಮುಖ್ಯಸ್ಥ ಎಸ್.ಸೋಮನಾಥ್ ಹೇಳಿದ್ದಾರೆ.

ಮರುನಾಮಕರಣ: ಜಿಎಸ್‌ಎಲ್‌ವಿ ಮಾರ್ಕ್–3 (ಜಿಯೊಸಿಂಕ್ರನಸ್ ಸೆಟಲೈಟ್ ಲಾಂಚ್ ವೆಹಿಕಲ್) ಹೆಸರನ್ನು ‘ಲಾಂಚ್ ವೆಹಿಕಲ್ ಮಾರ್ಕ್–3’ (ಎಲ್‌ವಿಎಂ–3) ಎಂದು ಇಸ್ರೊ ಬದಲಾಯಿಸಿದೆ.

ದೀಪಾವಳಿ ಬೋನಸ್ ಸದ್ಬಳಕೆ ಹೇಗೆ?



ಬಂಡವಾಳ ಮಾರುಕಟ್ಟೆ

ಅವಿನಾಶ್ ಕೆ.ಟಿ.

ಹೊಸ ಉಡುಗೆ ತೊಟ್ಟು, ಸಿಹಿ ಹಂಚಿ ಸಂಭ್ರಮಿಸುವುದು, ಪ್ರೀತಿ ಪಾತ್ರರಿಗೆ ಉಡುಗೊರೆಗಳನ್ನು ಕೊಡುವುದು, ಮನೆಗೆ ದೀಪಾಲಂಕಾರ ಮಾಡಿ ಪಟಾಕಿ ಸಿಡಿಸಿ ಖುಷಿಪಡುವುದು... ಹೀಗೆ ದೀಪಗಳ ಹಬ್ಬ ದೀಪಾವಳಿ ಮನೆಯ ಎಲ್ಲರ ಮನಸ್ಸನ್ನು ಒಂದಲ್ಲ ಒಂದು ರೀತಿಯಲ್ಲಿ ಖುಷಿಪಡಿಸುತ್ತದೆ. ಇವೆಲ್ಲಕ್ಕಿಂತ ಸಂತೋಷ ಕೊಡುವ ಮತ್ತೊಂದು ವಿಚಾರ ಅಂದರೆ ದೀಪಾವಳಿ ಸಮಯದಲ್ಲಿ ಕೆಲವರಿಗೆ ಸಿಗುವ ಬೋನಸ್!

ದೀಪಾವಳಿ ಬೋನಸ್ ಮೊತ್ತವನ್ನು ಯಾವೆಲ್ಲ ರೀತಿಯಲ್ಲಿ ಸದ್ಬಳಕೆ ಮಾಡಬಹುದು ಎನ್ನುವುದರ ಬಗ್ಗೆ ಒಂದು ನೋಟ ಹರಿಸೋಣ.

1. ಜಾಸ್ತಿ ಬಡ್ಡಿಯ ಸಾಲ ತೀರಿಸಲು ಬಳಸಿ: ಹೆಚ್ಚು ಬಡ್ಡಿ ದರದ ವೈಯಕ್ತಿಕ ಸಾಲ ಅಥವಾ ಕ್ರೆಡಿಟ್ ಕಾರ್ಡ್ ಸಾಲ ಪಡೆದಿದ್ದರೆ ಬೋನಸ್ ಹಣ ಬಳಸಿ ಆ ಸಾಲ ಮರುಪಾವತಿ ಮಾಡಿ. ಅದು ಸಾಧ್ಯವಾಗದಿದ್ದರೆ ಸಾಲದ ಒಂದಿಷ್ಟು ಹೊರೆಯನ್ನಾದರೂ ತಗ್ಗಿಸಿಕೊಳ್ಳಿ. ಹೀಗೆ ಮಾಡುವುದರಿಂದ ಅನಗತ್ಯವಾಗಿ ಹೆಚ್ಚು ಬಡ್ಡಿ ಕಟ್ಟುವುದರಿಂದ ಪಾರಾಗಬಹುದು. ಒಂದೊಮ್ಮೆ ಗೃಹ ಸಾಲ ಪಡೆದಿದ್ದರೆ ಬೋನಸ್ ಹಣವನ್ನು ಹೆಚ್ಚುವರಿ ಪಾವತಿಗೆ (ಪಾರ್ಟ್ ಪೇಮೆಂಟ್) ಬಳಸಿಕೊಳ್ಳಿ. ಇದರಿಂದ ಬಡ್ಡಿ ಹೊರೆ ತಗ್ಗುವ ಜೊತೆಗೆ ಸಾಲದ ಒಟ್ಟಾರೆ ಅವಧಿ ಕೂಡ ಕಡಿಮೆಯಾಗುತ್ತದೆ.

2. ತುರ್ತು ನಿಧಿಗೆ ಒಂದಿಷ್ಟು ಹಣ ಇಡಿ: ಧುತ್ತೆಂದು ಬರುವ ಅನಿರೀಕ್ಷಿತ ಸಂದರ್ಭಗಳಿಗೆ ಹಣ ಬೇಕಾಗುತ್ತದೆ. ಅದಕ್ಕಾಗಿ ಪ್ರತಿ ವ್ಯಕ್ತಿಯೂ ಒಂದು ತುರ್ತು ನಿಧಿ (ಎಮರ್ಜೆನ್ಸಿ ಫಂಡ್) ಇಟ್ಟುಕೊಳ್ಳಬೇಕು. ತುರ್ತು ನಿಧಿ ಇಟ್ಟುಕೊಂಡಿಲ್ಲ ಎಂದಾದರೆ, ಬೋನಸ್ ಹಣವನ್ನು ಅದಕ್ಕೆಂದು ಬಳಸಿ. ತುರ್ತು ನಿಧಿಯಲ್ಲಿ ನಿಮ್ಮ ಮಾಸಿಕ ಆದಾಯದ ಕನಿಷ್ಠ 3ರಿಂದ 6 ಪಟ್ಟು ಮೊತ್ತ ಇರಬೇಕು. ವೈದ್ಯಕೀಯ ತುರ್ತು, ಆರ್ಥಿಕ ತುರ್ತುಗಳು ಬಂದಾಗ ಮಾತ್ರ ಆ ಹಣ ಬಳಸಬೇಕು. ತುರ್ತು ನಿಧಿಯ ಹಣವನ್ನು ನಿಶ್ಚಿತ ಠೇವಣಿ (ಎಫ್.ಡಿ) ಅಥವಾ ಲಿಕ್ವಿಡ್ ಫಂಡ್‌ಗಳಲ್ಲಿ ಹೂಡಿಕೆ ಮಾಡುವುದು ಒಳಿತು. ಏಕೆಂದರೆ, ಅಗತ್ಯ ಎದುರಾದಾಗ ಈ ಹೂಡಿಕೆಗಳಲ್ಲಿನ ಹಣವನ್ನು ನಗದೀಕರಿಸುವುದು ಸುಲಭ.

3. ವಿಮೆ ಪಡೆಯಿರಿ, ವಿಮೆ ಹೆಚ್ಚಿಸಿಕೊಳ್ಳಿ: ಪ್ರತಿ ವ್ಯಕ್ತಿಗೂ ಟರ್ಮ್ ಲೈಫ್ ಇನ್ಶೂರೆನ್ಸ್ (ಅವಧಿ ವಿಮೆ) ಮತ್ತು ಆರೋಗ್ಯ ವಿಮೆ ಬಹಳ ಮುಖ್ಯ. ಒಂದೊಮ್ಮೆ ಈ ಎರಡು ಪ್ರಮುಖ ವಿಮೆಗಳನ್ನು ಪಡೆದಿಲ್ಲ ಎಂದಾದಲ್ಲಿ ಕೂಡಲೇ ಪಡೆಯಿರಿ. ಈಗಾಗಲೇ ವಿಮೆ ಪಡೆದಿದ್ದರೆ ಬೋನಸ್ ಹಣ ಬಳಸಿ ಆದಾಯಕ್ಕೆ ತಕ್ಕಂತೆ ವಿಮೆ ರಕ್ಷಣೆಯ (ಕವರೇಜ್) ಮೊತ್ತ ಹೆಚ್ಚಿಸಿಕೊಳ್ಳುವ ಬಗ್ಗೆ ಆಲೋಚನೆ ಮಾಡಿ. ಆರೋಗ್ಯ ಸೇವೆಗಳ ಶುಲ್ಕ ಹೆಚ್ಚಳ (ಅಂದರೆ, ಆಸ್ಪತ್ರೆ ಖರ್ಚುಗಳ ಏರಿಕೆ) ಪ್ರಮಾಣ ವಾರ್ಷಿಕ ಶೇಕಡ 14ರಷ್ಟು ಇರುವುದರಿಂದ ವಿಮೆ ರಕ್ಷಣೆಯ ಮೊತ್ತ ಹೆಚ್ಚಿಸಿಕೊಳ್ಳುವುದು ಅತ್ಯಗತ್ಯ.

ಇಂತಹ ವಿಮೆಗಳಿಂದ ಏನು ಸಿಗುತ್ತದೆ ಎಂದು ಅನೇಕರು ಲಘುವಾಗಿ ಮಾತನಾಡುತ್ತಾರೆ. ಆದರೆ, ನೆನಪಿಟ್ಟುಕೊಳ್ಳಿ, ಇಂತಹ ವಿಮೆಗಳು ನೀವು ಬಡವರಾಗುವುದನ್ನು ತಡೆಯುತ್ತವೆ. ವಿಮೆಯ ರಕ್ಷಣೆ ಪಡೆಯುವುದರಿಂದ ತುರ್ತು ಸಂದರ್ಭಗಳಲ್ಲಿ ಅನಗತ್ಯ ಆರ್ಥಿಕ ಹೊರೆ ತಪ್ಪಿಸಿಕೊಳ್ಳಬಹುದು.

4. ತೆರಿಗೆ ಉಳಿಸುವ ಹೂಡಿಕೆ ಮಾಡಿ: ಬೋನಸ್ ಹಣವನ್ನು ಆದಾಯ ತೆರಿಗೆ ಉಳಿಸುವ ಪಿಪಿಎಫ್, ಸುಕನ್ಯಾ ಸಮೃದ್ಧಿ, ಎನ್‌ಪಿಎಸ್, ವಿಮೆ, ಎನ್‌ಎಸ್‌ಸಿ ಮುಂತಾದ ಹೂಡಿಕೆಗಳಲ್ಲಿ ತೊಡಗಿಸುವುದರಿಂದ ಸೆಕ್ಷನ್ 80ಸಿ, 80ಡಿ, 80ಸಿಸಿಡಿ 1ಬಿ ಅಡಿಯಲ್ಲಿ ತೆರಿಗೆ ಲಾಭಗಳನ್ನು ಪಡೆಯಲು ಸಾಧ್ಯವಾಗುತ್ತದೆ.

5. ಮ್ಯೂಚುವಲ್ ಫಂಡ್ ಹೂಡಿಕೆ: ಕೊಂಚ ರಿಸ್ಕ್ ತೆಗೆದುಕೊಂಡು ದೀರ್ಘಾವಧಿಗೆ ಹೂಡಿಕೆ ಮಾಡುವ ಆಲೋಚನೆ ಇದ್ದರೆ ಬೋನಸ್ ಹಣವನ್ನು ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿ ಹೂಡಿಕೆ ಮಾಡಬಹುದು. ಈಕ್ವಿಟಿ ಮ್ಯೂಚುವಲ್ ಫಂಡ್‌ಗಳಲ್ಲಿನ ಹೂಡಿಕೆಯಿಂದ ದೀರ್ಘಾವಧಿಯಲ್ಲಿ ಸರಾಸರಿ ಶೇ 16ರವರೆಗೂ ಲಾಭಗಳಿಸುವ ಅವಕಾಶವಿದೆ.

(ಲೇಖಕ ಇಂಡಿಯನ್ ಮನಿ ಡಾಟ್ ಕಾಂನ ಹಣಕಾಸು ಸಲಹ ವಿಭಾಗದ ಮುಖ್ಯಸ್ಥ)

ಹಬ್ಬದ ಸಂದರ್ಭದಲ್ಲಿ ಚೇತರಿಕೆ

ಷೇರುಪೇಟೆ

ಅಕ್ಟೋಬರ್ 21ಕ್ಕೆ ಕೊನೆಗೊಂಡ ವಾರದಲ್ಲಿ ಷೇರುಪೇಟೆ ಸೂಚ್ಯಂಕಗಳು ಚೇತರಿಸಿಕೊಂಡಿವೆ. 59,307 ಅಂಶಗಳಲ್ಲಿ ವಹಿವಾಟು ಪೂರ್ಣಗೊಳಿಸಿರುವ ಸೆನ್ಸೆಕ್ಸ್, ವಾರದ ಅವಧಿಯಲ್ಲಿ ಶೇ 2.39ರಷ್ಟು ಗಳಿಸಿಕೊಂಡಿದೆ. 17,576 ಅಂಶಗಳಲ್ಲಿ ವಹಿವಾಟು ಮುಗಿಸಿರುವ ನಿಫ್ಟಿ ಶೇ 2.27ರಷ್ಟು ಜಿಗಿದಿದೆ. ದೀಪಾವಳಿ ಸಂದರ್ಭದಲ್ಲಿ ವ್ಯಾಪಾರ ವಹಿವಾಟು ಹೆಚ್ಚಳ ನಿರೀಕ್ಷೆ, ಜಾಗತಿಕ ಮಾರುಕಟ್ಟೆಗಳಲ್ಲಿ ಕಂಡುಬಂದ ಸಕಾರಾತ್ಮಕತೆ, ದೇಶಿಯ ಸಂಸ್ಥೆಗಳಿಂದ ನಿರೀಕ್ಷಿತ ತ್ರೈಮಾಸಿಕ ಫಲಿತಾಂಶ, ವಿದೇಶಿ ಹೂಡಿಕೆದಾರರಿಂದ ಷೇರುಗಳ ಖರೀದಿ ಭರಾಟೆ ಸೇರಿದಂತೆ ಹಲವು ಅಂಶಗಳು ಮಾರುಕಟ್ಟೆ ಚೇತರಿಕೆಗೆ ಕಾರಣವಾಗಿವೆ.

ವಲಯವಾರು ಪ್ರಗತಿಯಲ್ಲಿ ನಿಫ್ಟಿ ಸರ್ಕಾರಿ ಸ್ವಾಮ್ಯದ ಬ್ಯಾಂಕ್ ಸೂಚ್ಯಂಕ ಶೇ 11ರಷ್ಟು ಹೆಚ್ಚಳವಾಗಿದೆ. ಬ್ಯಾಂಕ್ ಸೂಚ್ಯಂಕ ಶೇ 3.7ರಷ್ಟು, ಅನಿಲ ಮತ್ತು ತೈಲ ಸೂಚ್ಯಂಕ ಶೇ 3.4ರಷ್ಟು ಜಿಗಿದಿವೆ. ಮತ್ತೊಂದೆಡೆ ಲೋಹ ಮತ್ತು ಮಾಧ್ಯಮ ಸೂಚ್ಯಂಕಗಳು ಅಲ್ಪ ಪ್ರಮಾಣದ ಕುಸಿತ ದಾಖಲಿಸಿವೆ. ಕಳೆದ ವಾರ ವಿದೇಶಿ ಸಾಂಸ್ಥಿಕ ಹೂಡಿಕೆದಾರರು ₹ 1,324.34 ಕೋಟಿ ಮೌಲ್ಯದ ಷೇರುಗಳನ್ನು ಖರೀದಿಸಿದ್ದಾರೆ. ದೇಶಿ ಸಾಂಸ್ಥಿಕ ಹೂಡಿಕೆದಾರರು ₹ 3,569.49 ಕೋಟಿ ಮೌಲ್ಯದ ಷೇರುಗಳನ್ನು ಖರೀದಿ ಮಾಡಿದ್ದಾರೆ.

ಬಿಎಸ್‌ಇ ಲಾರ್ಜ್ ಕ್ಯಾಪ್ ಸೂಚ್ಯಂಕದಲ್ಲಿ ಪಂಜಾಬ್ ನ್ಯಾಷನಲ್ ಬ್ಯಾಂಕ್, ಎಕ್ಸಿಸ್ ಬ್ಯಾಂಕ್, ಬ್ಯಾಂಕ್ ಆಫ್ ಬರೋಡ, ಎಚ್‌ಡಿಎಫ್‌ಸಿ ಅಸೆಟ್ ಮ್ಯಾನೇಜ್ಮೆಂಟ್ ಕಂಪನಿ, ಅದಾನಿ ಟ್ರಾನ್ಸ್‌ಮಿಷನ್, ನೆಸ್ಲೆ ಇಂಡಿಯಾ ಮತ್ತು ಟೋಟಲ್ ಗ್ಯಾಸ್ ಜಿಗಿದಿವೆ. ಬಿಎಸ್‌ಇ ಮಿಡ್ ಕ್ಯಾಪ್ ಸೂಚ್ಯಂಕ ಶೇ 0.4ರಷ್ಟು ಗಳಿಸಿಕೊಂಡಿದ್ದು, ಕೆನರಾ ಬ್ಯಾಂಕ್, ಯೂನಿಯನ್ ಬ್ಯಾಂಕ್, ಎನ್‌ಎಚ್‌ಪಿಸಿ, ಬ್ಯಾಂಕ್ ಆಫ್ ಇಂಡಿಯಾ, ಸುಪ್ರೀಂ ಇಂಡಸ್ಟ್ರೀಸ್, ಕಂಟೇನರ್ ಕಾರ್ಪೊರೇಷನ್ ಆಫ್ ಇಂಡಿಯಾ ಮತ್ತು ಭಾರತ್ ಹೆವಿ ಎಲೆಕ್ಟ್ರಿಕಲ್ಸ್ ಹೆಚ್ಚಳ ದಾಖಲಿಸಿವೆ. ಡೆಲ್ಲಿವರಿ, ಪಿಬಿ ಫಿನ್‌ಟೆಕ್, ಟಾಟಾ ಎಲ್ಸಿ, ಸಂವರ್ಧನಾ ಮದರ್ ಸನ್ ಇಂಟರ್ ನ್ಯಾಷನಲ್, ಕ್ರಿಸೆಲ್, ಎಬಿಬಿ ಇಂಡಿಯಾ ಮತ್ತು ಲಾರಸ್ ಲ್ಯಾಬ್ಸ್ ಶೇ 5ರಿಂದ ಶೇ 31ರಷ್ಟು ಇಳಿಕೆಯಾಗಿವೆ.

ಮುನ್ನೋಟ: ಅಕ್ಟೋಬರ್ 24ರಂದು ಮುಹೂರ್ತ ವಹಿವಾಟಿನ ಉದ್ದೇಶದಿಂದ ಷೇರುಪೇಟೆಯಲ್ಲಿ ಸಂಜೆ 6.15ರಿಂದ 7.15ರವರೆಗೆ ವಹಿವಾಟು ನಡೆಯಲಿದೆ. ಈ ವಾರ ಡಾಬರ್, ಕ್ರಾಪ್ಟನ್, ಸೆಂಚುರಿ ಟೆಕ್ಸ್, ಬಂಧನ್ ಬ್ಯಾಂಕ್, ಮಾರುತಿ, ಪಿಸಿ ಜ್ಯುವೆಲರ್, ಎಸ್‌ಐ ಕಾರ್ಡ್ಸ್, ಟಾಟಾ ಪವರ್, ಟಾಟಾ ಕೆಮಿಕಲ್ಸ್, ಐಐಎಫ್‌ಎಲ್, ಆರ್‌ಇಸಿ ಲಿಮಿಟೆಡ್, ಎನ್‌ಟಿಪಿಸಿ, ಸೆಂಟ್ ಗೊಬೆನ್, ಪಿಎನ್‌ಬಿ ಹೌಸಿಂಗ್, ಎವರಿಡೇ ಸೇರಿ ಪ್ರಮುಖ ಕಂಪನಿಗಳು ತ್ರೈಮಾಸಿಕ ಫಲಿತಾಂಶ ಪ್ರಕಟಿಸಲಿವೆ. ಜಾಗತಿಕ ಬೆಳವಣಿಗೆಗಳ ಜೊತೆ ದೇಶಿ ವಿದ್ಯಮಾನಗಳು ಷೇರುಪೇಟೆ ಮೇಲೆ ಪರಿಣಾಮ ಬೀರಲಿವೆ.



ಮೈಸೂರಿನ ಉತ್ತನಹಳ್ಳಿಯಲ್ಲಿ ಭಾನುವಾರ ನಡೆದ ರಾಜ್ಯ ಸೈಕ್ಲಿಂಗ್ ಸ್ಪರ್ಧೆಯ 18 ವರ್ಷದೊಳಗಿನವರ ವಿಭಾಗದಲ್ಲಿ ಪಾಲ್ಗೊಂಡಿದ್ದ ಬಾಲಕರು. ಪ್ರಜಾವಾಣಿ ಚಿತ್ರ/ಅನೂಪ್ ರಾಘ.ಟಿ.

ಸೈಕ್ಲಿಂಗ್: ಬಾಗಲಕೋಟೆ ಚಾಂಪಿಯನ್

ಪ್ರಜಾವಾಣಿ ವಾರ್ತೆ

ಮೈಸೂರು: ಬಾಗಲಕೋಟೆ ಜಿಲ್ಲೆಯ ಸೈಕ್ಲಿಸ್ಟ್‌ಗಳು 35 ಅಂಕಗಳನ್ನು ಪಡೆದು ಜಿಲ್ಲಾ ಅಮೆಚೂರ್ ಸೈಕ್ಲಿಂಗ್ ಸಂಸ್ಥೆ ಆಶ್ರಯದಲ್ಲಿ ಭಾನುವಾರ ಮುಕ್ತಾಯವಾದ 13ನೇ ರಾಜ್ಯ ಸೈಕ್ಲಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಚಾಂಪಿಯನ್‌ಗಳಾಗಿ ಹೊರಹೊಮ್ಮಿದರು. ವಿಜಯಪುರ ಜಿಲ್ಲೆ (33 ಅಂಕ) ರನ್ನರ್‌ಅಪ್ ಸ್ಥಾನ ಪಡೆಯಿತು.

ಭಾನುವಾರ ನಡೆದ 16 ವರ್ಷದೊಳಗಿನವರ ಬಾಲಕರ 20 ಕಿ.ಮೀ. ವಿಭಾಗದಲ್ಲಿ ವಿಜಯಪುರ ಜಿಲ್ಲೆಯ ಸುಜಲ್ ಜಾಧವ್ ಪ್ರಥಮ ಸ್ಥಾನ ಗಳಿಸಿದರು. ಮೈಸೂರಿನ ಧನಂಜಯ ತಿಪ್ಪಣ್ಣವರ ದ್ವಿತೀಯ, ವಿಜಯಪುರ ಭೀರಪ್ಪ ನವಲಿ 3ನೇ ಸ್ಥಾನ ಪಡೆದರು.

ಬಾಲಕಿಯರ ವಿಭಾಗದಲ್ಲಿ ಬೆಂಗಳೂರಿನ ಪ್ರೇರಣಾ ಶ್ರವಣಕುಮಾರ ಮೊದಲ ಸ್ಥಾನ ಪಡೆದರೆ, ಮೈಸೂರಿನ ಆರಾಧನಾ ಸಂತೋಷ ದ್ವಿತೀಯ ಹಾಗೂ ಗದಗದ ಕೀರ್ತಿ ನಾಯಕ 3ನೇ ಸ್ಥಾನ ಗಳಿಸಿದರು.

18 ವರ್ಷದ ಬಾಲಕರ ವಿಭಾಗದಲ್ಲಿ ವಿಜಯಪುರ ಜಿಲ್ಲೆಯವರು ಪಾರಮ್ಯ ಮೆರೆದರು. ಸಂಭಾಜಿ ಜಾಧವ ಮೊದಲಿಗರಾದರೆ, ಪ್ರತಾಪ ಪಡಚಿ ದ್ವಿತೀಯ ಸ್ಥಾನ ಹಾಗೂ ರಮೇಶ ಮುಳಗೊಂಡಿ ತೃತೀಯ ಸ್ಥಾನ ಪಡೆದರು.

ಬಾಲಕಿಯರ ವಿಭಾಗದಲ್ಲಿ ಅಂಕಿತಾ ರಾಥೋಡ ಮೊದಲ ಸ್ಥಾನ ಪಡೆದರೆ, ಬಾಗಲಕೋಟೆಯ ನಂದಾ ಚಿಚಕಂಡಿ ದ್ವಿತೀಯ ಸ್ಥಾನ ಮತ್ತು ಸವಿತಾ ಆಡಗಲ್ ತೃತೀಯ ಸ್ಥಾನ ಗಳಿಸಿದರು.

23 ವರ್ಷದೊಳಗಿನವರ ಪುರುಷರ ವಿಭಾಗದಲ್ಲಿ ವಿಜಯಪುರದ ಸಚಿನ್ ರಂಜಣಗಿ ಮೊದಲ ಸ್ಥಾನ ಪಡೆದರೆ, ಬೆಂಗಳೂರಿನ ಜಿಶಾನ್ ಎಂ. ದ್ವಿತೀಯ ಸ್ಥಾನ ಹಾಗೂ ಬೆಳಗಾವಿಯ ಲಾಯಪ್ಪ ಮುಧೋಳ 3ನೇ ಸ್ಥಾನ ಪಡೆದರು.

ಪುರುಷರ 40 ಕಿ.ಮೀ. ವಿಭಾಗದಲ್ಲಿ ಬಾಗಲಕೋಟೆಯ ನಂದೆಪ್ಪ ಸವಡಿ ಪ್ರಥಮ, ಬೆಂಗಳೂರಿನ ಗಗನರೆಡ್ಡಿ ದ್ವಿತೀಯ ಮತ್ತು ಧಾರವಾಡದ ಶ್ರೀನಿಧಿ ಉರಲಾ ತೃತೀಯ ಸ್ಥಾನ ಗಳಿಸಿದರು. ಮಹಿಳೆಯರ 10 ಕಿ.ಮೀ. ವಿಭಾಗದಲ್ಲಿ ವಿಜಯಪುರದ ಸಹನಾ ಕುಡಿಗನೂರ, ಬಾಗಲಕೋಟೆಯ ಸಾವಿತ್ರಿ ಹೆಬ್ಬಾಳಟ್ಟಿ ಹಾಗೂ ಚೈತ್ರಾ ಬೋರ್ಜಿ ಕ್ರಮವಾಗಿ ಮೊದಲ ಮೂರು ಸ್ಥಾನ ಗಳಿಸಿದರು.

44 ಮಂದಿಗೆ ರಾಷ್ಟ್ರಮಟ್ಟಕ್ಕೆ: 'ಎರಡು ದಿನಗಳವರೆಗೆ ನಡೆದ ಸೈಕ್ಲಿಂಗ್ ಸ್ಪರ್ಧೆಯಲ್ಲಿ 44 ಮಂದಿ ರಾಷ್ಟ್ರಮಟ್ಟದ ಸ್ಪರ್ಧೆಗೆ ಆಯ್ಕೆಯಾಗಿದ್ದಾರೆ. ಈ ಪೈಕಿ ಮೈಸೂರಿನವರು ಐವರು ಇದೇ ಮೊದಲ ಬಾರಿಗೆ ಆಯ್ಕೆಯಾಗಿದ್ದಾರೆ. ಮಹಾರಾಷ್ಟ್ರದಲ್ಲಿ ಡಿಸೆಂಬರ್‌ನಲ್ಲಿ ಸ್ಪರ್ಧೆ ನಡೆಯಲಿದ್ದು, ಸ್ಥಳ-ದಿನಾಂಕ ನಿಗದಿಯಾಗಬೇಕಿದೆ' ಎಂದು ಸಂಸ್ಥೆಯ ಕಾರ್ಯದರ್ಶಿ ಎನ್. ಲೋಕೇಶ್ 'ಪ್ರಜಾವಾಣಿ'ಗೆ ತಿಳಿಸಿದರು.

ಪ್ರೊ ಕಬಡ್ಡಿ ಲೀಗ್: ಮಿಂಚಿದ ಭರತ್, ರೋಹಿತ್

ಬೆಂಗಳೂರು– ಪೈರೇಟ್ಸ್ ಪಂದ್ಯ 'ಟೈ'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಆರಂಭದಲ್ಲಿ ಹಿನ್ನಡೆ ಎದುರಾದರೂ ಮರುಹೋರಾಟ ನಡೆಸಿದ ಬೆಂಗಳೂರು ಬುಲ್ಸ್ ತಂಡದವರು ಪ್ರೊ ಕಬಡ್ಡಿ ಲೀಗ್ ಪಂದ್ಯದಲ್ಲಿ ಪಟ್ನಾ ಪೈರೇಟ್ಸ್ ಜತೆ 'ಟೈ' ಸಾಧಿಸಿದರು.

ಕಂಠೀರವ ಕ್ರೀಡಾಂಗಣದಲ್ಲಿ ಭಾನುವಾರ ನಡೆದ ಪಂದ್ಯ 31–31 ಪಾಯಿಂಟ್‌ಗಳ ಸಮಬಲದಲ್ಲಿ ಕೊನೆಗೊಂಡಿತು. ಜಿದ್ದಾಜಿದ್ದಿನ ಸೆಣಸಾಟ ನಡೆದ ಪಂದ್ಯದ ಪ್ರಥಮಾರ್ಧದಲ್ಲಿ ಪೈರೇಟ್ಸ್ 19–10 ರಲ್ಲಿ ಮುನ್ನಡೆಯಲ್ಲಿತ್ತು.

ಪೈರೇಟ್ಸ್ ತಂಡದ ರೋಹಿತ್ ಗುಲಿಯಾ (8) ಮತ್ತು ಸಚಿನ್ (6) ಅವರು ಆರಂಭದಲ್ಲಿ ಮೇಲಿಂದ ಮೇಲೆ ಪಾಯಿಂಟ್ಸ್ ಕಲೆಹಾಕಿ ಬುಲ್ಸ್ ತಂಡದ ಮೇಲೆ ಒತ್ತಡ ಹೇರಿದರು.ದ್ವಿತೀಯಾರ್ಧದಲ್ಲಿ ಬುಲ್ಸ್ ಪುಟಿದೆದ್ದು ನಿಂತಿತು. ಭರತ್ ಅವರು 11 ಪಾಯಿಂಟ್ಸ್ ಸಂಗ್ರಹಿಸಿ ಮರುಹೋರಾಟದ ನೇತೃತ್ವ ವಹಿಸಿದರು.

ಇನ್ನೊಂದು ಪಂದ್ಯದಲ್ಲಿ ಯು.ಪಿ ಯೋಧಾಸ್ 41–24 ಪಾಯಿಂಟ್ಸ್‌ಗಳಿಂದ ತಮಿಳ್ ತಲೈವಾಸ್ ತಂಡವನ್ನು ಮಣಿಸಿತು.


ಮಂಗಳವಾರದ ಪಂದ್ಯಗಳು

ಪುಣೇರಿ ಪಲ್ಟನ್– ಜೈಪುರ ಪಿಂಕ್ ಪ್ಯಾಂಥರ್ಸ್ (ರಾತ್ರಿ 7.30)

ತೆಲುಗು ಟೈಟನ್ಸ್– ಹರಿಯಾಣ ಸ್ಟೀಲ್ಸ್ (ರಾತ್ರಿ 8.30)

ಪಾಯಿಂಟ್ಸ್ ಪಟ್ಟಿ
(ಅಗ್ರ ಆರು ತಂಡಗಳು)

ತಂಡ	ಪಂದ್ಯ	ಜಯ	ಸೋಲು	ಟೈ	ಪಾಯಿಂಟ್
ಜೈಪುರ	6	5	1	0	26
ಡೆಲ್ಲಿ	6	5	1	0	26
ಬೆಂಗಳೂರು	7	4	2	1	24
ಗುಜರಾತ್	6	3	2	1	19
ಪುಣೇರಿ	6	3	2	1	19
ಯುಪಿ	6	3	3	0	18



ಬೆಂಗಳೂರು ಬುಲ್ಸ್ ಮತ್ತು ಪಟ್ನಾ ಪೈರೇಟ್ಸ್ ತಂಡಗಳ ನಡುವಿನ ಪೈಪೋಟಿ

ಚೆಸ್: ಅಪೂರ್ವ್, ಮನಸ್ವಿಗೆ ಪ್ರಶಸ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಅಪೂರ್ವ್ ಕಾಂಬ್ಳೆ ಮತ್ತು ಸಾನಿಕೊಮ್ಮು ಮನಸ್ವಿ ಅವರು ರಾಜ್ಯ 13 ವರ್ಷದೊಳಗಿನವರ ಫಿಡೆ ರೇಟೆಡ್ ಚೆಸ್ ಚಾಂಪಿಯನ್‌ಷಿಪ್‌ನಲ್ಲಿ ಕ್ರಮವಾಗಿ ಓಪನ್ ಮತ್ತು ಬಾಲಕಿಯರ ವಿಭಾಗದಲ್ಲಿ ಪ್ರಶಸ್ತಿ ಜಯಿಸಿದರು.

ಹೊಸಕೋಟೆ ತಾಲ್ಲೂಕಿನ ಶೆಟ್ಟಿಹಳ್ಳಿ ಕ್ರಾಸ್‌ನ ಶ್ರೀ ಸಾಯಿ ಪ್ಯಾಲೇಸ್‌ನಲ್ಲಿ ನಡೆದ ಚಾಂಪಿಯನ್‌ಷಿಪ್‌ನ ಓಪನ್ ವಿಭಾಗದ ಒಟ್ಟು ಒಂಬತ್ತು ಸುತ್ತುಗಳಲ್ಲಿ ಅಪೂರ್ವ್ 8.5 ಪಾಯಿಂಟ್ಸ್ ಕಲೆಹಾಕಿ ಅಗ್ರಸ್ಥಾನ ಗಳಿಸಿದರು. ಸಾರ್ಥಕ್ ಶರ್ಮಾ (8 ಪಾಯಿಂಟ್ಸ್) ರನ್ನರ್ಸ್ ಅಪ ಸ್ಥಾನ ಪಡೆದರು.

ಬಾಲಕಿಯರ ವಿಭಾಗದ ಎಂಟು ಸುತ್ತುಗಳಲ್ಲಿ ಮನಸ್ವಿ 7 ಪಾಯಿಂಟ್ಸ್ ಗಳಿಸಿ ಚಾಂಪಿಯನ್ ಆಗಿ ಹೊರಹೊಮ್ಮಿದರೆ, ದೃಷ್ಟಿ ಘೋಷ್ (6.5) ಎರಡನೇ ಸ್ಥಾನ ಗಳಿಸಿದರು.

ಎರಡೂ ವಿಭಾಗಗಳಲ್ಲಿ ಮೊದಲ ಎರಡೂ ಸ್ಥಾನ ಪಡೆದವರು ಡಿಸೆಂಬರ್‌ನಲ್ಲಿ ಪುದುಚೇರಿಯಲ್ಲಿ ನಡೆಯಲಿರುವ ರಾಷ್ಟ್ರೀಯ ಚಾಂಪಿಯನ್‌ಷಿಪ್‌ನಲ್ಲಿ ಕರ್ನಾಟಕ ತಂಡವನ್ನು ಪ್ರತಿನಿಧಿಸುವರು.



ಬಾಲಕಿಯರ ವಿಭಾಗದಲ್ಲಿ ರನ್ನರ್ಸ್ ಅಪ್ ಆದ ದೃಷ್ಟಿ ಘೋಷ್, ಪ್ರಶಸ್ತಿ ವಿಜೇತೆ ಸಾನಿಕೊಮ್ಮು ಮನಸ್ವಿ, ಓಪನ್ ವಿಭಾಗದಲ್ಲಿ ಪ್ರಶಸ್ತಿ ಗೆದ್ದ ಅಪೂರ್ವ್ ಕಾಂಬ್ಳೆ ಮತ್ತು ಸಾರ್ಥಕ್ ಶರ್ಮಾ

ಕರ್ನಾಟಕದಲ್ಲಿ 20 ಸಾವಿರ ಹೆಕ್ಟೇರ್ ಅಡಿಕೆ ತೋಟಕ್ಕೆ ಹಾನಿ

ಎಲೆಚುಕ್ಕಿ ರೋಗ: ತಜ್ಞರ ಸಮಿತಿ ರಚನೆ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕದಲ್ಲಿ ಅಡಿಕೆ ತೋಟಗಳಲ್ಲಿ ಹಬ್ಬಿರುವ ಎಲೆ ಚುಕ್ಕಿ ರೋಗದ ಬಗ್ಗೆ ಅಧ್ಯಯನ ನಡೆಸಲು ಏಳು ತಜ್ಞರನ್ನು ಒಳಗೊಂಡ ಸಮಿತಿಯನ್ನು ಕೇಂದ್ರ ಕೃಷಿ ಸಚಿವಾಲಯ ರಚಿಸಿದೆ.

ಸಮಿತಿಯಲ್ಲಿ ಕಾಸರಗೋಡಿನ ಕೇಂದ್ರೀಯ ತೋಟದ ಬೆಳೆಗಳ ಸಂಶೋಧನಾ ಸಂಸ್ಥೆಯ (ಸಿಪಿಸಿಆರ್‌ಐ) ಭಾರತೀಯ ಕೃಷಿ ವಿಜ್ಞಾನ ಪರಿಷತ್‌ನ ನಿರ್ದೇಶಕಿ ಅನಿತಾ ಕರುಣ್, ಕಲ್ಲಿಕೋಟೆಯ ಅಡಿಕೆ ಮತ್ತು ಮಸಾಲೆ ಅಭಿವೃದ್ಧಿ ನಿರ್ದೇಶನಾಲಯದ ನಿರ್ದೇಶಕ ಹನಿ ಚೆರಿಯನ್, ನಿರ್ದೇಶನಾಲಯದ ಉಪ ನಿರ್ದೇಶಕರಾದ ಫೆಮಿನಾ, ಸಿಪಿಸಿಆರ್‌ಐ ಬೆಳೆ ಉತ್ಪಾದನಾ ವಿಭಾಗದ ಮುಖ್ಯಸ್ಥ ರವಿ ಭಟ್, ಶಿವಮೊಗ್ಗ ಕೃಷಿ ವಿಶ್ವವಿದ್ಯಾಲಯದ ಸಂಶೋಧನಾ ನಿರ್ದೇಶಕ ಎಂ.ವಾಲಿ, ತೋಟಗಾರಿಕೆ ಇಲಾಖೆಯ ದಕ್ಷಿಣ ಕನ್ನಡದ ಉಪನಿರ್ದೇಶಕ ಎಚ್.ಆರ್.ನಾಯ್ಕ್, ಸಿಪಿಸಿಆರ್‌ಐನ ಬೆಳೆ ಸಂರಕ್ಷಣಾ ವಿಭಾಗದ ಮುಖ್ಯಸ್ಥ ವಿನಾಯಕ ಹೆಗಡೆ ಇದ್ದಾರೆ.

'ಸಮಿತಿಯು ಸಭೆಗಳನ್ನು ನಡೆಸಬಹುದು ಹಾಗೂ ಅಡಿಕೆಯ ಎಲೆ ಚುಕ್ಕಿ ರೋಗದ ಸಮಸ್ಯೆ ಬಗೆಹರಿಸಲು ಕಾರ್ಯತಂತ್ರಗಳನ್ನು ರೂಪಿಸಬೇಕು' ಎಂದು ಆದೇಶದಲ್ಲಿ ತಿಳಿಸಲಾಗಿದೆ.

ಕೇಂದ್ರ ಕೃಷಿ ಸಚಿವಾಲಯದ ಅಧಿಕಾರಿಗಳ ಜತೆಗೆ ಕೇಂದ್ರ ಕೃಷಿ ಖಾತೆ ರಾಜ್ಯ ಸಚಿವೆ ಶೋಭಾ ಕರಂದ್ಲಾಜೆ ಅವರು ಕಳೆದ ವಾರ ಸಭೆ ನಡೆಸಿ ರೋಗದ ಬಗ್ಗೆ ವೈಜ್ಞಾನಿಕವಾಗಿ ಅಧ್ಯಯನ ನಡೆಸಿ ಪರಿಹಾರ ಕಂಡುಕೊಳ್ಳಬೇಕು ಎಂದು ಸೂಚಿಸಿದ್ದರು.

ಕರ್ನಾಟಕದಲ್ಲಿ ಎಲೆಚುಕ್ಕಿ ರೋಗದಿಂದಾಗಿ 20 ಸಾವಿರ ಹೆಕ್ಟೇರ್‌ನಷ್ಟು ಅಡಿಕೆ ತೋಟಕ್ಕೆ ಹಾನಿಯಾಗಿದೆ. ಈ ರೋಗದ ಬಗ್ಗೆ ಅಧ್ಯಯನಕ್ಕೆ ವಿಜ್ಞಾನಿಗಳ ತಂಡ ಕಳುಹಿಸಿಕೊಡಬೇಕು ಎಂದು ಕರ್ನಾಟಕದ ಅಡಿಕೆ ಬೆಳೆಗಾರರ ನಿಯೋಗವು ಕೇಂದ್ರ ಸರ್ಕಾರಕ್ಕೆ ಕಳೆದ ಬುಧವಾರ ಮನವಿ ಸಲ್ಲಿಸಿತ್ತು.

ಗೃಹ ಸಚಿವ ಆರಗ ಜ್ಞಾನೇಂದ್ರ, ಶಾಸಕ ಬಿ.ಎಸ್.ಯಡಿಯೂರಪ್ಪ ನೇತೃತ್ವದ ನಿಯೋಗವು ಕೇಂದ್ರ ಕೃಷಿ ಸಚಿವ ನರೇಂದ್ರ ಸಿಂಗ್ ತೋಮರ್ ಅವರನ್ನು ಭೇಟಿ ಮಾಡಿ ಮನವಿ ಸಲ್ಲಿಸಿತ್ತು.

'ದೇಶದಲ್ಲಿ 12 ಲಕ್ಷ ಹೆಕ್ಟೇರ್ ಪ್ರದೇಶದಲ್ಲಿ ಅಡಿಕೆ ಬೆಳೆಯಲಾಗುತ್ತಿದ್ದು, ವಾರ್ಷಿಕ ವಹಿವಾಟು ₹5,400 ಕೋಟಿ ಆಗಿದೆ. ಕರ್ನಾಟಕದಲ್ಲಿ ₹4,300 ಕೋಟಿ ಮೌಲ್ಯದ 9.5 ಲಕ್ಷ ಟನ್ ಅಡಿಕೆ ಬೆಳೆಯಲಾಗುತ್ತಿದೆ. ಅಡಿಕೆ ಬೆಳೆಯು 50 ಲಕ್ಷ ಜನರಿಗೆ ಜೀವನೋಪಾಯವನ್ನು ಒದಗಿಸುತ್ತಿದೆ. ಕಳೆದ ಕೆಲವು ವರ್ಷಗಳಿಂದ ಅಡಿಕೆಗೆ ಉತ್ತಮ ಬೆಲೆ ದೊರಕುತ್ತಿದೆ. ಆದರೆ, ಇತ್ತೀಚಿನ ದಿನಗಳಲ್ಲಿ ಕಾಣಿಸಿಕೊಂಡಿರುವ ಈ ರೋಗದಿಂದಾಗಿ ರೈತರು ಸಂಕಷ್ಟಕ್ಕೆ ಸಿಲುಕಿದ್ದಾರೆ' ಎಂದು ತಿಳಿಸಲಾಗಿತ್ತು.

ಮುಖ್ಯಾಂಶಗಳು

- ತಜ್ಞರ ಸಮಿತಿಯಲ್ಲಿ ಏಳು ಮಂದಿ ಸದಸ್ಯರು
- ಕೇಂದ್ರ ಸಚಿವರನ್ನು ಭೇಟಿ ಮಾಡಿದ್ದ ರಾಜ್ಯದ ನಿಯೋಗ
- ಪ್ಯಾಕೇಜ್ ಘೋಷಿಸುವಂತೆ ಒತ್ತಾಯ

ಕರೂರ್ ವೈಶ್ಯ ಬ್ಯಾಂಕ್ ಲಾಭ ಶೇ 52ರಷ್ಟು ಏರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕರೂರ್ ವೈಶ್ಯ ಬ್ಯಾಂಕ್ ಸೆಪ್ಟೆಂಬರ್ ತ್ರೈಮಾಸಿಕದಲ್ಲಿ ₹ 250 ಕೋಟಿ ನಿವ್ವಳ ಲಾಭ ಕಂಡಿದೆ.

ಹಿಂದಿನ ವರ್ಷದ ಇದೇ ಅವಧಿಯಲ್ಲಿ ದಾಖಲಾಗಿದ್ದ ₹ 165 ಕೋಟಿ ನಿವ್ವಳ ಲಾಭಕ್ಕೆ ಹೋಲಿಸಿದರೆ, ಈ ಬಾರಿ ಲಾಭದ ಪ್ರಮಾಣವು ಶೇಕಡ 52ರಷ್ಟು ಹೆಚ್ಚಾಗಿದೆ.

ಸೆಪ್ಟೆಂಬರ್ ತ್ರೈಮಾಸಿಕದ ಅಂತ್ಯಕ್ಕೆ ಬ್ಯಾಂಕ್ ಒಟ್ಟು ₹ 1.35 ಲಕ್ಷ ಕೋಟಿ ಮೊತ್ತದ ವಹಿವಾಟು ನಡೆಸಿದೆ. ಇದು ಹಿಂದಿನ ವರ್ಷದ ಸೆಪ್ಟೆಂಬರ್ ತ್ರೈಮಾಸಿಕದ ವಹಿವಾಟಿಗೆ ಹೋಲಿಸಿದರೆ ಶೇ 13.58ರಷ್ಟು ಹೆಚ್ಚು ಎಂದು ಬ್ಯಾಂಕ್ ಪ್ರಕಟಣೆ ತಿಳಿಸಿದೆ.

ಬ್ಯಾಂಕ್ ನೀಡಿರುವ ಸಾಲಗಳ ಮೊತ್ತವು ಶೇ 15ರಷ್ಟು ಹೆಚ್ಚಾಗಿದೆ. ಠೇವಣಿಗಳ ಪ್ರಮಾಣವು ಶೇ 15ರಷ್ಟು ಹೆಚ್ಚಳ ಕಂಡಿದೆ.

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು

100 ಮೊಟ್ಟೆಗೆ	₹475
ಮೊಟ್ಟೆಗೆ	₹62

ಮೈಸೂರು

100 ಮೊಟ್ಟೆಗೆ	₹480

ರಾಮನಗರ ರೇಷ್ಮೆಗೂಡು ಧಾರಣೆ



ಮಿಶ್ರತಳಿ (ಸಿ.ಬಿ)	₹325-577
ದ್ವಿತಳಿ (ಬಿ.ವಿ)	₹400-788

ಮೂನ್‌ಲೈಟಿಂಗ್ ಒಪ್ಪಲಾಗದು: ಹ್ಯಾಪಿಯೆಸ್ಟ್ ಮೈಂಡ್ಸ್

ನವದೆಹಲಿ (ಪಿಟಿಐ): ಮೂನ್‌ಲೈಟಿಂಗ್‌ನಲ್ಲಿ ತೊಡಗುವುದು ಗುತ್ತಿಗೆ ಒಪ್ಪಂದದ ಉಲ್ಲಂಘನೆ ಆಗಿರುವುದರಿಂದ ಅದನ್ನು ಒಪ್ಪಲಾಗದು ಎಂದು ಐ.ಟಿ. ಕಂಪನಿ ಹ್ಯಾಪಿಯೆಸ್ಟ್ ಮೈಂಡ್ಸ್ ಟೆಕ್ನಾಲಜೀಸ್ ಭಾನುವಾರ ಹೇಳಿದೆ.

ಕಳೆದ ಕೆಲವು ತಿಂಗಳ ಅವಧಿಯಲ್ಲಿ ಇಂತಹ ಪ್ರವೃತ್ತಿಯಲ್ಲಿ ತೊಡಗಿಕೊಂಡಿದ್ದವರನ್ನು ಕೆಲಸದಿಂದ ತೆಗೆದುಹಾಕಲಾಗಿದೆ ಎಂದೂ ಕಂಪನಿ ತಿಳಿಸಿದೆ.

ಹೆಚ್ಚಿನ ಉದ್ಯೋಗಿಗಳು ಮೂನ್‌ಲೈಟಿಂಗ್‌ನಲ್ಲಿ ತೊಡಗಿಕೊಂಡಿಲ್ಲ ಎಂದು ಅದು ಹೇಳಿದೆ. ಆದರೆ, ಎಷ್ಟು ನೌಕರರ ವಿರುದ್ಧ ಕ್ರಮ ಜರುಗಿಸಲಾಗಿದೆ ಎನ್ನುವುದನ್ನು ಬಹಿರಂಗಗೊಳಿಸಿಲ್ಲ.

'ಗುತ್ತಿಗೆ ಒಪ್ಪಂದಕ್ಕೆ ಸಹಿ ಮಾಡಿದ್ದೀರಿ ಎಂದಾದರೆ ನಿರ್ದಿಷ್ಟ ಕಂಪನಿಗೆ ಮಾತ್ರವೇ ಕೆಲಸ ಮಾಡಲು ಒಪ್ಪಿದ್ದೀರಿ ಎಂದರ್ಥ' ಎಂದು ಕಂಪನಿಯ ಕಾರ್ಯನಿರ್ವಾಹಕ ಉಪಾಧ್ಯಕ್ಷ ಜೋಸೆಫ್ ಅನಂತರಾಜು ಹೇಳಿದ್ದಾರೆ.

ಸಂಕ್ಷಿಪ್ತ ಸುದ್ದಿ

'ನೋಟು ರದ್ದತಿಯಿಂದ ತೆರಿಗೆ ಸಂಗ್ರಹ ಏರಿಕೆ'

ನವದೆಹಲಿ (ಪಿಟಿಐ): ನೋಟು ರದ್ದತಿ ತೀರ್ಮಾನ ಕೂಡ ತೆರಿಗೆ ಸಂಗ್ರಹದಲ್ಲಿ ಹೆಚ್ಚಳ ಆಗಿರುವುದಕ್ಕೆ ಕಾರಣ ಎಂದು ಆರ್‌ಬಿಐನ ಹಣಕಾಸು ನೀತಿ ಸಮಿತಿ ಸದಸ್ಯೆ ಅಸಿಮಾ ಗೋಯಲ್ ಹೇಳಿದ್ದಾರೆ.

ಗರಿಷ್ಠ ಮುಖಬೆಲೆಯ ನೋಟುಗಳನ್ನು 2016ರ ನವೆಂಬರ್‌ನಲ್ಲಿ ಚಲಾವಣೆಯಿಂದ ಹಿಂಪಡೆಯಲಾಗಿತ್ತು. ನೋಟು ರದ್ದತಿಯಿಂದಾಗಿ ಅಲ್ಪಾವಧಿಯಲ್ಲಿ ಸಮಸ್ಯೆಗಳು ಆಗಿದ್ದರೂ, ದೀರ್ಘಾವಧಿಯಲ್ಲಿ ಪ್ರಯೋಜನ ಆಗಿದೆ ಎಂದು ಗೋಯಲ್ ಹೇಳಿದ್ದಾರೆ.

ಕೇರಳ: ಕುಲಪತಿಗಳ ರಾಜೀನಾಮೆಗೆ ರಾಜ್ಯಪಾಲ ಸೂಚನೆ

ತಿರುವನಂತಪುರ (ಪಿಟಿಐ): ಕೇರಳದ 9 ವಿಶ್ವವಿದ್ಯಾಲಯಗಳ ಕುಲಪತಿಗಳಿಗೆ ರಾಜೀನಾಮೆ ನೀಡುವಂತೆ ಅಲ್ಲಿನ ರಾಜ್ಯಪಾಲ ಆರಿಫ್ ಮೊಹಮ್ಮದ್ ಖಾನ್ ಭಾನುವಾರ ಸೂಚಿಸಿದ್ದಾರೆ.

ಯುಜಿಸಿ ನಿಯಮಗಳನ್ನು ಪಾಲಿಸದೆ ನೇಮಕಗೊಳಿಸಿರುವ ಕಾರಣ ತಿರುವನಂತಪುರದ ಅಬ್ದುಲ್ ಕಲಾಂ ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿಯ ನೇಮಕಾತಿ ರದ್ದುಗೊಳಿಸಿ ಸುಪ್ರೀಂಕೋರ್ಟ್ ಈಚೆಗೆ ಆದೇಶ ನೀಡಿತ್ತು. ಈ ಆದೇಶವನ್ನು ಎತ್ತಿ ಹಿಡಿದಿರುವ ರಾಜ್ಯಪಾಲರು, ತಾಂತ್ರಿಕ ವಿಶ್ವವಿದ್ಯಾಲಯದ ಕುಲಪತಿ ಸೇರಿದಂತೆ 9 ವಿ.ವಿ.ಕುಲಪತಿಗಳಿಗೆ ಸೋಮವಾರ ಬೆಳಿಗ್ಗೆ 11.30ರೊಳಗೆ ರಾಜೀನಾಮೆ ಸಲ್ಲಿಸುವಂತೆ ಸೂಚಿಸಿದ್ದಾರೆ ಎಂದು ಕೇರಳ ರಾಜಭವನದ ವಕ್ತಾರರು ಟ್ವೀಟ್ ಮಾಡಿದ್ದಾರೆ.

'ಕಾಶ್ಮೀರ ವಿಚಾರದಲ್ಲಿ ನಿಲುವು ಬದಲಾಗಿಲ್ಲ'

ನವದೆಹಲಿ (ಪಿಟಿಐ): ಕಾಶ್ಮೀರ ವಿಚಾರದಲ್ಲಿ ಜರ್ಮನಿಯ ನಿಲುವು ಬದಲಾಗಿಲ್ಲ. ದ್ವಿಪಕ್ಷೀಯ ಮಾತುಕತೆಯೇ ಈ ವಿವಾದಕ್ಕೆ ಪರಿಹಾರ ಎಂದು ಜರ್ಮನಿಯ ಭಾರತದ ರಾಯಭಾರಿ ಫಿಲಿಪ್ ಅಕರ್ಮನ್ ಪಿಟಿಐ ಸಂದರ್ಶನದಲ್ಲಿ ಸ್ಪಷ್ಟಪಡಿಸಿದ್ದಾರೆ.

ವಿಶ್ವಸಂಸ್ಥೆಯ ಮಧ್ಯಸ್ಥಿಕೆಯಲ್ಲಿ ಕಾಶ್ಮೀರ ವಿವಾದಕ್ಕೆ ಪರಿಹಾರಕ್ಕೆ ಕಂಡುಕೊಳ್ಳಲು ಜರ್ಮನಿ ಮತ್ತು ಪಾಕಿಸ್ತಾನದ ವಿದೇಶಾಂಗ ಸಚಿವರು ನೀಡಿದ್ದ ಆಹ್ವಾನವನ್ನು ಭಾರತ ನಿರಾಕರಿಸಿದ ಬೆನ್ನಲ್ಲೇ ಜರ್ಮನಿ ಈ ಹೇಳಿಕೆ ನೀಡಿದೆ.

ಉದ್ಯೋಗಿ ಮೇಲೆ ಅತ್ಯಾಚಾರ: 7 ಮಂದಿ ಬಂಧನ

ಚಾಯ್‌ಬಸಾ, ಜಾರ್ಖಂಡ್ (ಪಿಟಿಐ): 'ಇಲ್ಲಿನ ಪಶ್ಚಿಮ ಸಿಂಗ್‌ಭೂಮ್ ಜಿಲ್ಲೆಯಲ್ಲಿ 26 ವರ್ಷದ ಮಹಿಳೆ ಮೇಲೆ ಸುಮಾರು 10 ಮಂದಿ ಸಾಮೂಹಿಕ ಅತ್ಯಾಚಾರ ಎಸಗಿದ್ದ ಪ್ರಕರಣ ಸಂಬಂಧ ಒಟ್ಟು 7 ಮಂದಿಯನ್ನು ಬಂಧಿಸಲಾಗಿದೆ. ಇದರಲ್ಲಿ ಇಬ್ಬರು ಅಪ್ರಾಪ್ತ ವಯಸ್ಸಿನವರು ಇದ್ದಾರೆ' ಎಂದು ಪೊಲೀಸರು ತಿಳಿಸಿದ್ದಾರೆ.

'ಘಟನಾ ಸ್ಥಳದ ಸುತ್ತ ಪರಿಶೀಲನೆ ನಡೆಸಿದ್ದ ವಿಶೇಷ ತನಿಖಾ ತಂಡದ ಅಧಿಕಾರಿಗಳು, ಸ್ಥಳೀಯರನ್ನೂ ವಿಚಾರಣೆಗೆ ಒಳಪಡಿಸಿದ್ದರು. ಅವರು ನೀಡಿದ್ದ ಮಾಹಿತಿಯ ಆಧಾರದಲ್ಲಿ ಆರೋಪಿಗಳನ್ನು ಬಂಧಿಸಲಾಗಿದೆ' ಎಂದು ಪೊಲೀಸರು ಹೇಳಿದ್ದಾರೆ.

ಮದುವೆ ವಯಸ್ಸು ಏರಿಕೆ ತಿದ್ದುಪಡಿ ಮಸೂದೆ: ಪರಿಶೀಲನೆ ಅವಧಿ ವಿಸ್ತರಣೆ

ನವದೆಹಲಿ: ಮಹಿಳೆಯರ ಮದುವೆ ವಯಸ್ಸನ್ನು 18ರಿಂದ 21ಕ್ಕೆ ಏರಿಸುವ ಪ್ರಸ್ತಾವವಿರುವ ತಿದ್ದುಪಡಿ ಮಸೂದೆಯ ಪರಿಶೀಲನೆ ನಡೆಸಲು ಸಂಸದೀಯ ಸ್ಥಾಯಿ ಸಮಿತಿಗೆ ನೀಡಿರುವ ಕಾಲಾವಕಾಶವನ್ನು ಮೂರು ತಿಂಗಳ ಅವಧಿಗೆ ಪುನಃ ವಿಸ್ತರಿಸಲಾಗಿದೆ. ಹಾಗಾಗಿ ಈ ಬಾರಿಯ ಚಳಿಗಾಲದ ಸಂಸತ್ ಅಧಿವೇಶನದಲ್ಲಿ ಈ ಮಸೂದೆ ಕುರಿತು ಚರ್ಚೆ ನಡೆಯುವ ಸಾಧ್ಯತೆ ಇಲ್ಲ ಎನ್ನಲಾಗಿದೆ.

ಶಿಕ್ಷಣ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಯುವಜನ ಮತ್ತು ಕ್ರೀಡೆಗೆ ಸಂಬಂಧಿಸಿದ ಸಂಸದೀಯ ಸ್ಥಾಯಿ ಸಮಿತಿಯು ಬಾಲ್ಯ ವಿವಾಹ ತಡೆ (ತಿದ್ದುಪಡಿ) ಕಾಯ್ದೆ– 2021ರ ಪರಿಶೀಲನೆ ನಡೆಸುತ್ತಿದೆ. ಪರಿಶೀಲನೆ ನಡೆಸಲು ಸಮಿತಿಗೆ ನೀಡಿರುವ ಕಾಲಾವಕಾಶವನ್ನು ವಿಸ್ತರಿಸಲು ರಾಜ್ಯಸಭಾ ಅಧ್ಯಕ್ಷ ಜಗದೀಪ್ ಧನಕರ್ ಅವರು ಅನುಮತಿ ನೀಡಿದ್ದಾರೆ.

ಈ ಮೂಲಕ ಮೂರನೇ ಬಾರಿಗೆ ಅವಧಿ ವಿಸ್ತರಿಸಿದಂತಾಗಿದೆ. ಮಸೂದೆ ಕುರಿತು ವರದಿ ಸಲ್ಲಿಸಲು ಸಮಿತಿಗೆ ಜನವರಿ 23ರ ವರೆಗೆ ಸಮಯಾವಕಾಶ ಇದೆ.

'ಕಂಗೆಟ್ಟಿರುವ ಜನರನ್ನು ಅವಮಾನಿಸಬೇಡಿ'

ನವದೆಹಲಿ: 'ಹಣದುಬ್ಬರದಿಂದ ಜನಸಾಮಾನ್ಯರು ಕಂಗೆಟ್ಟಿದ್ದಾರೆ. ಉಚಿತ ಕೊಡುಗೆ ಸಂಸ್ಕೃತಿಯನ್ನು ಟೀಕಿಸುವ ಮೂಲಕ ಅವರನ್ನು ಅವಮಾನಿಸಬೇಡಿ' ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಕಿಡಿಕಾರಿದ್ದಾರೆ.

'ರಾಜಕಾರಣಿಗಳು ಬೇಕಾದಷ್ಟು ಸೌಲಭ್ಯಗಳನ್ನು ಉಚಿತವಾಗಿ ಪಡೆಯುತ್ತಿದ್ದಾರೆ. ಹೀಗಿರುವಾಗ ನಾಗರಿಕರು ಶಿಕ್ಷಣ, ಚಿಕಿತ್ಸೆ, ಔಷಧ ಹಾಗೂ ವಿದ್ಯುತ್ ಅನ್ನು ಏಕೆ ಉಚಿತವಾಗಿ ಪಡೆಯಬಾರದು' ಎಂದು ಕೇಜ್ರಿವಾಲ್ ಭಾನುವಾರ ಟ್ವೀಟ್ ಮಾಡಿದ್ದಾರೆ.

ಕಾರಿನಲ್ಲಿದ್ದ ಸಿಲಿಂಡರ್ ಸ್ಫೋಟ: ಒಬ್ಬ ಸಾವು

ಕೊಯಮತ್ತೂರು (ಪಿಟಿಐ): ಭಾನುವಾರ ಬೆಳಿಗ್ಗೆ ಕೊಯಮತ್ತೂರಿನ ಕಾರೊಂದರಲ್ಲಿ ಸಿಲಿಂಡರ್ ಸ್ಫೋಟಗೊಂಡಿದ್ದು, ಅದರಲ್ಲಿ ಪ್ರಯಾಣಿಸುತ್ತಿದ್ದ ವ್ಯಕ್ತಿಯು ಮೃತಪಟ್ಟಿದ್ದಾನೆ.

ಕೋಮು ಸೂಕ್ಷ್ಮ ಪ್ರದೇಶವಾದ ಉಕ್ಕಡಂನಲ್ಲಿ ಈ ಘಟನೆ ಸಂಭವಿಸಿದ್ದು, ಉದ್ವಿಗ್ನ ವಾತಾವರಣ ಉಂಟಾಗಿದೆ. ಸುತ್ತಮುತ್ತಲಿನ ಅಂಗಡಿಗಳನ್ನು ಮುಚ್ಚಲಾಗಿದೆ. ಯಾವುದೇ ಅಹಿತಕರ ಘಟನೆ ನಡೆಯದಂತೆ ಹೆಚ್ಚಿನ ಸಂಖ್ಯೆಯಲ್ಲಿ ಪೊಲೀಸ್ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ವಿವರವಾದ ತನಿಖೆ ನಡೆಯಬೇಕು ಎಂದು ಹಿಂದೂ ಮುನ್ನಣಿ ಸಂಘಟನೆಯು ಆಗ್ರಹಿಸಿದೆ.


ವಿಕೆಟ್ ಗಳಿಸಿದ ಭಾರತದ ಆರ್ಷದೀಪ್ ಸಿಂಗ್ ಅವರನ್ನು ಸಹ ಆಟಗಾರರು ಅಭಿನಂದಿಸಿದರು


ಪಂದ್ಯದ ವೇಳೆ ಅಭಿಮಾನಿಗಳ ಸಂಭ್ರಮ– ಎಎಫ್‌ಪಿ ಚಿತ್ರಗಳು

ಸ್ಕೋರ್ ಕಾರ್ಡ್

ಪಾಕಿಸ್ತಾನ 8ಕ್ಕೆ 159 (20 ಓವರ್)
ರಿಜ್ವಾನ್ ಸಿ ಭುವನೇಶ್ವರ್ ಬಿ ಆರ್ಷದೀಪ್ 4 (12ಎ, 4X1), ಬಾಬರ್ ಎಲ್‌ಬಿಡಬ್ಲ್ಯು ಆರ್ಷದೀಪ್ 0 (1ಎ), ಶಾನ್ ಔಟಾಗದೆ 52 (42ಎ, 4X5), ಇಫ್ತಿಕಾರ್ ಎಲ್‌ಬಿಡಬ್ಲ್ಯು ಶಮಿ 51 (34ಎ, 4X2, 6X4), ಶಾದಾಬ್ ಸಿ ಸೂರ್ಯಕುಮಾರ್ ಬಿ ಹಾರ್ದಿಕ್ 5 (6ಎ, 4X1), ಹೈದರ್ ಸಿ ಸೂರ್ಯಕುಮಾರ್ ಬಿ ಹಾರ್ದಿಕ್ 2 (4ಎ), ನವಾಜ್ ಸಿ ಕಾರ್ತಿಕ್ ಬಿ ಹಾರ್ದಿಕ್ 9 (6ಎ, 4X2), ಆಸಿಫ್ ಸಿ ಕಾರ್ತಿಕ್ ಬಿ ಆರ್ಷದೀಪ್ 2 (3ಎ), ಶಹೀನ್ ಶಾ ಸಿ ಮತ್ತು ಬಿ ಭುವನೇಶ್ವರ್ 16 (8ಎ, 4X1, 6X1), ಹ್ಯಾರಿಸ್ ಔಟಾಗದೆ 6 (4ಎ, 6X1)
ಇತರೆ 12 (ಬೈ 2, ಲೆಗ್‌ಬೈ 4, ವೈಡ್ 6)
ವಿಕೆಟ್ ಪತನ: 1-1 (ಬಾಬರ್ ಆಜಂ, 1.1), 2-15 (ಮೊಹಮ್ಮದ್ ರಿಜ್ವಾನ್, 3.6), 3-91 (ಇಫ್ತಿಕಾರ್ ಅಹಮದ್, 12.2), 4-96 (ಶಾದಾಬ್ ಖಾನ್, 13.2), 5-98 (ಹೈದರ್ ಅಲಿ, 13.6), 6-115 (ಮೊಹಮ್ಮದ್ ನವಾಜ್, 15.5), 7-120 (ಆಸಿಫ್ ಅಲಿ, 16.4), 8-151 (ಶಹೀನ್ ಶಾ ಅಫ್ರಿದಿ, 19.2)
ಬೌಲಿಂಗ್: ಭುವನೇಶ್ವರ್ ಕುಮಾರ್ 4–0–22–1, ಆರ್ಷದೀಪ್ ಸಿಂಗ್ 4–0–32–3, ಮೊಹಮ್ಮದ್ ಶಮಿ 4–0–25–1, ಹಾರ್ದಿಕ್ ಪಾಂಡ್ಯ 4–0–30–3, ರವಿಚಂದ್ರನ್ ಅಶ್ವಿನ್ 3–0–23–0, ಅಕ್ಷರ್ ಪಟೇಲ್ 1–0–21–0

ಭಾರತ 6ಕ್ಕೆ 160 (20 ಓವರ್)
ರಾಹುಲ್ ಬಿ ನಸೀಮ್ ಶಾ 4 (8ಎ), ರೋಹಿತ್ ಸಿ ಇಫ್ತಿಕಾರ್ ಬಿ ಹ್ಯಾರಿಸ್ 4 (7ಎ), ವಿರಾಟ್ ಔಟಾಗದೆ 82 (53ಎ, 4X6, 6X4), ಸೂರ್ಯಕುಮಾರ್ ಸಿ ರಿಜ್ವಾನ್ ಬಿ ಹ್ಯಾರಿಸ್ 15 (10ಎ, 4X2), ಅಕ್ಷರ್ ರನೌಟ್ (ಬಾಬರ್/ರಿಜ್ವಾನ್) 2 (3ಎ), ಹಾರ್ದಿಕ್ ಸಿ ಬಾಬರ್ ಬಿ ನವಾಜ್ 40 (37ಎ, 4X1, 6X2), ಕಾರ್ತಿಕ್ ಸ್ಟಂಪ್ಡ್ ರಿಜ್ವಾನ್ ಬಿ ನವಾಜ್ 1 (2ಎ), ಅಶ್ವಿನ್ ಔಟಾಗದೆ 1 (1ಎ)
ಇತರೆ 11 (ಬೈ3, ಲೆಗ್‌ಬೈ 1, ನೋಬಾಲ್ 1, ವೈಡ್ 6)
ವಿಕೆಟ್ ಪತನ: 1-7 (ಕೆ.ಎಲ್.ರಾಹುಲ್, 1.5), 2-10 (ರೋಹಿತ್ ಶರ್ಮಾ, 3.2), 3-26 (ಸೂರ್ಯಕುಮಾರ್, 5.3), 4-31 (ಅಕ್ಷರ್ ಪಟೇಲ್, 6.1), 5-144 (ಹಾರ್ದಿಕ್ ಪಾಂಡ್ಯ, 19.1), 6-158 (ದಿನೇಶ್ ಕಾರ್ತಿಕ್, 19.5)
ಬೌಲಿಂಗ್: ಶಹೀನ್ ಶಾ ಅಫ್ರಿದಿ 4–0–34–0, ನಸೀಮ್ ಶಾ 4–0–23–1, ಹ್ಯಾರಿಸ್ ರವೂಫ್ 4–0–36–2, ಶಾದಾಬ್ ಖಾನ್ 4–0–21–0, ಮೊಹಮ್ಮದ್ ನವಾಜ್ 4–0–42–2

ಫಲಿತಾಂಶ: ಭಾರತಕ್ಕೆ 4 ವಿಕೆಟ್‌ಗಳ ಗೆಲುವು
ಪಂದ್ಯಶ್ರೇಷ್ಠ: ವಿರಾಟ್ ಕೊಹ್ಲಿ

ಪಾಕಿಸ್ತಾನ ತಂಡಕ್ಕೆ ನಿರಾಶೆ: ಹಾರ್ದಿಕ್ ಪಾಂಡ್ಯ ಆಲ್‌ರೌಂಡ್ ಆಟ, ಆರ್ಷದೀಪ್ ಸಿಂಗ್ ಚುರುಕಿನ ದಾಳಿ

ರೋಚಕ ವಿಜಯದ ರೂವಾರಿ ವಿರಾಟ್

• ಆರ್. ಕೌಶಿಕ್

ಮೆಲ್ಬರ್ನ್: ವಿಶ್ವಕಪ್ ಕ್ರಿಕೆಟ್ ಟೂರ್ನಿಗಳಲ್ಲಿ ಭಾರತ ಹಾಗೂ ಪಾಕಿಸ್ತಾನ ತಂಡಗಳ ನಡುವಣ ಪಂದ್ಯಗಳಲ್ಲಿ ಏಕಪಕ್ಷೀಯ ಫಲಿತಾಂಶಗಳು ಬಂದಿರುವುದೇ ಹೆಚ್ಚು. ಆದರೆ ಭಾನುವಾರ ಈ ‘ಬದ್ಧ ಪ್ರತಿಸ್ಪರ್ಧಿ’ಗಳ ಹೋರಾಟವು ಅತ್ಯಂತ ರೋಚಕ ಅಂತ್ಯ ಕಂಡಿತು.

ಹೋದ ವರ್ಷ ದುಬೈನಲ್ಲಿ ಭಾರತ ತಂಡವನ್ನು ಬಾಬರ್ ಆಜಂ ಬಳಗವು ಹತ್ತು ವಿಕೆಟ್‌ಗಳಿಂದ ಸೋಲಿಸಿದಾಗ ಪಂದ್ಯದಲ್ಲಿ ಇನ್ನೂ 13 ಎಸೆತಗಳು ಬಾಕಿಯಿದ್ದವು. ಆದರೆ, ಮೆಲ್ಬರ್ನ್ ಕ್ರಿಕೆಟ್ ಅಂಗಳದಲ್ಲಿ ಕಿಕ್ಕಿರಿದು ಸೇರಿದ್ದ ಕ್ರಿಕೆಟ್‌ಪ್ರೇಮಿಗಳ ಸಮ್ಮುಖದಲ್ಲಿ ಕೊನೆಯ ಎಸೆತದವರೆಗೂ ಕುತೂಹಲ ಕೆರಳಿಸಿದ್ದ ಪಂದ್ಯದಲ್ಲಿ ಭಾರತ 4 ವಿಕೆಟ್‌ಗಳಿಂದ ಜಯಿಸಿತು. ಏಷ್ಯಾ ಖಂಡದ ಎರಡು ದೊಡ್ಡ ಕ್ರಿಕೆಟ್ ಶಕ್ತಿಗಳ ಅಸಾಧಾರಣ ಹಣಾಹಣಿ ಇದಾಗಿತ್ತು. ಇಡೀ ಪಂದ್ಯದಲ್ಲಿ ಚಂಚಲವಾಗಿದ್ದ ‘ವಿಜಯ’ ಕೊನೆಗೂ ಭಾರತಕ್ಕೆ ಒಲಿಯಿತು. ವಿರಾಟ್ ಕೊಹ್ಲಿಯ ಅಜೇಯ ಇನಿಂಗ್ಸ್‌ಗೆ ಕ್ರಿಕೆಟ್ ಅಭಿಮಾನಿಗಳು ಮನಸೋತರು.

ಟಾಸ್ ಗೆದ್ದ ರೋಹಿತ್ ಶರ್ಮಾ ಫೀಲ್ಡಿಂಗ್ ಆಯ್ಕೆ ಮಾಡಿಕೊಂಡರು. ಆರ್ಷದೀಪ್ ಸಿಂಗ್ ಹಾಗೂ ಹಾರ್ದಿಕ್ ಪಾಂಡ್ಯ ಅಮೋಘ ಬೌಲಿಂಗ್ ನಡುವೆಯೂ ಪಾಕ್ ತಂಡವು 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 159 ರನ್ ಗಳಿಸಿತು. ಮಿಂಚಿನಾಟವಾಡಿದ ಇಫ್ತಿಕಾರ್ ಅಹಮದ್ ತಂಡದ ಇನಿಂಗ್ಸ್‌ಗೆ ಬಲ ತುಂಬಿದರು.

ಪಾಕ್ ತಂಡದ ಪ್ರತಿಭಾವಂತ ವೇಗದ ಬೌಲರ್‌ಗಳ ದಂಡು ತಮ್ಮ ನಾಯಕ ಬಾಬರ್ ಆಜಂ ನಿರೀಕ್ಷೆಯನ್ನು ಹುಸಿಗೊಳಿಸಲಿಲ್ಲ. ಗುರಿ ಬೆನ್ನಟ್ಟಿದ ಭಾರತಕ್ಕೆ ಆರಂಭದಲ್ಲಿಯೇ ಆಘಾತ ನೀಡಿದರು. ಬ್ಯಾಟಿಂಗ್‌ಸ್ನೇಹಿ ಪಿಚ್‌ನಲ್ಲಿ ಶಹೀನ್ ಶಾ ಆಫ್ರಿದಿ, ನಸೀಮ್ ಶಾ ಹಾಗೂ ಹ್ಯಾರಿಸ್ ರವೂಫ್ ದಾಳಿ ರಂಗೇರಿತು. ಇನಿಂಗ್ಸ್‌ನ ಎರಡನೇ ಓವರ್‌ನಲ್ಲಿ ನಸೀಂ ಎಸೆತದಲ್ಲಿ ಕೆ.ಎಲ್. ರಾಹುಲ್ ಔಟಾದರೆ, ರವೂಫ್ ಓವರ್‌ಗಳಲ್ಲಿ ರೋಹಿತ್ ಹಾಗೂ ಸೂರ್ಯಕುಮಾರ್ ಯಾದವ್ ವಿಕೆಟ್ ಒಪ್ಪಿಸಿದರು. 5ನೇ ಕ್ರಮಾಂಕಕ್ಕೆ ಬಡ್ತಿ ಪಡೆದು ಕ್ರೀಸ್‌ಗೆ ಬಂದ ಅಕ್ಷರ್ ಪಟೇಲ್ ರನೌಟ್ ಆದರು. ಭಾರತ 31 ರನ್‌ಗಳಿಗೆ ನಾಲ್ಕು ವಿಕೆಟ್ ಕಳೆದುಕೊಂಡಿತು. ಈ ಹಂತದಲ್ಲಿ ವಿರಾಟ್ 21 ಎಸೆತಗಳಲ್ಲಿ 12 ರನ್ ಗಳಿಸಿದ್ದರು. ಅನುಭವಿ ಆಟಗಾರ ಕೊಹ್ಲಿಯ ದೈಹಿಕ ಸಾಮರ್ಥ್ಯ ಹಾಗೂ ರನ್ ಚೇಸ್‌ಗಳ ಚಾಣಾಕ್ಷನ ಆಟ ಕಳೆಗಟ್ಟಲಿದೆ ಎಂಬುದು ಇನ್ನೂ ಯಾರಿಗೂ ಸ್ಪಷ್ಟವಾಗಿರಲಿಲ್ಲ. ಬಹುಶಃ ಸ್ವತಃ ಕೊಹ್ಲಿ ಕೂಡ ಅಂದುಕೊಂಡಿರಲಿಲ್ಲವೇನೋ? ಇನಿಂಗ್ಸ್‌ನ 12ನೇ ಓವರ್‌ನಲ್ಲಿ ತಮ್ಮ ಆಟದ ವೇಗವನ್ನು ಅವರು ಬದಲಿಸಿದ್ದರು. ಇದು ಅವರ ಮುಂದಿನ ಅಬ್ಬರಕ್ಕೆ ಮೊದಲ ಲಕ್ಷಣವಾಗಿತ್ತು. ಎಡಗೈ ಸ್ಪಿನ್ನರ್ ಮೊಹಮ್ಮದ್ ನವಾಜ್ ಎಸೆತವನ್ನು ಲಾಂಗ್ ಆನ್‌ಗೆ ಸಿಕ್ಸರ್ ಎತ್ತಿದರು. ಇನಿಂಗ್ಸ್‌ನಲ್ಲಿ ಚೆಂಡನ್ನು ಮೊದಲ ಬಾರಿಗೆ ಬೌಂಡರಿ ದಾಟಿಸಿದರು. ಇನ್ನೊಂದು ಬದಿಯಲ್ಲಿದ್ದ ಹಾರ್ದಿಕ್ ಪಾಂಡ್ಯ ಬ್ಯಾಟಿಂಗ್‌ನಲ್ಲಿಯೂ ತಮ್ಮ ಕಾಣಿಕೆ ನೀಡಿದರು. ಅದೇ ಓವರ್‌ನಲ್ಲಿ ಹಾರ್ದಿಕ್ ಎರಡು ಸಿಕ್ಸರ್ ಎತ್ತಿದರು. ಒಟ್ಟು 20 ರನ್‌ಗಳು ಬಂದವು. ಅದುವರೆಗೂ ಮಂಕಾಗಿದ್ದ ಭಾರತದ ಅಭಿಮಾನಿಗಳಲ್ಲಿ ಮಿಂಚಿನ ಸಂಚಾರವಾಯಿತು.

ಕೊಹ್ಲಿ ಹಾಗೂ ಪಾಂಡ್ಯ ಜೋಡಿಯು 5ನೇ ವಿಕೆಟ್‌ಗೆ 113 ರನ್ ಜೊತೆಯಾಟವು ಪಾಕ್ ನಾಯಕ ಆಜಂ ಒತ್ತಡ ಹೆಚ್ಚಿಸಿದವು. ಭಾರತಕ್ಕೆ ಕೊನೆಯ ಓವರ್‌ನಲ್ಲಿ ಗೆಲುವಿಗೆ 16 ರನ್ ಅಗತ್ಯವಿತ್ತು. ಈ ಒಂದು ಓವರ್ ದೊಡ್ಡ ಘಟನಾವಳಿಯೇ ಆಯಿತು. ಸ್ಪಿನ್ನರ್ ಮೊಹಮ್ಮದ್ ನವಾಜ್ ಹಾಕಿದ ಈ ಓವರ್‌ನಲ್ಲಿ ಹಾರ್ದಿಕ್ ಹಾಗೂ ದಿನೇಶ್ ಕಾರ್ತಿಕ್ ವಿಕೆಟ್‌ಗಳು ಪತನವಾದವು. ಸೊಂಟದೆತ್ತರದ ಫುಲ್‌ಟಾಸ್ ಸಿಕ್ಸರ್‌ಗೆತ್ತುವಲ್ಲಿ ಕೊಹ್ಲಿ ಯಶಸ್ವಿಯಾದರು. ಅಂಪೈರ್ ನೋಬಾಲ್ ಸೂಚನೆ ಕೊಟ್ಟರು. ಫ್ರೀಹಿಟ್ ಅವಕಾಶದ ಎಸೆತದಲ್ಲಿ ಚೆಂಡು ಸ್ಟಂಪ್‌ಗೆ ಬಡಿದು ಹಿಂದೆ ಧಾವಿಸಿತು. 3 ಬೈ ರನ್ ಖಾತೆ ಸೇರಿದವು. ಕೊನೆಯ ಎಸೆತದಲ್ಲಿ 1 ರನ್ ಬೇಕಿತ್ತು. ಕ್ರೀಸ್‌ನಲ್ಲಿದ್ದ ಆರ್. ಅಶ್ವಿನ್ ವಿಜಯದ ರನ್ ಗಳಿಸಿದರು.


ಹಾರ್ದಿಕ್ ಪಾಂಡ್ಯ ಬೌಲಿಂಗ್ ವೈಖರಿ– ಎಪಿ ಚಿತ್ರ

ಅನುಷ್ಕಾ ಶರ್ಮಾ ಹೆಮ್ಮೆ



ತಮ್ಮ ಪತಿ ವಿರಾಟ್ ಕೊಹ್ಲಿ ಅವರ ಆಟಕ್ಕೆ ಅನುಷ್ಕಾ ಶರ್ಮಾ ಭಾವುಕರಾಗಿ ಇನ್ಸ್ಟಾಗ್ರಾಮ್‌ನಲ್ಲಿ ಸಂದೇಶ ಹಾಕಿದ್ದಾರೆ. 'ದೀಪಾವಳಿಯ ಮುನ್ನಾದಿನವಾದ ಇಂದು ದೇಶದ ಜನರಿಗೆ ಬಹಳಷ್ಟು ಸಂತಸವನ್ನು ನೀಡಿದ್ದೀರಿ. ನೀವು ಅದ್ಭುತವಾದ ವ್ಯಕ್ತಿ. ಸ್ಥೈರ್ಯ, ಕಠಿಣ ಪರಿಶ್ರಮ ಮತ್ತು ಆತ್ಮವಿಶ್ವಾಸ ಗಳು ಎಂತಹವರನ್ನೂ ಪ್ರಭಾವಿಸುವಂತಹ ಗುಣಗಳು. ನಾನು ನನ್ನ ಜೀವನದಲ್ಲೇ ಅತ್ಯುತ್ತಮ ಪಂದ್ಯವನ್ನು ನೋಡಿದೆ ಎಂದು ಹೇಳಬಲ್ಲೆ. ತನ್ನ ತಾಯಿ ಏಕೆ ರೂಮಿನಲ್ಲಿ ಕುಣಿದಾಡುತ್ತಿದ್ದಾಳೆ, ಚೀರಾಡುತ್ತಿದ್ದಾಳೆ ಎಂಬುದನ್ನು ಅರ್ಥ ಮಾಡಿಕೊಳ್ಳಲು ನಮ್ಮ ಮಗಳು ಇನ್ನೂ ಚಿಕ್ಕವಳು. ಆದರೆ, ಮುಂದೊಂದು ದಿನ ಅವಳಿಗೆ ತಿಳಿವಳಿಕೆ ಬಂದಾಗ ತನ್ನ ತಂದೆಯ ವೃತ್ತಿಜೀವನದ ಅತ್ಯಂತ ಶ್ರೇಷ್ಠ ಇನಿಂಗ್ಸ್ ಆಡಿದ್ದರು ಎಂಬುದನ್ನು ಅರ್ಥ ಮಾಡಿಕೊಳ್ಳುತ್ತಾಳೆ. ತುಂಬಾ ಹೆಮ್ಮೆ ಪಡುತ್ತಿದ್ದೇನೆ' ಎಂದು ಬರೆದಿದ್ದಾರೆ.

ಸ್ಪಿನ್ ದಾಳಿ: ಲಂಕಾ ಜಯಭೇರಿ

ಹೋಬರ್ಟ್ (ಪಿಟಿಐ): ಸ್ಪಿನ್ನರ್‌ಗಳ ಕೈಚಳಕ ಮತ್ತು ಕುಸಾಲ್ ಮೆಂಡಿಸ್ ಗಳಿಸಿದ ಅಜೇಯ ಅರ್ಧಶತಕದ ನೆರವಿನಿಂದ ಶ್ರೀಲಂಕಾ ತಂಡ ಟಿ20 ವಿಶ್ವಕಪ್ ಕ್ರಿಕೆಟ್ ಟೂರ್ನಿಯಲ್ಲಿ 9 ವಿಕೆಟ್‌ಗಳಿಂದ ಐರ್ಲೆಂಡ್ ತಂಡವನ್ನು ಮಣಿಸಿತು.

ಭಾನುವಾರ ನಡೆದ ಪಂದ್ಯದಲ್ಲಿ ಮೊದಲು ಬ್ಯಾಟ್ ಮಾಡಿದ ಐರ್ಲೆಂಡ್ 20 ಓವರ್‌ಗಳಲ್ಲಿ 8 ವಿಕೆಟ್‌ಗಳಿಗೆ 128 ರನ್ ಗಳಿಸಿದರೆ, ಲಂಕಾ ಇನ್ನೂ ಐದು ಓವರ್‌ಗಳು ಇರುವಂತೆಯೇ 1 ವಿಕೆಟ್‌ಗೆ 133 ರನ್ ಗಳಿಸಿ ಗೆದ್ದಿತು.

ಟಾಸ್ ಗೆದ್ದ ಐರ್ಲೆಂಡ್ ತಂಡದ ನಾಯಕ ಆ್ಯಂಡ್ರ್ಯೂ ಬಲ್ಬಿರ್ನಿ ಮೊದಲು ಬ್ಯಾಟ್ ಮಾಡಲು ನಿರ್ಧರಿಸಿದರು. ಆದರೆ ಲಂಕಾ ಬೌಲರ್‌ಗಳ ಶಿಸ್ತಿನ ದಾಳಿಯನ್ನು ಎದುರಿಸಿ ನಿಲ್ಲುವಲ್ಲಿ ಬ್ಯಾಟರ್‌ಗಳು ವಿಫಲರಾದರು. ಸ್ಪಿನ್ನರ್‌ಗಳಾದ ಮಹೀಶ್ ತೀಕ್ಷಣ (19ಕ್ಕೆ 2) ಮತ್ತು ವಣಿಂದು ಹಸರಂಗ (25ಕ್ಕೆ 2) ಹಾಗೂ ವೇಗಿಗಳು ಮಿಂಚಿದರು.

ಪಾಲ್ ಸ್ಟರ್ಲಿಂಗ್ (34 ರನ್, 25 ಎ.) ಮತ್ತು ಹ್ಯಾರಿ ಟೆಕ್ಟರ್ (45 ರನ್, 42 ಎ.) ಮಾತ್ರ ಅಲ್ಪ ಪ್ರತಿರೋಧ ಒಡ್ಡಿದರು. ಬಲ್ಬಿರ್ನಿ (1) ಮತ್ತು ಲಾರ್ಸನ್ ಟಕರ್ (10) ಅವರು ಬೇಗನೇ ಔಟಾದರು. ಸ್ಟರ್ಲಿಂಗ್ ಹಾಗೂ ಟೆಕ್ಟರ್ ಮೂರನೇ ವಿಕೆಟ್‌ಗೆ 29 ರನ್ ಸೇರಿಸಿ ಇನಿಂಗ್ಸ್‌ಗೆ ಬಲ ತುಂಬಲು ಪ್ರಯತ್ನಿಸಿದರು. ಆದರೆ ಸ್ಟರ್ಲಿಂಗ್ ವಿಕೆಟ್ ಪಡೆದ ಧನಂಜಯ, ಈ ಜತೆಯಾಟ ಮುರಿದರು.

ಆ ಬಳಿಕ ಆಗಿಂದಾಗ್ಗೆ ವಿಕೆಟ್‌ಗಳನ್ನು ಕಳೆದುಕೊಂಡ ತಂಡಕ್ಕೆ ಚೇತರಿಸಿಕೊಳ್ಳಲು ಆಗಲಿಲ್ಲ. ಜಾರ್ಜ್ ಡಾಕ್ರೆಲ್ (14 ರನ್, 16 ಎ.) ಕೂಡಾ ಬಿರುಸಿನ ಆಟವಾಡಲು ವಿಫಲವಾದರು. ಲಂಕಾ ಪರ ಬೌಲಿಂಗ್ ಮಾಡಿದ ಎಲ್ಲ ಆರೂ ಮಂದಿಗೆ ವಿಕೆಟ್ ಲಭಿಸಿದವು.


ಶ್ರೀಲಂಕಾ ತಂಡದ ಕುಸಾಲ್ ಮೆಂಡಿಸ್ ಬ್ಯಾಟಿಂಗ್ ವೈಖರಿ –ಎಎಫ್‌ಪಿ ಚಿತ್ರ

ಸಾಧಾರಣ ಗುರಿ ಬೆನ್ನಟ್ಟಿದ ಲಂಕಾ ಅಲ್ಪವೂ ಒತ್ತಡಕ್ಕೆ ಒಳಗಾಗಲಿಲ್ಲ. ಕುಸಾಲ್ ಮೆಂಡಿಸ್ (ಔಟಾಗದೆ 68, 43 ಎ., 4X5, 6X3) ಮತ್ತು ಧನಂಜಯ ಡಿಸಿಲ್ವಾ (31, 25 ಎ.) ಮೊದಲ ವಿಕೆಟ್‌ಗೆ 63 ರನ್ ಸೇರಿಸಿದರು. ಮೆಂಡಿಸ್ ಆ ಬಳಿಕ ಚರಿತ ಅಸಲಂಕಾ (ಔಟಾಗದೆ 31, 22 ಎ.) ಅವರೊಂದಿಗೆ ಸೇರಿಕೊಂಡು ತಂಡವನ್ನು ಗೆಲುವಿನ ಗಡಿ ದಾಟಿಸಿದರು.

ಸಂಕ್ಷಿಪ್ತ ಸ್ಕೋರ್: ಐರ್ಲೆಂಡ್ 20 ಓವರ್‌ಗಳಲ್ಲಿ 8 ವಿಕೆಟ್‌ಗೆ 128 (ಪಾಲ್ ಸ್ಟರ್ಲಿಂಗ್ 34, ಹ್ಯಾರಿ ಟೆಕ್ಟರ್ 45, ಜಾರ್ಜ್ ಡಾಕ್ರೆಲ್ 14, ಮಹೀಶ್ ತೀಕ್ಷಣ 19ಕ್ಕೆ 2, ವಣಿಂದು ಹಸರಂಗ 25ಕ್ಕೆ 2, ಲಾಹಿರು ಕುಮಾರ 12ಕ್ಕೆ 1, ಧನಂಜಯ ಡಿಸಿಲ್ವಾ 13ಕ್ಕೆ 1, ಬಿನುರ ಫೆರ್ನಾಂಡೊ 27ಕ್ಕೆ 1, ಚಮಿಕ ಕರುಣರತ್ನೆ 29ಕ್ಕೆ 1) ಶ್ರೀಲಂಕಾ 15 ಓವರ್‌ಗಳಲ್ಲಿ 1 ವಿಕೆಟ್‌ಗೆ 133 (ಕುಸಾಲ್ ಮೆಂಡಿಸ್ ಔಟಾಗದೆ 68, ಧನಂಜಯ ಡಿಸಿಲ್ವಾ 31, ಚರಿತ ಅಸಲಂಕಾ ಔಟಾಗದೆ 31, ಗರೆತ್ ಡೆಲನಿ 28ಕ್ಕೆ 1) ಫಲಿತಾಂಶ: ಶ್ರೀಲಂಕಾಕ್ಕೆ 9 ವಿಕೆಟ್ ಗೆಲುವು

ಎಂಸಿಜಿಯಲ್ಲಿ ಗಂಧದಗುಡಿ

ಪುನೀತ್ ರಾಜಕುಮಾರ್ ಅವರ ಕೊನೆಯ ಚಿತ್ರ ಗಂಧದಗುಡಿಯ ಪೋಸ್ಟರ್ ಭಾರತ–ಪಾಕ್ ಪಂದ್ಯ ನಡೆದ ಎಂಸಿಜಿಯಲ್ಲಿಯೂ ಗಮನ ಸೆಳೆಯಿತು.

ಭಾರತ ತಂಡದ ಅಭಿಮಾನಿ, ಬೆಂಗಳೂರಿನ ಸುಗುಮಾರ್ ಅವರು ಈ ಪೋಸ್ಟರ್‌ನೊಂದಿಗೆ ಪ್ರೇಕ್ಷಕರ ಗ್ಯಾಲರಿಯಲ್ಲಿ ಸಂಭ್ರಮಿಸಿದ್ದು ಗಮನ ಸೆಳೆಯಿತು. ಅಲ್ಲಿಯ ಕನ್ನಡಿಗರೂ ಅವರೊಂದಿಗೆ ಸೇರಿದ್ದರು. ಪಂದ್ಯ ವೀಕ್ಷಣೆಗೆ 90 ಸಾವಿರಕ್ಕೂ ಹೆಚ್ಚು ಜನರು ಕ್ರೀಡಾಂಗಣದಲ್ಲಿದ್ದರು.



ಐದನೇ ವಿಕೆಟ್ ಜೊತೆಯಾಟ (ಭಾರತ)

ರನ್	ಜೊತೆಯಾಟ	ಎದುರಾಳಿ	ವರ್ಷ
113	ಕೊಹ್ಲಿ–ಹಾರ್ದಿಕ್	ಪಾಕಿಸ್ತಾನ	2022
102	ಯುವರಾಜ್–ಧೋನಿ	ಆಸ್ಟ್ರೇಲಿಯಾ	2013
98	ಮನೀಷ್–ಧೋನಿ	ದ.ಆಫ್ರಿಕಾ	2018

ಟಿ20 ಕ್ರಿಕೆಟ್: ರೋಹಿತ್ ಹಿಂದಿಕ್ಕಿದ ವಿರಾಟ್

ಆಟಗಾರ	ದೇಶ	ರನ್
ವಿರಾಟ್ ಕೊಹ್ಲಿ	ಭಾರತ	3794
ರೋಹಿತ್ ಶರ್ಮಾ	ಭಾರತ	3741
ಮಾರ್ಟಿನ್ ಗಪ್ಟಿಲ್	ನ್ಯೂಜಿಲೆಂಡ್	3531

‘ಭಾರತದ ಶ್ರೇಷ್ಠ ಟಿ20 ಇನಿಂಗ್ಸ್’

ಮೆಲ್ಬರ್ನ್ (ಪಿಟಿಐ): ‘ಪಾಕಿಸ್ತಾನ ಎದುರಿನ ಪಂದ್ಯದಲ್ಲಿ ವಿರಾಟ್ ಕೊಹ್ಲಿ ಅವರ ಆಟ ಭಾರತದ ಟಿ20 ಕ್ರಿಕೆಟ್ ಇತಿಹಾಸದಲ್ಲೇ ಅತ್ಯಂತ ಶ್ರೇಷ್ಠ ಇನಿಂಗ್ಸ್’ ಎಂದು ನಾಯಕ ರೋಹಿತ್ ಶರ್ಮಾ ಬಣ್ಣಿಸಿದ್ದಾರೆ.

‘ಹೌದು. ಇದು ವಿರಾಟ್ ಅವರ ಅತ್ಯುತ್ತಮ ಟಿ20 ಇನಿಂಗ್ಸ್ ಎಂಬುದರಲ್ಲಿ ಅನುಮಾನವಿಲ್ಲ. ಆದರೆ ಒತ್ತಡದ ಪರಿಸ್ಥಿತಿಯಲ್ಲಿ ಉತ್ತಮವಾಗಿ ಆಡಿ ತಂಡವನ್ನು ಗೆಲುವಿನತ್ತ ಕೊಂಡೊಯ್ದ ರೀತಿಯನ್ನು ನೋಡಿದರೆ ಇದು ಭಾರತದ ಅತ್ಯುತ್ತಮ ಇನಿಂಗ್ಸ್‌ಗಳಲ್ಲಿ ಒಂದು’ ಎಂದು ಪಂದ್ಯದ ಬಳಿಕ ಸುದ್ದಿಗೋಷ್ಠಿಯಲ್ಲಿ ರೋಹಿತ್ ತಿಳಿಸಿದರು.

‘13ನೇ ಓವರ್‌ವರೆಗೂ ಗೆಲುವಿನ ವಿಶ್ವಾಸವಿರಲಿಲ್ಲ. ಪ್ರತಿ ಓವರ್ ಕಳೆದಂತೆ ರನ್ ರೇಟ್ ಹೆಚ್ಚುತ್ತಲೇ ಇತ್ತು. ಅಂತಹ ಪರಿಸ್ಥಿತಿಯಿಂದ ತಂಡವನ್ನು ಜಯದತ್ತ ಕೊಂಡೊಯ್ಯುವುದು ಸುಲಭವಲ್ಲ’ ಎಂದರು.

ಡಿಜಿಟಲ್ ವೇದಿಕೆ 1.8 ಕೋಟಿ ಮಂದಿ ವೀಕ್ಷಣೆ

ನವದೆಹಲಿ (ಪಿಟಿಐ): ಭಾರತ–ಪಾಕಿಸ್ತಾನ ನಡುವಣ ಟಿ20 ವಿಶ್ವಕಪ್ ಟೂರ್ನಿಯ ಪಂದ್ಯದ ವೀಕ್ಷಣೆಯು ಡಿಜಿಟಲ್ ವೇದಿಕೆಯಲ್ಲಿ ಹೊಸ ದಾಖಲೆ ಬರೆದಿದೆ.

‘ಡಿಸ್ನಿ ಪ್ಲಸ್ ಹಾಟ್‌ಸ್ಟಾರ್’ನಲ್ಲಿ ಪಂದ್ಯವನ್ನು 1.8 ಕೋಟಿಗೂ ಅಧಿಕ ಮಂದಿ ವೀಕ್ಷಿಸಿದ್ದು, ಹೊಸ ದಾಖಲೆಯಾಗಿದೆ. ಇವೆರಡು ತಂಡಗಳು ಏಷ್ಯಾಕಪ್‌ನಲ್ಲಿ ಆಡಿದ್ದಾಗ 1.4 ಕೋಟಿ ಮಂದಿ ವೀಕ್ಷಿಸಿದ್ದು, ಇದುವರೆಗಿನ ದಾಖಲೆಯಾಗಿತ್ತು’ ಎಂದು ಮೂಲಗಳು ತಿಳಿಸಿವೆ. ಇದಲ್ಲದೆ ಮಲ್ಟಿಪ್ಲೆಕ್ಸ್ ಚಿತ್ರಮಂದಿರ ಪಿವಿಆರ್ ಮತ್ತು ಐನಾಕ್ಸ್‌ನಲ್ಲಿ ಸಾವಿರಾರು ಮಂದಿ ವೀಕ್ಷಿಸಿದ್ದಾರೆ.

ದಕ್ಷಿಣ ಆಫ್ರಿಕಾಕ್ಕೆ ಜಿಂಬಾಬ್ವೆ ಸವಾಲು

ಹೋಬರ್ಟ್ (ಎಎಫ್‌ಪಿ): ದಕ್ಷಿಣ ಆಫ್ರಿಕಾ ತಂಡ ಏಕದಿನ ಅಥವಾ ಟಿ20 ವಿಶ್ವಕಪ್ ಟೂರ್ನಿಯನ್ನು ಒಮ್ಮೆಯೂ ಗೆದ್ದುಕೊಂಡಿಲ್ಲ. ಮಾತ್ರವಲ್ಲ, ಫೈನಲ್‌ಗೂ ಪ್ರವೇಶಿಸಿಲ್ಲ. ತೆಂಬಾ ಬವುಮಾ ನೇತೃತ್ವದ ತಂಡ ‘ಚುಟುಕು ಕ್ರಿಕೆಟ್ ಹಬ್ಬ’ದಲ್ಲಿ ಸೋಮ ವಾರ ಕಣಕ್ಕಿಳಿಯಲಿದೆ. ಹೋಬರ್ಟ್‌ನಲ್ಲಿ ನಡೆಯಲಿರುವ ಪಂದ್ಯದಲ್ಲಿ ದಕ್ಷಿಣ ಆಫ್ರಿಕಾ ತಂಡ, ಜಿಂಬಾಬ್ವೆ ಜತೆ ಪೈಪೋಟಿ ನಡೆಸಲಿದೆ.

ಇಂದಿನ ಪಂದ್ಯಗಳು
ಬಾಂಗ್ಲಾದೇಶ– ನೆದರ್ಲೆಂಡ್ಸ್
ಆರಂಭ: ಬೆಳಿಗ್ಗೆ 9.30
ದಕ್ಷಿಣ ಆಫ್ರಿಕಾ– ಜಿಂಬಾಬ್ವೆ
ಆರಂಭ: ಮಧ್ಯಾಹ್ನ 1.30
ನೇರಪ್ರಸಾರ: ಸ್ಟಾರ್‌ಸ್ಪೋರ್ಟ್ಸ್ ನೆಟ್‌ವರ್ಕ್, ಡಿಸ್ನಿ ಪ್ಲಸ್ ಹಾಟ್ ಸ್ಟಾರ್

ಸಂಕ್ಷಿಪ್ತ ಸುದ್ದಿ

ಬಂಗಾಳ ಅಧ್ಯಕ್ಷ ಸ್ಥಾನ: ಹಿಂದೆ ಸರಿದ ಗಂಗೂಲಿ


ಸೌರವ್ ಗಂಗೂಲಿ

ಕೋಲ್ಕತ್ತ (ಪಿಟಿಐ): ಬಿಸಿಸಿಐ ಮಾಜಿ ಅಧ್ಯಕ್ಷ ಸೌರವ್ ಗಂಗೂಲಿ ಅವರು ಬಂಗಾಳ ಕ್ರಿಕೆಟ್ ಸಂಸ್ಥೆ (ಸಿಎಬಿ) ಅಧ್ಯಕ್ಷ ಸ್ಥಾನವನ್ನು ಮತ್ತೆ ವಹಿಸಿಕೊಳ್ಳದಿರಲು ನಿರ್ಧರಿಸಿದ್ದಾರೆ. ಅವರ ಅಣ್ಣ ಸ್ನೇಹಶಿಶ್ ಗಂಗೂಲಿ, ಸಿಎಬಿಯ ನೂತನ ಅಧ್ಯಕ್ಷರಾಗಲಿದ್ದಾರೆ.

ಸಿಎಬಿ ಅಧ್ಯಕ್ಷ ಸ್ಥಾನದ ಚುನಾವಣೆಗೆ ಸ್ಪರ್ಧಿಸುತ್ತೇನೆ ಎಂದು ಕಳೆದ ವಾರ ಹೇಳಿದ್ದ ಗಂಗೂಲಿ, ಇದೀಗ ತಮ್ಮ ನಿರ್ಧಾರ ಬದಲಿಸಿದ್ದಾರೆ.

‘ಅಧ್ಯಕ್ಷ ಸ್ಥಾನಕ್ಕೆ ಚುನಾವಣೆ ನಡೆದರೆ ಮಾತ್ರ ಸ್ಪರ್ಧಿಸುತ್ತೇನೆ ಎಂದಿದ್ದೆ. ಆದರೆ ಅವಿರೋಧ ಆಯ್ಕೆ ನಡೆಯಲಿರುವುದರಿಂದ ಹಿಂದೆ ಸರಿದಿದ್ದೇನೆ’ ಎಂದು ಗಂಗೂಲಿ ಹೇಳಿದರು.

ಸಿಎಬಿ ಸರ್ವ ಸದಸ್ಯರ ಸಭೆ ಅ.31 ರಂದು ನಡೆಯಲಿದ್ದು, ಹಾಲಿ ಕಾರ್ಯದರ್ಶಿಯಾಗಿರುವ ಅಧ್ಯಕ್ಷ ಸ್ಥಾನಕ್ಕೆ ಸ್ನೇಹಶಿಶ್ ಅವಿರೋಧವಾಗಿ ಆಯ್ಕೆಯಾಗಲಿದ್ದಾರೆ. ಅಮಲೇಂದು ಬಿಸ್ವಾಸ್ ಉಪಾಧ್ಯಕ್ಷರಾಗಲಿದ್ದು, ನರೇಶ್ ಓಜಾ ಕಾರ್ಯದರ್ಶಿಯ ಹುದ್ದೆ ವಹಿಸಲಿದ್ದಾರೆ.

ಕ್ರಿಕೆಟ್: ರಾಜ್ಯ ತಂಡ ಪ್ರಕಟ

ಬೆಂಗಳೂರು: ಬಿಸಿಸಿಐ 15 ವರ್ಷದೊಳಗಿನ ಬಾಲಕಿಯರ ಏಕದಿನ ಕ್ರಿಕೆಟ್ ಟೂರ್ನಿಗೆ ಕರ್ನಾಟಕದ 25 ಸದಸ್ಯರ ಸಂಭವನೀಯರ ತಂಡವನ್ನು ಕರ್ನಾಟಕ ರಾಜ್ಯ ಕ್ರಿಕೆಟ್ ಸಂಸ್ಥೆ ಪ್ರಕಟಿಸಿದೆ.

ತಂಡ ಹೀಗಿದೆ: ವಂದಿತಾ ಕೆ.ರಾವ್, ಸಿ.ಯು.ಇಂಚರಾ, ರಿಮ್ಜಿಮ್ ಶುಕ್ಲಾ, ವೇದಾ ವರ್ಷಿಣಿ, ಪ್ರಜ್ಞಾ ಕಿಶೋರ್, ಸೀಮಾ ಹಾವೇರಿ, ಶ್ರೇಯಾ ಚೌಹಾಣ್, ಭವಿಕಾ ರೆಡ್ಡಿ, ಶ್ರೇಯಾ ಪೋತೆ, ಕೆ.ಸ್ವಾತಿ, ಬಿ.ಎಚ್.ವೈಷ್ಣವಿ, ಕೆ.ವಿ.ದಿಶಾ, ಆರ್.ಹರ್ಷಿತಾ, ಎಂ.ರಕ್ಷಿತಾ, ಲಾವಣ್ಯ ಮುನಿ ರಾಜ್, ಸಾಕ್ಷಿ ಮನವಲ್ಲಿ, ಲಾವಣ್ಯ ಚಲನ, ಸಿ.ಡಿ.ದೀಕ್ಷಾ, ಎ.ನಿಸರ್ಗ, ಆಕಾಂಕ್ಷಾ ಭಟ್, ಲಕ್ಷ್ಮಿ ಲಕ್ಕೊಂಡ್, ಎಸ್.ಪ್ರಾರ್ಥನಾ, ತನಿಷ್ಕಾ ನವೀನ್, ಪ್ರಿಯಾ ಚೌಹಾಣ್, ಸೈನಾ ಕಪೂರ್.

ಹಾಕಿ: ಭಾರತ ತಂಡಕ್ಕೆ ನಿರಾಸೆ

ಜೊಹರ್, ಮಲೇಷ್ಯಾ (ಪಿಟಿಐ): ಭಾರತ ಜೂನಿಯರ್ ಪುರುಷರ ತಂಡ ಸುಲ್ತಾನ್ ಜೊಹರ್ ಕಪ್ ಹಾಕಿ ಟೂರ್ನಿಯಲ್ಲಿ 4–5 ಗೋಲುಗಳಿಂದ ದಕ್ಷಿಣ ಆಫ್ರಿಕಾ ಎದುರು ಸೋತಿತು.

ಭಾನುವಾರ ನಡೆದ ಪಂದ್ಯದಲ್ಲಿ ಮರ್ವಿನ್ ಸಿಮೊನ್ಸ್ (7ನೇ ನಿ.), ಫವಾಜ್ ಖಾದರ್ (34), ಸೆಂಜ್‌ವೆಸ್ಲಿ ಎಂಗುಬನೆ (35) ಮತ್ತು ಕ್ಯಾಮರಾನ್ ಲಿ ಫೋರೆಸ್ಟಿಯರ್ (49 ಮತ್ತು 57ನೇ ನಿ.) ಅವರು ದಕ್ಷಿಣ ಆಫ್ರಿಕಾ ಪರ ಗೋಲು ಗಳಿಸಿದರು.

ಭಾರತ ತಂಡಕ್ಕೆ ಶರ್ದಾ ನಂದ ತಿವಾರಿ (9 ಮತ್ತು 10ನೇ ನಿ.), ನಾಯಕ ಉತ್ತಮ್ ಸಿಂಗ್ (17) ಮತ್ತು ಸುದೀಪ್ ಚಿರ್ಮಾಕೊ (45) ಅವರು ಗೋಲು ತಂದಿತ್ತರು.

ಭಾರತ ತನ್ನ ಮೂರನೇ ಪಂದ್ಯದಲ್ಲಿ ಅ.25 ರಂದು ಜಪಾನ್ ತಂಡವನ್ನು ಎದುರಿಸಲಿದೆ.

ಶೂಟಿಂಗ್: ಭಾರತಕ್ಕೆ ಎರಡು ಪದಕ

ಕೈರೊ (ಪಿಟಿಐ): ಇಲ್ಲಿ ನಡೆಯುತ್ತಿರುವ ಐಎಸ್‌ಎಸ್‌ಎಫ್ ವಿಶ್ವ ಶೂಟಿಂಗ್ ಚಾಂಪಿಯನ್‌ಷಿಪ್‌ನಲ್ಲಿ ಭಾರತ ಮತ್ತೆ ಎರಡು ಪದಕ ಗೆದ್ದುಕೊಂಡಿದೆ.

25 ಮೀ. ಪಿಸ್ತೂಲ್ ವಿಭಾಗದಲ್ಲಿ ರಿಧಮ್ ಸಂಗ್ವಾನ್, ಮನು ಭಾಕರ್ ಮತ್ತು ಅಭಿಜ್ಞಾ ಪಾಟೀಲ್ ಅವರಿದ್ದ ಮಹಿಳಾ ತಂಡವು ಬೆಳ್ಳಿ ಗೆದ್ದರೆ, ಐಶ್ವರ್ಯ ತೋಮರ್, ಸ್ವಪ್ನಿಲ್ ಕುಸಲೆ ಮತ್ತು ನೀರಜ್ ಕುಮಾರ್ ಅವರನ್ನೊಳಗೊಂಡ ಪುರುಷರ ತಂಡವು 50 ಮೀ. ರೈಫಲ್ ತ್ರಿ ಪೋಸಿಷನ್ಸ್‌ನಲ್ಲಿ ಕಂಚು ಗೆದ್ದಿತು.